ಜನಶಕ್ತಿ

ದುಡಿವ ಜನರ ಪ್ರಾಣಮಿತ್ರ

ಕನ್ನಡ ವಾರಪತ್ರಿಕೆ

Blog :janashakthi.wordpress.com e-mail : js_weekly@yahoo.com

ಸಂಪುಟ 8 ಸಂಚಿಕೆ 46

ನವೆಂಬರ್ 16, 2014

ಪುಟ 16 ರೂ. 10/-



ಸೀಳು ನಾಲಿಗೆಯ ರಾಜಕೀಯ : ಬಿಜೆಪಿಯ ಚುನಾವಣಾ ಕಾರ್ಯತಂತ್ರ





ಮಹಾರಾಷ್ಟ್ರ ಚುನಾವಣಾ ಫಲಿತಾಂಶ : ಒಂದು ಅವಲೋಕನ

ತೀರ್ಥಹಳ್ಳಿ : ಶಾಂತಿ ಕದಡಲೆತ್ನಿಸುತ್ತಿರುವ ಶಕ್ತಿಗಳಿಗೆ ಕಡಿವಾಣ ಹಾಕಿ



ಕರ್ನಾಟಕದಲ್ಲಿ ಸ್ವಾತಂತ್ರ್ಯ ಚಳುವಳಿಯ ಕೆಲವು ನೆನಪುಗಳು



ಅತಿಥಿ ಉಪನ್ಯಾಸಕರ ಸಮಸ್ಯೆ : ಶಾಸಕರ ನಿವಾಸದ ಎದುರು ಪ್ರತಿಭಟನೆ

ಬೆಳಗಾವಿ ಅಧಿವೇಶನದಲ್ಲಿ 'ಅತಿಥಿ ಉಪನ್ಯಾಸಕ'ರ ಸಮಸ್ಯೆ ಚರ್ಚೆಗೆ ಒತ್ತಾಯ ರಾಜ್ಯಾದ್ಯಂತ ಶಾಸಕರ ನಿವಾಸದ ಎದುರು ಪ್ರತಿಭಟನೆ

ಕರ್ನಾಟಕ ರಾಜ್ಯದಲ್ಲಿ ಪ್ರಸಕ್ತ ಶೈಕ್ಷಣಿಕ ವರ್ಷದಲ್ಲಿ 400ಕ್ಕಿಂತ ಹೆಚ್ಚು ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಿವೆ. ಈ ಕಾಲೇಜುಗಳಲ್ಲಿ ಸುಮಾರು 4 ಲಕ್ಷಕ್ಕಿಂತ ಹೆಚ್ಚು ಬಡ-ಮಧ್ಯಮ ವರ್ಗದ ಮತ್ತು ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳು ಪದವಿ ವಿದ್ಯಾಭ್ಯಾಸ ಮಾಡುತ್ತಿದ್ದಾರೆ. ಈ ಕಾಲೇಜುಗಳಲ್ಲಿ ಕೇವಲ 3,800 ಖಾಯಂ ಉಪನ್ಯಾಸಕರಿದ್ದಾರೆ. 11,680 ಅತಿಥಿ ಉಪನ್ಯಾಸಕರು ಪದವಿ ಕಾಲೇಜುಗಳಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಹೀಗಾಗಿ ಪದವಿ ಶಿಕ್ಷಣದ ಕಾಲೇಜುಗಳು ನಡೆಯುತ್ತಿರುವುದೇ ಪ್ರಧಾನವಾಗಿ ಅತಿಥಿ ಉಪನ್ಯಾಸಕರಿಂದ ಎಂಬಂತಾಗಿದೆ. ಈ ಅತಿಥಿ ಉಪನ್ಯಾಸಕರಲ್ಲಿ ಬಹುತೇಕರು 10-15 ವರ್ಷಗಳಿಂದ ಸೇವೆ ಸಲ್ಲಿಸುತ್ತಾ ಬಂದಿರುವವರಾಗಿದ್ದಾರೆ. ಇವರನ್ನು ಸೇವೆಯಲ್ಲಿ ವಿಲೀನಗೊಳಿಸುವ ಬದಲಿಗೆ ಹೊಸದಾಗಿ ನೇಮಕಾತಿ ಅದೇಶವನ್ನು ಹೊರಡಿಸಲು ರಾಜ್ಯ ಸರ್ಕಾರ ಮುಂದಾಗಿದೆ. ಹಾಗಾದಲ್ಲಿ ವಯೋಮಿತಿ





ಮೀರಿರುವ ಮತ್ತು ಮೀರುತ್ತಿರುವವರು ಹಾಗೂ ಈಗ ಅತಿಥಿ ಉಪನ್ಯಾಸಕರಾಗಿ ಸೇವೆ ಸಲ್ಲಿಸುತ್ತಿರುವವರಲ್ಲಿ ಹೆಚ್ಚಿನವರು ಕೆಲಸ ಕಳೆದುಕೊಂಡು ಬೀದಿಪಾಲಾಗಲಿದ್ದಾರೆ.

ಬೆಂಗಳೂರಿನಲ್ಲಿ ಅನಿಧಿಷ್ಟಾವಧಿ ಧರಣ

ಅಕ್ಟೋಬರ್ 15, 2014 ರಂದು ಅತಿಥಿ ಉಪನ್ಯಾಸಕರು ತಮ್ಮ ಬೇಡಿಕೆಗಳಿಗಾಗಿ 'ಮುಖ್ಯಮಂತ್ರಿಗಳ ಮನೆ ಮುಂದೆ ಅನಿಧಿಷ್ಟಾವಧಿ ಧರಣ' ಕಾರ್ಯಕ್ರಮದ ಅಂಗವಾಗಿ ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದಲ್ಲಿ ಧರಣ ಆರಂಭಿಸಿದರು. ಅಕ್ಟೋಬರ್ 15 ರಂದು ರಾತ್ರಿ ಪೋಲೀಸರು ಉಪನ್ಯಾಸಕರನ್ನು ಬಂಧಿಸಿದರು. ಆದರೂ ಅಕ್ಟೋಬರ್ 15, 16, 17 ರಂದು ಸಾಮೂಹಿಕ ಧರಣದ ಮೂಲಕ ಪ್ರತಿಭಟನೆ ನಡೆಯಿತು. ರಾಜ್ಯದ ನಾನಾ ಜಿಲ್ಲೆಗಳ ಉಪನ್ಯಾಸಕರು ತರಗತಿಗಳನ್ನು ಬಹಿಷ್ಕರಿಸಿ ಚಳುವಳಿಯಲ್ಲಿ ಭಾಗವಹಿಸಿದ್ದರು.


ಕರ್ನಾಟಕ ರಾಜ್ಯ ಸರಕಾರಿ ಪ್ರಥಮ ದರ್ಜೆ ಕಾಲೇಜುಗಳ ಅತಿಥಿ ಉಪನ್ಯಾಸಕರ ಸಂಘದ ಗೌರವ ಅಧ್ಯಕ್ಷರು ಹಾಗೂ ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್ (ಡಿವೈಎಫ್ಐ)ನ ರಾಜ್ಯ ಕಾರ್ಯದರ್ಶಿ ಬಿ. ರಾಜಶೇಖರಮೂರ್ತಿ ಉಪನ್ಯಾಸಕರ ಸಂಘಟನೆಯ ರಾಜ್ಯ ಅ ಧ್ಯಕ್ಷರಾದ ಶ್ರೀನಿವಾಸಾಚಾರ್.ಎನ್, ರಾಜ್ಯ ಸಂಘಟನಾ ಕಾರ್ಯದರ್ಶಿ ಫೈಯಾಜ್ ಉಲ್ಲಾ, ಬೆಂಗಳೂರು ಗ್ರಾಮಾಂತರ ಅ ಧ್ಯಕ್ಷರಾದ ಆದಿನಾರಾಯಣ, ಬೆಂಗಳೂರು ನಗರ ಜಿಲ್ಲಾ ಮುಖಂಡರಾದ ಗುಡಿಬಂಡೆ ಗಣೇಶ್, ಬೆಂಗಳೂರು ಜಿಲ್ಲಾ ಮುಖಂಡರಾದ ಮಂಜುಳ ಎಂ., ಶಿಲ್ಪ ವಿ, ಚಿಕ್ಕಬಳ್ಳಾಪುರ ಜಿಲ್ಲೆ ಸಮಿತಿ ಅಧ್ಯಕ್ಷರಾದ ಹೇಮಲತ ಜಯಣ್ಣ ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್ಎಫ್ಐ) ಮುಖಂಡರು ಹೋರಾಟದ ನೇತೃತ್ವ ವಹಿಸಿದ್ದರು.

ಮುಂದಿನ ಹಂತದ ಹೋರಾಟ

ರಾಜ್ಯದ ವಿಧಾನಸಭಾ ಸದಸ್ಯರುಗಳು ತಮ್ಮ ಕ್ಷೇತ್ರದ 'ಪ್ರಥಮ ದರ್ಜೆ ಕಾಲೇಜುಗಳ ಅಭಿವೃದ್ಧಿ ಸಮಿತಿ' ಅಧ್ಯಕ್ಷರುಗಳಾಗಿದ್ದು, ಬಡ ವಿದ್ಯಾರ್ಥಿಗಳ ಭವಿಷ್ಯ ರೂಪಿಸುತ್ತಿರುವ ಅತಿಥಿ ಉಪನ್ಯಾಸಕರ ಸಮಸ್ಯೆಗಳ ಪರಿಹಾರಕ್ಕೆ ಮುಂದಾಗಬೇಕು ಎಂದು ರಾಜ್ಯದಲ್ಲಿನ 224 ವಿಧಾನಸಭಾ ಸದಸ್ಯರನ್ನು ಕರ್ನಾಟಕ ರಾಜ್ಯ ಸರಕಾರಿ ಪ್ರಥಮ ದರ್ಜೆ ಕಾಲೇಜುಗಳ ಅತಿಥಿ ಉಪನ್ಯಾಸಕರ ಸಂಘ, ಡಿವೈಎಫ್ಐ, ಎಸ್ಎಫ್ಐ ಕರ್ನಾಟಕ ರಾಜ್ಯ ಸಮಿತಿಗಳು ಒತ್ತಾಯಿಸಿವೆ. ಈ ಹಿನ್ನೆಲೆಯಲ್ಲಿ, ಬೆಳಗಾವಿಯಲ್ಲಿ ನಡೆಯಲಿರುವ ವಿಧಾನಸಭಾ ಅಧಿವೇಶನದಲ್ಲಿ ಅತಿಥಿ ಉಪನ್ಯಾಸಕರ ಬೇಡಿಕೆಗಳ ಬಗ್ಗೆ ಚರ್ಚಿಸಿ, ಸಮಸ್ಯೆಗಳ ಪರಿಹಾರಕ್ಕಾಗಿ ಶಾಸಕರು ರಾಜ್ಯ ಸರಕಾರವನ್ನು ಒತ್ತಾಯಿಸಬೇಕೆಂದು ಆಗ್ರಹಿಸಿ ರಾಜ್ಯಾದ್ಯಂತ ಶಾಸಕರ ನಿವಾಸದ ಎದುರು ನವೆಂಬರ್ 10, 2014 ರಂದು ಪ್ರತಿಭಟನೆಯನ್ನು ಹಮ್ಮಿಕೊಂಡಿವೆ.

ಪ್ರಥಮ ದರ್ಜೆ ಕಾಲೇಜುಗಳ 'ಅಭಿವೃದ್ಧಿ ಸಮಿತಿ'ಯ ಅಧ್ಯಕ್ಷರುಗಳಾದ ಬಹಳಷ್ಟು ಶಾಸಕರುಗಳು ಇಂತಹ ಗಂಭೀರ ವಿಷಯಗಳ ಬಗ್ಗೆ ಅರಿವೇ ಇಲ್ಲದಂತೆ ಬೇಜವಾಬ್ದಾರಿಗಳಾಗಿ ವರ್ತಿಸುತ್ತಿದ್ದಾರೆ. ಕೇವಲ ವರ್ಷಕ್ಕೊಮ್ಮೆ ಕೆಲ ಶಾಸಕರು 'ಕಾಲೇಜು ದಿನ'ದ ಕಾರ್ಯಕ್ರಮಗಳಿಗೆ ಹೋಗುವುದು ಬಿಟ್ಟರೆ, ಕಾಲೇಜುಗಳ ಇತ-ರೆ ವಿಷಯಗಳ ಬಗ್ಗೆ ಹೆಚ್ಚಿನ ಶಾಸಕರು ಗಮನ ಹರಿಸುತ್ತಿಲ್ಲ ಎಂದಿರುವ ಸಂಘಟನೆಗಳು ಶಾಸಕರುಗಳು ಅತಿಥಿ ಉಪನ್ಯಾಸಕರನ್ನು ವಿಲೀನಗೊಳಿಸಲು ಕಾನೂನಾತ್ಮಕ ಶಿಫಾರಸ್ಸುಗಳಿಗಾಗಿ ತಜ್ಞರ ಸಮಿತಿಯನ್ನು ರಚಿಸುವಂತೆ ರಾಜ್ಯ ಸರ್ಕಾರದ ಮೇಲೆ ಒತ್ತಡ ಹಾಕಬೇಕೆಂದು ಒತ್ತಾಯಿಸಿವೆ.

ಹೊಸದಾಗಿ ನೇಮಕಾತಿ ಅಧಿಸೂಚನೆ ಹೊರಡಿಸದೆ, ಅತಿಥಿ ಉಪನ್ಯಾಸಕರನ್ನೇ ಸೇವೆಯಲ್ಲಿ ವಿಲೀನಗೊಳಿಸಬೇಕು. 2003ರಲ್ಲಿ ಅರೆಕಾಲಿಕ ಉಪನ್ಯಾಸಕರನ್ನು ನೇಮಕ ಮಾಡಿಕೊಂಡಂತೆ ಮತ್ತು ಮೊರಾರ್ಜಿ ದೇಸಾಯಿ ಶಾಲೆಗಳ ಶಿಕ್ಷಕರ ನೇಮಕಾತಿಯಲ್ಲಿ ಶೇ. 5 ರಿಂದ 40ಗರಿಷ್ಟ ಅಂಕ ನೀಡಿ ನೇಮಕಾತಿ ಮಾಡಿದಂತೆ, ಪದವಿ ಪೂರ್ವ ಶಿಕ್ಷಣ ಇಲಾಖೆಯ ಜೆ.ಒ.ಸಿ. ಶಿಕ್ಷಣ ವಿಭಾಗದಲ್ಲಿ ಕೆಲಸ ನಿರ್ವಹಿಸುತ್ತಿದ್ದ ಭೋದಕ ಮತ್ತು ಭೋದ-ಕೇತರ ಸಿಬ್ಬಂದಿಯನ್ನು ವಿಲೀನಗೊಳಿಸಿದಂತೆ ಈ ವಿಷಯದಲ್ಲಿಯೂ ಕ್ರಮವಹಿಸಬೇಕು. ಅದಕ್ಕಾಗಿ 'ತಜ್ಞರ ಸಮಿತಿ'ಯನ್ನು ಕೂಡಲೇ ರಚಿಸಬೇಕು. ಪ್ರಸಕ್ತ ಶೈಕ್ಷಣಿಕ ವರ್ಷದಲ್ಲಿ ಅತಿಥಿ ಉಪನ್ಯಾಸಕರಾಗಿ ಸೇವೆ ಸಲ್ಲಿಸುತ್ತಿರುವ ಎಲ್ಲರನ್ನು ಮುಂಬರುವ ಎಲ್ಲಾ ಶೈಕ್ಷಣಿಕ ವರ್ಷಗಳಿಗೂ ಮುಂದುವರೆಸಿ, ಪಿಎಚ್.ಡಿ, ನೆಟ್, ಸ್ಲೆಟ್, ಎಂ.ಫಿಲ್. ಎಂದು ವಿಂಗಡಿಸದೆ ಎಲ್ಲರಿಗೂ ಸಮಾನವಾಗಿ ಮಾಸಿಕ 25,000-00 ರೂ.ಗಳಿಗೆ ವೇತನ ಹೆಚ್ಚಿಸಬೇಕು. ಪ್ರತಿ ತಿಂಗಳು ಮೊದಲ ವಾರದಲ್ಲೇ, ವರ್ಷದ 12 ತಿಂಗಳು ಕೂಡ ವೇತನ ನೀಡಬೇಕು. ಮಹಿಳಾ ಅತಿಥಿ ಉಪನ್ಯಾಸಕಿಯರಿಗೆ ವೇತನ ಸಹಿತ ಮೂರು ತಿಂಗಳು ಹೆರಿಗೆ ರಜೆ ನೀಡಬೇಕು ಮುಂತಾದ ಬೇಡಿಕೆಗಳನ್ನು ಶಾಸಕರು ಮನಗಂಡು ಅವುಗಳ ಈಡೇರಿಕೆಗಾಗಿ ರಾಜ್ಯ ಸರಕಾರವನ್ನು ಒತ್ತಾಯಿಸಬೇಕೆಂದು ಕರ್ನಾಟಕ ರಾಜ್ಯ ಪ್ರಥಮ ದರ್ಜೆ ಕಾಲೇಜು ಅತಿಥಿ ಉಪನ್ಯಾಸಕರ ಸಂಘ ಮತ್ತು ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್ (ಡಿವೈಎಫ್ಐ) ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್ಎಫ್ಐ) ಕರ್ನಾಕ ರಾಜ್ಯ ಸಮಿತಿಗಳು 224 ವಿಧಾನಸಭಾ ಸದಸ್ಯರ ನಿವಾಸದ ಎದುರು ಪ್ರತಿಭಟನೆ ನಡೆಸಲು ಯೋಜಿಸಿವೆ. ●



'ಜನಶಕ್ತಿ' ಚಂದಾ ನೊಂದಣಿ-ಪ್ರಸಾರದಲ್ಲಿನ ತೊಂದರೆಗಳು-ಹಣಕಾಸು ಪಾವತಿ ಇತ್ಯಾದಿಗಳ ಸಲುವಾಗಿ ಈ ಕೆಳಗಿನ ಸೂಚನೆಗಳನ್ನು ಗಮನಿಸಿ

'ಜನಶಕ್ತಿ ಕನ್ನಡ ವಾರ ಪತ್ರಿಕೆ'ಯ ಆಡಳಿತ ಮತ್ತು ಪ್ರಸಾರ ನಿರ್ವಹಣೆಯ ಜವಾಬ್ದಾರಿ ಬದಲಾವಣೆಯಾಗಿ ಈಗಾಗಲೇ ಬಹಳ ದಿನಗಳಾಗಿವೆ. ಆದರೂ ಜನಶಕ್ತಿಯ ನಿರಂತರ ಓದುಗರಾದ ಹಲವರು ಈಗಲೂ ಜನಶಕ್ತಿಯ ಚಂದಾ ನೀಡಿಕೆ, ಹಣಕಾಸು ಇತ್ಯಾದಿ ವಿಷಯಗಳಿಗೆ ಸಂಬಂಧಿಸಿ ಜನಶಕ್ತಿಯ ಸಂಪಾದಕೀಯ ವಿಭಾಗದ ಸಂಗಾತಿಗಳನ್ನು ಸಂಪರ್ಕಿಸುವುದು, ಸಂಪಾದಕೀಯ ವಿಭಾಗಕ್ಕೆ ಮಾಹಿತಿ ಕಳುಹಿಸುವುದು ನಡದೇ ಇದೇ. ದಯಮಾಡಿ ಸಂಗಾತಿಗಳು ಜನಶಕ್ತಿಯಲ್ಲಿ ಆಗಿರುವ ಬದಲಾವಣೆಯನ್ನು ಗಮನಕ್ಕೆ ತೆಗೆದುಕೊಳ್ಳಬೇಕೆಂದು ವಿನಂತಿ.

ಹೊಸ ಚಂದಾಗಳ ನೀಡಿಕೆ, ವಿಳಾಸ ಬದಲಾವಣೆ, ಪತ್ರಿಕೆ ತಲುಪದಿರುವ ಬಗೆಗಿನ ದೂರುಗಳು, ಏಜೆನ್ಸಿದಾರರ ಪತ್ರಿಕೆಗಳ ಹೆಚ್ಚಳ, ಬಾಕಿ ವಿಚಾರಣೆ, ಹಣ ಪಾವತಿ, ದೂರುಗಳು ಹಾಗೂ ಜಾಹಿರಾತುಗಳಿಗೆ ಸಂಬಂಧಿಸಿದ ಎಲ್ಲ ವ್ಯವಹಾರ, ವಿಚಾರಣೆ ಇತ್ಯಾದಿಗಳನ್ನು ಇನ್ನು ಮುಂದೆ ಈ ಕೆಳಗಿನ ವಿಳಾಸದಲ್ಲೇ ಮಾಡುವುದು. ಕಚೇರಿಯ ನೇರ ಸಂಪರ್ಕವು ಕಛೇರಿ ಕಾರ್ಯ ನಿರ್ವಹಿಸುವ ನಿರ್ದಿಷ್ಟ ಅವಧಿಯಲ್ಲಿ ಮಾತ್ರ ಲಭ್ಯವಿರುತ್ತದೆ ಎಂಬುದನ್ನು ಗಮನಿಸ ತಕ್ಕದ್ದು.

ವಿಳಾಸ :

'ಜನಶಕ್ತಿ' ಆಡಳಿತ ಕಚೇರಿ, c/o. ಕ್ರಿಯಾ ಪ್ರಕಾಶನ, ಸೂರಿ ಭವನ, # 40/5, 2ನೇ 'ಬಿ' ಮೈನ್, 16ನೇ ಕ್ರಾಸ್, ಸಂಪಂಗಿರಾಮನಗರ, ಬೆಂಗಳೂರು-560027, email : janashakthi13.admn@gmail.com
Phone : 22234369

ಹೆಚ್.ಆರ್.ಸವಿತ ರಾಣಿ : 9483966467
ಜಿ.ಚಂದ್ರಶೇಖರ್ : 9448578021 (ಕಾರ್ಯಾಲಯದ ಸಮಯ: ಬೆಳಿಗ್ಗೆ 10.00 ರಿಂದ ಸಂಜೆ 6.00 ಗಂಟೆವರೆಗೆ) ●

ಸಂಪಾದಕೀಯ



ನಿತ್ಯಾನಂದಸ್ವಾಮಿ

ತೀರ್ಥಹಳ್ಳಿ ಶಾಂತಿಯನ್ನು ಕದಡಲೆತ್ನಿಸುತ್ತಿರುವ ಶಕ್ತಿಗಳಿಗೆ ಕಡಿವಾಣ ಹಾಕಿ

ಶಿವಮೊಗ್ಗ ಜಿಲ್ಲೆ ತೀರ್ಥಹಳ್ಳಿಯಲ್ಲಿ 13 ವರ್ಷದ ಹೈಸ್ಕೂಲ್ ವಿದ್ಯಾರ್ಥಿನಿ ನಂದಿತಾ ನಿಗೂಢ ರೀತಿಯಲ್ಲಿ ಸಾವಿಗೀಡಾದ ಪ್ರಕರಣದಿಂದಾಗಿ ತೀರ್ಥಹಳ್ಳಿ ಪಟ್ಟಣದಲ್ಲಿ ಉದ್ವಿಗ್ನ ಪರಿಸ್ಥಿತಿ ನಿರ್ಮಾಣವಾಗಿದ್ದು ಸಹಜವಾಗಿದೆ. ಬಾಲಕಿ ಸಾಯುವ ಮೊದಲು ಅವಳನ್ನು ಅಪಹರಿಸಿ, ವಿಷ ಕುಡಿಸಿ, ಅವಳ ಮೇಲೆ ಅತ್ಯಾಚಾರವೆಸಗುವ ಪ್ರಯತ್ನ ಮಾಡಲಾಗಿತ್ತು ಎಂಬ ಸುದ್ದಿ ಹರಡುತ್ತಿದ್ದಂತೆ ಪಟ್ಟಣದಲ್ಲಿ ನಿಷೇದಾಜ್ಞೆ ಜಾರಿಯಲ್ಲಿದ್ದರೂ ಸಾರ್ವಜನಿಕರು ಬೀದಿಗಿಳಿದು ಪ್ರತಿಭಟಿಸಿದ್ದರು. ರಾಜ್ಯದಲ್ಲಿ ಪುಟ್ಟ ಬಾಲಕಿಯರು, ಯುವತಿಯರು ಹಾಗೂ ಮಹಿಳೆಯರ ಮೇಲೆ ದೌರ್ಜನ್ಯಗಳು, ಅತ್ಯಾಚಾರಗಳು ಹೆಚ್ಚುತ್ತಿದ್ದು ಅಂತಹ ಪ್ರತಿಯೊಂದು ಸಂದರ್ಭದಲ್ಲೂ ಜನತೆ ತೀವ್ರವಾಗಿ ಪ್ರತಿಭಟಿಸುವುದು ಮತ್ತು ತಪ್ಪಿತಸ್ಥರನ್ನು ಪತ್ತೆಹಚ್ಚಿ, ಅವರು ಯಾರೇ ಆಗಿರಲಿ, ಅವರನ್ನು ಕಠಿಣ ಶಿಕ್ಷೆಗೆ ಒಳಪಡಿಸುವಂತೆ ಸರ್ಕಾರವನ್ನು ಒತ್ತಾಯಿಸುವುದು ಸಾರ್ವಜನಿಕರು ತಮ್ಮ ಕರ್ತವ್ಯವೆಂದೇ ಭಾವಿಸುವಂತಾಗಬೇಕು. ಅಪರಾಧಿಗಳು ನನ್ನ ಜಾತಿಯವರೇ ಆಗಿರಲಿ, ನನ್ನ ಕೋಮಿನವರೇ ಆಗಿರಲಿ, ನನ್ನ ರಾಜಕೀಯ ಪಕ್ಷದ ಬೆಂಬಲಿಗರೇ ಆಗಿರಲಿ, ಅವರನ್ನು ಶಿಕ್ಷೆಗೆ ಗುರಿಪಡಿಸುವಂತೆ ಒತ್ತಾಯಿಸುವ ವಿಷಯದಲ್ಲಿ ಹಿಂಜರಿಯುವುದಾಗಲಿ, ಅಪರಾಧಿಗಳನ್ನು ರಕ್ಷಿಸಲು ಮುಂದಾಗುವುದಾಗಲಿ, ಸಲ್ಲದು.

ತೀರ್ಥಹಳ್ಳಿಯಲ್ಲಿ ಈಗ ಏನು ನಡೆಯುತ್ತಿದೆ ಎಂಬುದು ರಾಜ್ಯದ ಜನತೆಗೆ ತಿಳಿಯುತ್ತಿರುವುದು ಮಾಧ್ಯಮಗಳ ಮೂಲಕವಷ್ಟೇ. ಮಾಧ್ಯಮಗಳು ಘಟನೆಗಳನ್ನು ತಿರುಚದೆ ಸತ್ಯವನ್ನು ತಿಳಿಸುವ, ಆದರೆ ಸಮಾಜದ ಸ್ವಾಸ್ಥ್ಯವನ್ನು ಕದಡುವ ಉದ್ದೇಶದ ವರದಿಗಳನ್ನು ಪ್ರಕಟಿಸದಿರುವ ಸಾಮಾಜಿಕ ಹೊಣೆಗಾರಿಕೆಯನ್ನು ನಿರ್ವಹಿಸುವುದೂ ಅತ್ಯಗತ್ಯವಾಗಿದೆ.

ಬಾಲಕಿ ನಂದಿತಾ ಸಾವಿನ ಸುತ್ತ ಹಲವು ಪ್ರಶ್ನೆಗಳು ಎದ್ದು ನಿಂತಿವೆ. ಅದೊಂದು ಕೊಲೆಯೋ? ಅಥವ ಆತ್ಮಹತ್ಯೆಯೋ? ನಂದಿತಾಳ ಮೇಲೆ ಅತ್ಯಾಚಾರ ನಡೆದಿತ್ತೋ ಅಥವ ಇಲ್ಲವೋ? ನಂದಿತಾ ಶಾಲೆಯ ಬ್ಯಾಗ್‌ನಲ್ಲಿ ದೊರೆತಿದೆ ಎನ್ನಲಾದ ಆತ್ಮಹತ್ಯೆ ಚೀಟಿಯನ್ನು ಅವಳೇ ಬರೆದದ್ದೆ ಅಥವ ಬೇರೆ ಯಾರ್‍ಯಾದರೂ ಬರೆದಿದ್ದಿರಬಹುದೇ? ಇಂತಹ ಇನ್ನೂ ಇತರ ಪ್ರಶ್ನೆಗಳಿಗೆ ಪೂರ್ಣಪ್ರಮಾಣದ ತನಿಖೆಯ ನಂತರವಷ್ಟೇ ಉತ್ತರ ದೊರಕಬಹುದು.

ಅಕ್ಟೋಬರ್ 29ರಂದು ಶಾಲೆಗೆ ತೆರಳಲು ಬಾಲಕಿ ನಂದಿತಾ ತೀರ್ಥಹಳ್ಳಿ ಸಮೀಪದ ಬಾಳೆಬೈಲು ಎಂಬಲ್ಲಿನ ಬಸ್ ನಿಲ್ದಾಣದಲ್ಲಿ ನಿಂತಿದ್ದಳು ಎನ್ನಲಾಗಿದೆ. ಆಗ ಕಾರಿನಲ್ಲಿ ಬಂದ ಕೆಲವರು ಆಕೆಯನ್ನು ಅಪಹರಿಸಿದ್ದರು ಎಂದು ಆರೋಪಿಸಲಾಗಿತ್ತು. ನಗರದ ವಿವಿಧೆಡೆ ಅಳವಡಿಸಲಾಗಿರುವ ಸಿಸಿಟಿವಿ ಫೂಟೇಜ್ ಪರಿಶೀಲಿಸಿ ಪೊಲೀಸರು ನೀಡಿದ ಮಾಹಿತಿ ಪ್ರಕಾರ ಅಂದು ನಂದಿತಾ ಕಾರು ಏರಿ ಹೋಗಿಲ್ಲ; ಬದಲಾಗಿ ಆಟೋ ಏರಿ ಹೋಗಿದ್ದಾಳೆ. ಆನಂದಗಿರಿ ಎಂಬಲ್ಲಿ ಅವಳು ಅಸ್ವಸ್ಥ ಸ್ಥಿತಿಯಲ್ಲಿ ಪತ್ತೆಯಾಗಿದ್ದಳು. ಅವಳನ್ನು ಅಪಹರಿಸಿ, ಅತ್ಯಾಚಾರವೆಸಗಿ, ವಿಷ ಪ್ರಾಶನ ಮಾಡಲಾಗಿದೆ ಎಂದು ಅವಳ ಪೋಷಕರು ಆರೋಪಿಸಿದ್ದರು. ಹೊಟ್ಟೆನೋವು, ವಾಂತಿಯಿಂದ ನರಳುತ್ತಿದ್ದ ಅವಳನ್ನು ತೀರ್ಥಹಳ್ಳಿ ಮತ್ತು ಶಿವಮೊಗ್ಗ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಕೊಡಿಸಿ ಅಕ್ಟೋಬರ್ 31ಕ್ಕೆ ಮಣಿಪಾಲ್ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಚಿಕಿತ್ಸೆ ಫಲಿಸದೆ ಅಂದು ಮಧ್ಯಾಹ್ನ ಅವಳು ಅಸುನೀಗಿದ್ದಾಳೆ. ಪ್ರಕರಣದಲ್ಲಿ ಮೂವರು ಆರೋಪಿಗಳ ವಿರುದ್ಧ ಅಪಹರಣ, ಕೊಲೆ ಹಾಗೂ ಪೋಕ್ಸೊ ಕಾಯ್ದೆ ಅಡಿ ದೂರು ದಾಖಲು ಮಾಡಲಾಗಿದೆ. ಪ್ರಕರಣ ಕುರಿತಂತೆ ರಾಜ್ಯ ಸರ್ಕಾರ ಸಿಐಡಿ ತನಿಖೆಗೆ ಆದೇಶ ನೀಡಿದೆ. ಆದರೆ ಬಾಲಕಿಯ ತಂದೆ, ತನಗೆ ಸಿಐಡಿ ತನಿಖೆಯಲ್ಲಿ ವಿಶ್ವಾಸವಿಲ್ಲವೆಂದೂ, ಪ್ರಕರಣವನ್ನು ಸಿಬಿಐ ತನಿಖೆಗೆ ಒಪ್ಪಿಸಬೇಕೆಂದು ಆಗ್ರಹಿಸಿದ್ದಾರೆ.

ಈ ಅಸ್ವಾಭಾವಿಕ ಸಾವಿಗೆ ಕಾರಣರಾದವರನ್ನು ಕೂಡಲೇ ಬಂಧಿಸಿ ಕಾನೂನು ಕ್ರಮಕ್ಕೆ ಒಳಪಡಿಸುವುದು ತುರ್ತಾಗಿ ಆಗಬೇಕಾಗಿದೆ. ಆದರೆ ಪ್ರಕರಣವನ್ನು ಕೋಮು ರಾಜಕಾರಣಕ್ಕೆ ಬಳಸಿಕೊಳ್ಳಲು ಅಲ್ಲಿ ನಡೆದಿರುವ ಮತ್ತು ಇನ್ನೂ ನಡೆಯುತ್ತಿರುವ ಪ್ರಯತ್ನ ಅಷ್ಟೇ ಖಂಡನಾರ್ಹವಾಗಿದೆ. ಆರೋಪಿಗಳು ಅನ್ಯ ಕೋಮಿಗೆ ಸೇರಿದವರು. ನಂದಿತಾಳ ನೆರೆಹೊರೆಯವರು. ನಂದಿತಾ ಜತೆ ಸಲುಗೆಯಿಂದ ಇದ್ದ ಯುವಕ, ತನ್ನ ದೊಡ್ಡಮ್ಮನ ಮಗ ಕಾರ್ ಮೆಕ್ಯಾನಿಕ್ ಸಹಾಯದಿಂದ ಅವಳನ್ನು ಅಪಹರಿಸಿದ್ದ ಎಂದು ಅವಳ ಪೋಷಕರು ದೂರು ನೀಡಿದ್ದರು ಎನ್ನಲಾಗಿದೆ. ಇಷ್ಟಕ್ಕೆ ಕಾದುಕುಳಿತಂತಿರುವ ಸಂಘಪರಿವಾರದ ಸಂಘಟನೆಗಳು ಪಟ್ಟಣದಲ್ಲಿ ಕೋಮು ಗಲಭೆ ಸೃಷ್ಟಿಸಲು ಪ್ರಯತ್ನಪಟ್ಟದ್ದು ಅಕ್ಷಮ್ಯ ಅಪರಾಧವಾಗಿದೆ.

ಬಾಲಕಿಯ ಪೋಷಕರು ಪೊಲೀಸರಿಗೆ ದೂರು ನೀಡುವ ಮುನ್ನವೇ ಸಂಘ ಪರಿವಾರದ ಸಂಘಟನೆಗಳು ಪ್ರತಿಭಟನೆಗೆ ಸಿದ್ಧತೆ ಮಾಡಿಕೊಂಡಿವೆ. ಬಾಲಕಿಯ ಮೃತದೇಹವನ್ನು ಮುಂದಿಟ್ಟು ಪ್ರಚೋದನಾಕಾರಿ ಭಾಷಣ ಮಾಡಿದ್ದಾರೆ. ಅಂತ್ಯಸಂಸ್ಕಾರದ ಮೆರವಣಿಗೆಯನ್ನು ಮಸೀದಿ ಮುಂದೆ ಕೊಂಡೊಯ್ಯಬೇಕೆಂದು ಪಟ್ಟು ಹಿಡಿದಿದ್ದಾರೆ. ನಿರ್ದಿಷ್ಟ ಕಟ್ಟಡಗಳ ಮೇಲೆ ಕಲ್ಲು ತೂರಾಟ ನಡೆಸಿದ್ದಾರೆ. ಪಟ್ಟಣ ಹಾಗೂ ಸುತ್ತಲಿನ ಗ್ರಾಮಗಳಲ್ಲಿ ದಿನಗಟ್ಟಲೆ ಪ್ರಕ್ಷುಬ್ಧ ವಾತಾವರಣವನ್ನು ನಿರ್ಮಿಸಿದ್ದಾರೆ.

ಬಿಜೆಪಿ, ಸಂಘಪರಿವಾರವನ್ನು ಬಲ್ಲವರಿಗೆ ತೀರ್ಥಹಳ್ಳಿ ಬೆಳವಣಿಗೆಗಳು ಆಶ್ಚರ್ಯವನ್ನು ಉಂಟುಮಾಡಲಾರವು. ತಮ್ಮ ರಾಜಕೀಯ ಬೇಳೆ ಬೇಯಿಸಿಕೊಳ್ಳಲು ಅವರು ಜನತೆಯ ನೆಮ್ಮದಿಗೆ ಕಿಚ್ಚು ಹಚ್ಚಲು ಹೇಸುವವರಲ್ಲ. ಧರ್ಮಸ್ಥಳದ ವಿದ್ಯಾರ್ಥಿನಿ ಸೌಜನ್ಯಳನ್ನು ಇದೇ ರೀತಿ ಅತ್ಯಾಚಾರ ಮಾಡಿ ಬರ್ಬರವಾಗಿ ಕೊಲೆಮಾಡಲಾಗಿತ್ತು. ಆದರೆ ಕೊಲೆಯ ಆರೋಪ ಸಂಘ ಪರಿವಾರಕ್ಕೆ ಸೇರಿದವರ ವಿರುದ್ಧ ಬೆರಳು ಮಾಡಿತ್ತು. ಸೌಜನ್ಯಳ ಪೋಷಕರಿಗೆ ನ್ಯಾಯ ಒದಗಿಸಲು ಬೆಳ್ತಂಗಡಿ ತಾಲೂಕಿನ ಜನಸಾಮಾನ್ಯರು ನೇತ್ರಾವತಿ ನದಿಯಲ್ಲಿ ಪ್ರವಾಹ ಬಂದಂತೆ ಎದ್ದು ಬಂದಿದ್ದರು. ಆದರೆ ಸಂಘಪರಿವಾರದ ಎಬಿವಿಪಿಯವರಾಗಲಿ, ಬಜರಂಗದಳದವರಾಗಲಿ, ಬಿಜೆಪಿಯವರಾಗಲಿ ಅತ್ತ ಸುಳಿದಿರಲಿಲ್ಲ. ತೀರ್ಥಹಳ್ಳಿಯ ನಂದಿತಾಳ ಸಾವಿಗೆ ಕಾರಣರಾದವರಾಗಲಿ, ಧರ್ಮಸ್ಥಳದ ಸೌಜನ್ಯಳ ಸಾವಿಗೆ ಕಾರಣರಾದವರಾಗಲಿ ಶಿಕ್ಷೆಯಿಂದ ತಪ್ಪಿಸಿಕೊಳ್ಳಲು ಸಾಧ್ಯವಾಗಬಾರದು. ಆದೇ ಸಮಯದಲ್ಲಿ, ಇಂತಹ ದುಷ್ಕೃತ್ಯಗಳ ರಾಜಕೀಯ ಲಾಭ ಪಡೆಯಲು ಗಲಭೆಗಳನ್ನು ಸೃಷ್ಟಿಸುತ್ತಿರುವ ಶಕ್ತಿಗಳನ್ನು ಕಠಿಣ ಶಿಕ್ಷೆಗೆ ಒಳಪಡಿಸುವುದೂ ಆಗಲೇಬೇಕಾಗಿದೆ.

ರಾಜಕೀಯ ಆರ್ಥಿಕ ಸಾಮಾಜಿಕ ಪರಿಸ್ಥಿತಿಗಳ ಪ್ರಖರ ವಿಶ್ಲೇಷಣೆ ಮೂಡಿಬರಲಿ

ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ 21 ನೇ ಅಖಿಲ ಭಾರತ ಮಹಾಧಿವೇಶನವು 2015 ರ ಏಪ್ರಿಲ್‌ನಲ್ಲಿ ಆಂಧ್ರ ಪ್ರದೇಶ ವಿಶಾಖಪಟ್ಟಣಂದಲ್ಲಿ ನಡೆಯಲಿದೆ ಮತ್ತು ಇದಕ್ಕೆ ಪೂರಕವಾಗಿ ದೇಶದಾದ್ಯಂತ ಕೆಳಗಿನ ಶಾಖೆಗಳ ಹಂತದಿಂದ ಶಾಖಾ ಸಮ್ಮೇಳನಗಳು ನಡೆದು ಜನಚಳುವಳಿಯ ಅನುಭವಗಳನ್ನು ಮೇಲಿನ ಸಮ್ಮೇಳನಗಳಿಗೆ ಹೊತ್ತು ತರುವ ಮಹಾ ಪ್ರಜಾಸತ್ತಾತ್ಮಕ ಪ್ರಕ್ರಿಯೆ ನಡೆಯಲಿದೆ ಎಂಬ ಬಗ್ಗೆ ಪತ್ರಿಕೆಯಲ್ಲಿ ಈಗಾಗಲೇ ಓದಿದ್ದೀರಿ.

ಕರ್ನಾಟಕದ ಹಲವು ಜಿಲ್ಲೆಗಳಲ್ಲಿ ಪ್ರಮುಖ ತಾಲ್ಲೂಕು ಸಮ್ಮೇಳನಗಳು ನಡೆಯುತ್ತಿವೆ. ಪಕ್ಷದ ಜಿಲ್ಲಾ ಸಮ್ಮೇಳನಗಳು ಸಹ ಹತ್ತಿರವಾಗುತ್ತಿವೆ.

ಸಿಪಿಐ(ಎಂ) ಜಿಲ್ಲಾ ಸಮ್ಮೇಳನಗಳು ಎಂದರೆ ಕಳೆದ ಮೂರು ವರ್ಷಗಳಲ್ಲಿ ಜಿಲ್ಲೆಯ ಜಿಲ್ಲೆಯ ಜನರ ಬದುಕಿನಲ್ಲಿ ಆಗಿರುವ ಬದಲಾವಣೆಗಳು, ಜನಗಳು



ಎದುರಿಸುತ್ತಿರುವ ಸಮಸ್ಯೆಗಳು ಇತ್ಯಾದಿಗಳು ಜಿಲ್ಲೆಯ ರಾಜಕೀಯ–ಸಾಮಾಜಿಕ–ಆರ್ಥಿಕ ಕ್ಷೇತ್ರಗಳಲ್ಲಿ ಆಗಿರುವ ಬದಲಾವಣೆಗಳು ಬೆಳವಣಿಗೆಗಳು ಎಲ್ಲವೂ ವಿಮರ್ಶೆಗೆ ಒಳಪಡಲಿವೆ.

ಸಮ್ಮೇಳನವು ಚರ್ಚಿಸುವ ಕರಡು ವರದಿಯು ಈ ಎಲ್ಲ ಅಂಶಗಳನ್ನು ಒಳಗೊಳ್ಳಲಿವೆ. ದುಡಿಯುವ ಜನರ ದೃಷ್ಟಿಯಿಂದ – ಮಾರ್ಕ್ಸ್‌ವಾದಿ ಕಣ್ಣೋಟದಿಂದ ಮಾಡಲಾಗುವ ಈ ವಿಶ್ಲೇಷಣೆಗಳಿಗೆ ವಿಶೇಷವಾದ ಮಹತ್ವವಿದೆ. 'ಜನಶಕ್ತಿ'ಯ ಓದುಗರಿಗೂ ಸಹ ಈ ವಿಶ್ಲೇಷಣೆಯು ಪ್ರಯೋಜನಕಾರಿಯಾದ ಮತ್ತು ಕುತೂಲಕರವಾದ ಅಂಶಗಳನ್ನು ಒಳಗೊಂಡಿರುತ್ತದೆ.

ಈ ಹಿನ್ನೆಲೆಯಲ್ಲಿ ಸಿಪಿಐ(ಎಂ) ಪಕ್ಷದ ಜಿಲ್ಲಾ ಸಮಿತಿಗಳು ತಮ್ಮ ಜಿಲ್ಲೆಯ ಜನಜೀವನದ ಕುರಿತು ಹಾಗೂ ಜಿಲ್ಲೆಯ ರಾಜಕೀಯ–ಸಾಮಾಜಿಕ–ಆರ್ಥಿಕ ಪರಿಸ್ಥಿತಿಗಳ ಕುರಿತು ಸಿದ್ಧಪಡಿಸುವ ಸಮ್ಮೇಳನದ ವರದಿಗಳನ್ನು ಪತ್ರಿಕೆಗೆ ಕಳುಹಿಸಬೇಕಾಗಿ 'ಜನಶಕ್ತಿ'ಯು ಕೋರುತ್ತದೆ.

ಜಿಲ್ಲೆಯ ರೈತರ ಬದುಕು ಸಂಕಷ್ಟಗಳು–ಪ್ರಮುಖ ಬೆಳೆಗಳು, ಮಾರುಕಟ್ಟೆ–ಬೆಂಬಲ ಬೆಲೆಯ ಪ್ರಶ್ನೆ, ಎಪಿಎಂಸಿ ಇತ್ಯಾದಿಗಳ ಕಾರ್ಯ ನಿರ್ವಹಣೆ, ತೊಂದರೆಗಳು, ರೋಗ ಬಾಧೆಗಳು, ಬರ–ಅತಿವೃಷ್ಟಿ, ಕೃಷಿಗೆ ಪೂರಕವಾಗಿ ಸರಕಾರದ ಮಧ್ಯಪ್ರವೇಶ, ಬ್ಯಾಂಕ್ ಸಾಲದ ಲಭ್ಯತೆ, ಖಾಸಗಿ ಲೇವಾದೇವಿದಾರರ ಶೂಲದ ತೀವ್ರತೆ, ಬೀಜ, ರಸಗೊಬ್ಬರ, ಇತ್ಯಾದಿಗಳ ವ್ಯವಸ್ಥೆ, ನೀರಾವರಿ ವ್ಯವಸ್ಥೆ ಸಂಬಂಧಿ ಪ್ರಶ್ನೆಗಳು, ರೈತರ ಭೂಮಿ ಕಿತ್ತುಕೊಳ್ಳುವ ಶಕ್ತಿಗಳ ಆಕ್ರಮಣಗಳು, ರಿಯಲ್ ಎಸ್ಟೇಟ್ ದಂ ಧೆ–

ಪುಟ 4 ಕ್ಕೆ

ಸಿಂಧನೂರು–ಸಾಲಗುಂದಾ ಗ್ರಾಮ:
ನಾಗರೀಕ ಸಮಸ್ಯೆಗಳ ವಿರುದ್ಧ ಪ್ರತಿಭಟನೆ

ಸಿಂಧನೂರು ತಾಲ್ಲೂಕಿನ ಪ್ರಮುಖ ಗ್ರಾಮಗಳಲ್ಲಿ ಒಂದಾದ ಸಾಲಗುಂದಾ ಗ್ರಾಮವು ವಾಣಿಜ್ಯ ವ್ಯವಹಾರಗಳನ್ನು ಹೊಂದಿದ ಗ್ರಾಮವಾಗಿದೆ. ಸಿಂಧನೂರು ಹಾಗೂ ಸಿರುಗುಪ್ಪ ತಾಲ್ಲೂಕಿಗೆ ಸದರಿ ಗ್ರಾಮದ ರೈತರು, ಕಾರ್ಮಿಕರು ನಿರಂತರ ಸಂಪರ್ಕಕ್ಕಾಗಿ ಪ್ರಯಾಣಿಸುತ್ತಾರೆ. ಆದರೆ ಸದರಿ ಗ್ರಾಮದಲ್ಲಿ ಕನಿಷ್ಠ ಮೂಲಭೂತ ಸೌಲಭ್ಯಗಳಿಲ್ಲ. ಗ್ರಾಮದ ನಾಗರಿಕರಿಗೆ ಕುಡಿಯುವ ನೀರು, ವಿದ್ಯುತ್ ಸರಬರಾಜು, ರಸ್ತೆ, ಬಸ್‌ನಿಲ್ದಾಣಗಳ ಸಮರ್ಪಕ ವ್ಯವಸ್ಥೆ ಇಲ್ಲ. ಸರಕಾರಿ ದವಾಖಾನೆಯಲ್ಲಿ ವೈದ್ಯರು ಇಲ್ಲ, ರೈತರು ಬೆಳೆದ ಬೆಳೆಯನ್ನು ಸಿಂಧನೂರು, ಸಿರುಗುಪ್ಪ, ಗಂಗಾವತಿಗೆ ಸಾಗಿಸಲು ರಸ್ತೆಗಳು ಸರಿಯಾಗಿ ಇರುವುದಿಲ್ಲ. ನಿರ್ಮಾಣ ಮಾಡುತ್ತಿರುವ ರಸ್ತೆಗಳು ಕಳಪೆ ಗುಣಮಟ್ಟ ಹೊಂದಿವೆ. ಅಭಿವೃದ್ಧಿಗೆ ಪೂರಕವಾಗಿ ಉಪಯುಕ್ತವಾಗಬೇಕಾಗಿದ್ದ ಗ್ರಾಮೀಣ ಉದ್ಯೋಗಖಾತ್ರಿ ಯೋಜನೆ ಸಮರ್ಪಕವಾಗಿ ಜಾರಿಯಾಗದೇ ತೊಂದರೆ–ಯಾಗಿದೆ. ಗ್ರಾಮದ ಅಭಿವೃದ್ಧಿಗೆ ಪೂರಕವಾಗಿ ಉಪಯುಕ್ತವಾಗಬೇಕಾಗಿದ್ದ ಗ್ರಾಮೀಣ ಉದ್ಯೋಗಖಾತ್ರಿ ಯೋಜನೆ ಸಮರ್ಪಕವಾಗಿ ಜಾರಿಯಾಗದೇ ಗ್ರಾಮದ ಅಭಿವೃದ್ಧಿಗೂ ಹಾಗೂ ಕೂಲಿ ಕಾರ್ಮಿಕರ ಕೆಲಸಕ್ಕೂ ಮಾರಕವಾಗಿದೆ. ಜನಪ್ರತಿನಿಧಿಗಳು ಹಾಗೂ ಪಿಡಿಓ, ತಾಲೂಕಾ ಪಂಚಾಯತ ಕಾರ್ಯನಿರ್ವಾಹಕ ಅಧಿಕಾರಿಗಳ ನಿರ್ಲಕ್ಷ್ಯದಿಂದ ಗ್ರಾಮದ ಅಭಿವೃದ್ಧಿಗೆ ತೀವ್ರ ಹಿನ್ನಡೆಯಾಗುತ್ತಿದೆ.

ಈ ಎಲ್ಲ ಸಮಸ್ಯೆಗಳ ನಿವಾರಣೆಗಾಗಿ ಆಗ್ರಹಿಸಿ ಗ್ರಾಮದ ಜನರ ಈ ಬೇಡಿಕೆಗಳನ್ನು ಒಂದು ತುರ್ತಾಗಿ ಈಡೇರಿಸಲು ಒತ್ತಾಯಿಸಿ ಅಕ್ಟೋಬರ್ 18, 2014 ರಂದು ಸಿಐಟಿಯು ಸಿಂಧನೂರು ತಾಲ್ಲೂಕು ಸಮಿತಿಯ ನೇತೃತ್ವದಲ್ಲಿ ಪ್ರತಿಭಟನಾ ಮೆರವಣಿಗೆ ಮೂಲಕ ಒತ್ತಾಯಿಸಲಾಯಿತು.

ಈ ಪ್ರತಿಭಟನಾ ಕಾರ್ಯಕ್ರಮದಲ್ಲಿ ಸುಮಾರು 150 ಜನ ಹಮಾಲಿ ಕಾರ್ಮಿಕರು, ಕಟ್ಟಡ ಕಾರ್ಮಿಕರು ಹಾಗೂ ಬಿಸಿಯೂಟ ನೌಕರರು ಭಾಗವಹಿಸಿದ್ದರು. ಕಾರ್ಯಕ್ರಮದಲ್ಲಿ ಸಿಐಟಿಯು ಜಿಲ್ಲಾ ಪ್ರಧಾನ ಕಾರ್ಯದರ್ಶಿ ಶೇಕ್ಷಾಖಾದ್ರಿ ಮಾತನಾಡಿ ಗ್ರಾಮದ ಜನರನ್ನು ಕಾಡುತ್ತಿರುವ ಸಮಸ್ಯೆಗಳ ವಿರುದ್ಧ ಹೋರಾಟ ಮಾಡಿದಾಗ ಮಾತ್ರ ಅವು ಬಗೆಹರಿಯಲು ಸಾಧ್ಯ. ಹಾಗಾಗಿ ಗ್ರಾಮದ ಜನರನ್ನು ಸಂಘಟಿಸಿ ಹೋರಾಟಕ್ಕೆ ಅಣಿನೆರೆಸುವ ಜವಾಬ್ದಾರಿ ನಮ್ಮ ಸಂಘಟನೆಯದಾಗಿದೆ. ಮುಂದಿನ ದಿನಗಳಲ್ಲಿ ಎಲ್ಲಾ ಸಮಸ್ಯೆಗಳ ಕುರಿತು ಜನರೊಂದಿಗೆ ಬೆರೆತು ಹೋರಾಟಗಳನ್ನು ತೀವ್ರಗೊಳಿಸುವ ಜರೂರಿದೆ ಎಂದು ಹೇಳಿದರು. ಅಪ್ಪಣ್ಣ ಕಾಂಬ್ಳೆ ಸಿಪಿಐ(ಎಂ) ತಾಲ್ಲೂಕು ಸಮಿತಿ ಸದಸ್ಯರು ಮಾತನಾಡಿ ಜನರ ಹೋರಾಟ ನಿರಂತರವಾಗಿ ನಡೆದಾಗ ಮಾತ್ರ ಅದಕ್ಕೆ ಜಯ ಖಂಡಿತ. ಜನರು ತಮ್ಮ ಸಮಸ್ಯೆಗಳ ಸಲುವಾಗಿ ಹೋರಾಡುವುದು ಮತ್ತು ಸಂಘಟನೆಗಳ ಜೊತೆ ಹೋರಾಟ ಹಮ್ಮಿಕೊಳ್ಳುವುದು ಹೆಚ್ಚುಹೆಚ್ಚು ನಡೆಯಬೇಕು ಎಂದರು. ಸಿಐಟಿಯು ತಾಲ್ಲೂಕು ಅಧ್ಯಕ್ಷೆ ಕೆ. ರೇಣುಕಮ್ಮ ಹಾಗೂ ಕಾರ್ಯದರ್ಶಿ ಯಂಕಪ್ಪ ಕೆಂಗಲ್ ಹೋರಾಟಕ್ಕೆ ಮುಂದಾದ ಜನರನ್ನು ಅಭಿನಂದಿಸಿ ಮುಂದಿನ ದಿನಗಳಲ್ಲಿ ಸಮಸ್ಯೆಗಳ ವಿರುದ್ಧ ಹೋರಾಟ ಅನಿವಾರ್ಯ. ಹಾಗಾಗಿ ದುಡಿಯುವ ಜನರು ಸಿಐಟಿಯು ಸಂಘಟನೆ ಮೂಲಕ ಹೋರಾಟಕ್ಕೆ ಮುಂದಾಗಬೇಕೆಂದು ಕರೆ ನೀಡಿದರು. ಹೋರಾಟದ ನೇತೃತ್ವವನ್ನು ಸಾಲಗುಂದಾ ಸಿಐಟಿಯು ಅಧ್ಯಕ್ಷ ಗೇಸುದರಾಜ ಮಕಾನದಾರ ವಹಿಸಿದ್ದರು. ಹೋರಾಟದಲ್ಲಿ ಗಾದಿಲಿಂಗಪ್ಪ, ಮಕ್ಬೂಲಸಾಬ, ವಲೀಸಾಬ, ಜಂಗ್ಲಿಸಾಬ, ಯ–ಂಕೋಬ ಸಾಲಗುಂದಾ ಗರೀಬಸಾಬ ಕೊಡ್ಲಿ, ದೊಡ್ಡಹುಸೇನಪ್ಪ, ಡಿ.ಪರಿಮಳ, ಕಮಲಿಬಾಬಾ ಶಂಬು, ಹುಸೇನಬಾಷಾ ಹಿರೇಗುಡ್ಡ, ರಾಮಚಂದ್ರ ಹಡಪದ ಇನ್ನಿತರರು ಭಾಗವಹಿಸಿದ್ದರು.

ಹೋರಾಟದ ಫಲ

ಈ ಹೋರಾಟದ ಪರಿಣಾಮವಾಗಿ ಉದ್ಯೋಗಖಾತ್ರಿ ಯೋಜನೆಯಲ್ಲಿ ತಕ್ಷಣ ಕೂಲಿ ಪಾವತಿಗೆ ಅಧಿಕಾರಿಗಳು ಆದೇಶ ನೀಡಿದರು. ಬಸ್ ಸಂಚಾರಕ್ಕೆ ಸ್ಥಳ ಪರಿಶೀಲನೆ ಮಾಡಲು ಅಧಿಕಾರಿಗಳು ಒಪ್ಪಿದರು. ಇನ್ನಿತರ ಬೇಡಿಕೆಗಳ ಬಗ್ಗೆ ಅಧಿಕಾರಿಗಳು ಚರ್ಚೆ ನಡೆಸಿದ್ದಾರೆ.



ಕೆಂಗಲ್ ಗ್ರಾಮದ ಸಮಸ್ಯೆ ಬಗೆಹರಿಸಲು ಒತ್ತಾಯ

ದಢೇಸ್ಗೂರು ಗ್ರಾಮ ಪಂಚಾಯತಿ ವ್ಯಾಪ್ತಿ ಕೆಂಗಲ್ ಗ್ರಾಮದಲ್ಲಿ ಸಾರ್ವಜನಿಕರು ಹಲವಾರು ಸಮಸ್ಯೆಗಳನ್ನು ಎದುರಿಸುತ್ತಿದ್ದು ಈ ಕುರಿತು ಹಲವಾರು ಸಲ ಮನವಿ ಪತ್ರ ಸಲ್ಲಿಸಿದರೂ ಈ ಬಗ್ಗೆ ಸಂಬಂಧಿಸಿದ ಇಲಾಖೆಯವರು ಹಾಗೂ ಅಧಿಕಾರಿಗಳು ಯಾವುದೇ ಕ್ರಮ ಜರುಗಿಸಿರುವುದಿಲ್ಲ.

ಕೆಂಗಲ್ ಗ್ರಾಮದ ಜನರ ದುರ್ಬರ ಬದುಕು

ಇದೇ ಸಿಂಧನೂರು ತಾಲ್ಲೂಕಿನ ಮತ್ತೊಂದು ಗ್ರಾಮವಾದ ಕೆಂಗಲ್ ಗ್ರಾಮದ ಜನರ ಪರಿಸ್ಥಿತಿ ಭಿನ್ನವೇನೂ ಅಲ್ಲ. ಸಂಘಟನೆಯು ಈ ಗ್ರಾಮದ ಜನರ ಸಮಸ್ಯೆಗಳ ಪರಿಹಾರಕ್ಕಾಗಿ ಸಹ ಆಗ್ರಹಿಸಿ ಅಧಿಕಾರಿಗಳನ್ನು ಒತ್ತಾಯಿಸಿತು. ಈ ಸಂಬಂಧ ಮನವಿ ಸಲ್ಲಿಸಲಾಯಿತು.

ಸಮಸ್ಯೆಗಳ ಸರಮಾಲೆ

ಕೆಂಗಲ್ ಗ್ರಾಮದ ಸಮಸ್ಯೆಗಳು ಒಂದೆರೆಡಲ್ಲ. ಸಿರುಗುಪ್ಪಾದಿಂದ ಕೆಂಗಲ್ ಗ್ರಾಮದ ಮೂಲಕ ಮುಕ್ಕುಂದಾ ಗ್ರಾಮಕ್ಕೆ ಬಸ್ ಸಂಚಾರದ ವ್ಯವಸ್ಥೆ ಇಲ್ಲ. ಶಾಲಾ ವಿದ್ಯಾರ್ಥಿಗಳಿಗೆ ಹಾಗೂ ಸಾರ್ವಜನಿಕರಿಗೆ ಅನಾನುಕೂಲವಾಗಿದೆ. ರಾರಾವಿಯಿಂದ ಬೇಲೂರು ರಸ್ತೆ ಕಾಮಗಾರಿ ಬಗ್ಗೆ ಹಲವಾರು ಬಾರಿ ಮನವಿ ಮಾಡಿದರೂ ಅದಕ್ಕೆ ಸಂಬಂಧಿಸಿ ಇಲ್ಲಿಯವರೆಗು ಸಂಬಂಧಿಸಿದ ಅಧಿಕಾರಿಗಳು ಸ್ಪಂದಿಸಿಲ್ಲ. ಇದ–ರಿಂದ ಡಾಂಬರೀಕರಣವಾಗಿದ್ದ ರಸ್ತೆ ಮತ್ತೆ ಹಾಳಾಗಿದೆ. ಇದನ್ನು ತಕ್ಷಣ ದುರಸ್ತಿಗೊಳಿಸಲು ಕ್ರಮ ಜರುಗಿಸಿಲ್ಲ. ಕೆಂಗಲ್ ಗ್ರಾಮಕ್ಕೆ ನ್ಯಾಯಬೆಲೆ ಅಂಗಡಿ ಅಗತ್ಯವಾಗಿದೆ. ಗ್ರಾಮದ ಎಸ್.ಸಿ. ಮತ್ತು ಎಸ್.ಟಿ. ಹಾಗೂ ಇತರೆ ಹಿಂದುಳಿದ ವರ್ಗದವರಿಗೆ ಎಪಿಎಲ್ ಕಾರ್ಡ್‌ಗಳನ್ನು ನೀಡಲಾಗಿದೆ. ಇವುಗಳನ್ನು ರದ್ದುಪಡಿಸಿ ತಕ್ಷಣ ಬಿಪಿಎಲ್ ಕಾರ್ಡ್‌ಗಳು ದೊರಕಬೇಕಾಗಿದೆ. ಹಮಾಲಿ ಕಾರ್ಮಿಕರಿಗೆ ಸರ್ಕಾರದಿಂದ ಬರುವ ಮನೆಗಳನ್ನು ಒದಗಿಸಿಲ್ಲ. ಹಾಗೂ ಹಮಾಲರಿಗೆ ಗುರುತಿನ ಚೀಟಿ ಸಿಕ್ಕಿಲ್ಲ. ಡಿ. ಒಸ್ಸಾಪುರ ಗುಡಿ ಹತ್ತಿರ ಹೈಸ್ಕೂಲ್ ಕಟ್ಟಡ ಮಂಜೂರಿಯಾಗಿದ್ದು, ಜಮೀನು ಸರ್ವೆ ಮಾಡಿ ಸುತ್ತಲೂ ಕಂಪೌಂಡ್ ನಿರ್ಮಿಸದಿದ್ದರೆ ಬೇರೆ ರೀತಿಯ ಸಮಸ್ಯೆ ಎದುರಾಗಬಹುದು. ಗ್ರಾಮದ ಹೊಲಗಳಿಗೆ ಹೋಗುವ ಸಾರ್ವಜನಿಕ ರಸ್ತೆಗಳು ಕೆಟ್ಟಿವೆ. ಅವು ದುರಸ್ತಿಗೊಳ್ಳಬೇಕಾದ ಅಗತ್ಯವಿದೆ. ಹೊಲದ ಬೆಳೆ ನಷ್ಟವಾದ ರೈತರಿಗೆ ಪರಿಹಾರ ಸಿಕ್ಕಿಲ್ಲ. ಹಲವು ವಿದ್ಯುತ್ ಕಂಬಗಳು ಶಿಥಿಲಗೊಂಡು ಅಪಾಯ ಎದುರಾಗಿದೆ. ಅವುಗಳನ್ನು ತೆಗೆದುಹಾಕಿ ಹೊಸ ಕಂಬಗಳನ್ನು ಹಾಗೂ ವೈರ್‌ಲೈನ್‌ಗಳನ್ನು ಕೂಡಲೇ ಹಾಕಬೇಕಾದ ಅಗತ್ಯವಿದೆ. ಸಾರ್ವಜನಿಕರ ಕುಡಿಯುವ ನೀರಿನ ವ್ಯವಸ್ಥೆಗಾಗಿ ಕೆರೆ ನಿರ್ಮಾಣ ಆಗಬೇಕಾಗಿದೆ. ಸರ್ಕಾರಿ ಕಾಲುವೆ ನಂ–36/5ಬಿ ಹಾಗೂ 36/5ಎ ಈ ಎರಡು ಕಾಲುವೆಗಳಲ್ಲಿ ಹೂಳು ತುಂಬಿದೆ. ಈ ಹೂಳನ್ನು ಎತ್ತಿ ಸರಿಪಡಿಸಬೇಕಿದೆ. ಢಢೇಸ್ಗೂರು ಗ್ರಾಮದಲ್ಲಿ ಇರುವ ಸೊಸೈಟಿ ಗೋಡಾನ್ ಪುನಃ ನಿರ್ಮಾಣ ವಾಗಬೇಕಿದೆ. ಕೆಂಗಲ್ ಗ್ರಾಮದ ರೈತರು ಖರೀದಿಸಿದ ಭೂಮಿಗಳ ಮ್ಯುಟೇಷನ್‌ನ್ನು ಆಗುತ್ತಿಲ್ಲ. ಅದನ್ನು ಬೇಗನೆ ಮಾಡಿಕೊಡುವ ಕ್ರಮ ಅಗತ್ಯವಾಗಿದೆ. ಗ್ರಾಮದಲ್ಲಿ ಸುಮಾರು 350 ಬಡವರು, ಕೂಲಿಕಾರರ ಕುಟುಂಬಗಳಿದ್ದು ಅವರಿಗೆ ಸರ್ಕಾರಿ ಜಮೀನು ಸರ್ವೆನಂಬರ್ 35, ಕ್ಷೇತ್ರ 04–04 ಎಕರೆ ಇದೆ. ಅದನ್ನು ಬಡಕುಟುಂಬಗಳಿಗೆ ನಿವೇಶನವಾಗಿ ಹಂಚಬೇಕಾಗಿದೆ. ಗ್ರಾಮದ ಪಕ್ಕದಲ್ಲಿ ತುಂಗಭದ್ರಾ ನದಿ ಹರಿಯುತ್ತಿದ್ದು, ಮಳೆಗಾಲದಲ್ಲಿ ಪ್ರತಿವರ್ಷ ಗ್ರಾಮದ ತಗ್ಗು ಪ್ರದೇಶಕ್ಕೆ ನೀರು ನುಗ್ಗುತ್ತದೆ. ಇದರಿಂದ ಪ್ರತಿವರ್ಷವೂ ಮನೆಗಳಿಗೆ ಹಾನಿಯಾಗುತ್ತಿದೆ. ಅಂತಹ ಭಾಗದ ಜನರಿಗೆ ಸುರಕ್ಷಿತ ಜಾಗದಲ್ಲಿ ಮನೆಗಳನ್ನು ನಿರ್ಮಿಸಿಕೊಡಬೇಕಾದ ಅಗತ್ಯವಿದೆ. ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಲ್ಲಿ ಕೆಲಸ ಮಾಡಿದವರಿಗೆ 4 ತಿಂಗಳಾದರೂ ಕೂಲಿ ಪಾವತಿಸಿರುವುದಿಲ್ಲ. ಇದರ ಬಗ್ಗೆ ಸಿಬ್ಬಂದಿಯಾದ ಶರಣಬಸವರನ್ನು ವಿಚಾರಿಸಲು ಹೋದರೆ ಅವರು ಕೂಲಿಕಾರ್ಮಿಕರನ್ನು ಬೈಯುತ್ತಾರೆ. ಈ ಸಮಸ್ಯೆ ಆದಷ್ಟು ಬೇಗ ತಪ್ಪಬೇಕಿದೆ. ಮನವಿ ಪತ್ರದಲ್ಲಿ ಈ ಸಮಸ್ಯೆಗಳನ್ನು ವಿವರಿಸಿ ಕ್ರಮಕ್ಕೆ ಆಗ್ರಹಿಸಲಾಗಿದೆ.

ವರದಿ – ಯಂಕಪ್ಪ ಕೆಂಗಲ್

ರಾಜಕೀಯ ಆರ್ಥಿಕ ಸಾಮಾಜಿಕ......

ಪುಟ 3 ರಿಂದ

ಯ ಬೆಳವಣಿಗೆ, ಬಗರ್ ಹುಕುಂ ರೈತರ ಸ್ಥಿತಿಗತಿ, ಜಿಲ್ಲೆಯ ಕೈಗಾರಿಕೆಗಳ ಪರಿಸ್ಥಿತಿ, ಕಾರ್ಮಿಕ ಸಮುದಾಯದ ನಾನಾ ವಿಭಾಗಗಳ ಸಂಕಟಗಳು, ಉದ್ಯೋಗಗಳ ಕಾಂಟ್ರಾಕ್ಟೀಕರಣ, ಅಸಂಘಟಿತ ವಲಯದ ಕಾರ್ಮಿಕರ ಬದುಕು, ಕೂಲಿಯ ಮಟ್ಟ, ಕನಿಷ್ಠ ಕೂಲಿ ಜಾರಿ ಪ್ರಶ್ನೆ, ಕಾರ್ಖಾನೆಗಳಲ್ಲಿ ಕಾರ್ಮಿಕ ಕಾನೂನುಗಳ ಜಾರಿ ಸ್ಥಿತಿಗತಿ ಗ್ರಾಮೀಣ ಭಾಗಗಳ ಕೃಷಿ ಕೂಲಿಕಾರರ ಕೂಲಿ ಪ್ರಮಾಣ, ವಲಸೆ ಸಮಸ್ಯೆಗಳು, ಜನರ ವಸತಿ ಸಮಸ್ಯೆಯ ತೀವ್ರತೆ, ಬಾಡಿಗೆಗಳ ಹೆಚ್ಚಳ, ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯ ಜಾರಿಯ ಪರಿಸ್ಥಿತಿ, ರೇಷನ್ ಕಾರ್ಡ್ ಮತ್ತು ಪಡಿತರದ ಸಮಸ್ಯೆಗಳು, ನಾನಾ ಬಗೆಯ ಅಸ್ಪೃಶ್ಯತೆ, ಜಾತಿ ತಾರತಮ್ಯಗಳ ಆಚರಣೆಗಳ ವಿವರಗಳು, ಮೂಢನಂಬಿಕೆಗೆ ಕುಮ್ಮಕ್ಕು ನೀಡುವ ಶಕ್ತಿಗಳ ಆಟಗಳು, ಮಹಿಳೆಯರ ಮೇಲೆ ಹೆಚ್ಚುತ್ತಿರುವ ದೌರ್ಜನ್ಯಗಳು, ನಿರುದ್ಯೋಗದ ತೀವ್ರತೆ, ಶಿಕ್ಷಣದ ವ್ಯಾಪಾರೀಕರಣದ ತೀವ್ರತೆ, ಆಸ್ಪತ್ರೆ ವ್ಯವಸ್ಥೆಯ ಖಾಸಗೀಕರಣದ ತೀವ್ರತೆ, ಜಿಲ್ಲೆಗಳಲ್ಲಿ ಪ್ರಮುಖ ಎನ್.ಜಿ.ಓ. ಸಂಸ್ಥೆಗಳ ಚಟುವಟಿಕೆಗಳು,

ಜಿಲ್ಲೆಯ ಪ್ರಮುಖ ರಾಜಕೀಯ ಪಕ್ಷಗಳು, ಅವುಗಳ ಬಲಾಬಲ, ಸ್ಥಳೀಯ ಸಂಸ್ಥೆಗಳಲ್ಲಿ ಅವುಗಳ ಕೆಲಸ, ಭ್ರಷ್ಟಾಚಾರ, ಹಗರಣಗಳು, ಜಿಲ್ಲೆಯ ಪ್ರಬಲ ಲಾಬಿಗಳು, ಅವುಗಳು ಕೆಲಸ ಮಾಡುವ ಪರಿ, ರಾಜ–ಕಾರಣಕ್ಕೆ ಕೋಮುವಾದ, ಜಾತಿವಾದದ ಬಳಕೆ, ಕೋಮುವಾದಿ–ಮೂಲಭೂತವಾದಿ ಸಂಘಟನೆಗಳ ಚಟುವಟಿಕೆಗಳು, ಪ್ರಭಾವಿ ಮಠ ಮಾನ್ಯಗಳ ಕಾರ್ಯಕ್ರಮಗಳು, ಜನಸಮುದಾಯ ಮೇಲೆ ಅವುಗಳ ಪ್ರಭಾವ, ಹಿಡಿತಗಳು, ನಿಸರ್ಗ ಸಂಪತ್ತಿನ ಲೂಟಿ, ಭೂ ಕಬಳಿಕೆ ಪ್ರಮಾಣ, ಆದಿವಾಸಿ–ಬುಡಕಟ್ಟು ಜನಗಳ ಬದುಕಿನ ಸ್ಥಿತಿಗತಿ.. ಜಿಲ್ಲೆಯ ಸ್ಥಳೀಯ ಮಾಧ್ಯಮಗಳು ಮತ್ತು ಅವುಗಳ ಪ್ರಭಾವ, ಪರಿಸ್ಥಿತಿಗಳು ಹೀಗೆ ನಾನಾ ವಿಷಯಗಳ ಕುರಿತು ವರದಿಯ ಉಪಯುಕ್ತ ಮಾಹಿತಿ–ವಿಶ್ಲೇಷಣೆಗಳನ್ನು ಒಳಗೊಳ್ಳಬಹುದು. ಇದು ಕೆಲ ಪ್ರಮುಖ ಅಂಶಗಳ ಪ್ರಸ್ತಾವನೆಯಷ್ಟೆ. ವರದಿಯ ಜಿಲ್ಲೆಯ ಪರಿಸ್ಥಿತಿಗಳಿಗೆ ಅನುಗುಣವಾಗಿ ಅನೇಕ ವೈವಿಧ್ಯಮಯ ವಿಷಯಗಳನ್ನು ಒಳಗೊಳ್ಳಲು ಅವಕಾಶವಿದೆ. ದಯಮಾಡಿ ವರದಿಗಳನ್ನು ಕಳಿಹಿಸಿ ಕೊಡಿ. ●

ಸರ್ಕಾರಿ ಆಸ್ಪತ್ರೆಗಳನ್ನು ಬಲಪಡಿಸಲು, ಖಾಸಗಿ ಆಸ್ಪತ್ರೆಗಳ ನಿಯಂತ್ರಣಕ್ಕಾಗಿ ಒತ್ತಾಯಿಸಿ ರಾಜ್ಯವ್ಯಾಪಿ ಪ್ರತಿಭಟನೆ

ಸರ್ಕಾರಿ ಆಸ್ಪತ್ರೆಗಳನ್ನು ಬಲಪಡಿಸುವಂತೆ ಒತ್ತಾಯಿಸಿ ಹಾಗೂ ಖಾಯಂ ವೈದ್ಯರನ್ನು ನೇಮಕ ಗುತ್ತಿಗೆ ಆಧಾರದಲ್ಲಿ ದುಡಿಯುತ್ತಿರುವ ನೌಕರರು ಸೇರಿದಂತೆ ಖಾಲಿ ಇರುವ ಶೇ. 50 ರಷ್ಟು ಉದ್ಯೋಗಗಳನ್ನು ಭರ್ತಿ ಮಾಡುವಂತೆ ಆಗ್ರಹಿಸಿ ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್ (ಡಿವೈಎಫ್ಐ) ರಾಜ್ಯಸಮಿತಿ ಕರೆಯಂತೆ ರಾಜ್ಯದ ಹಲವಾರು ಜಿಲ್ಲೆಗಳಲ್ಲಿ ಪ್ರತಿಭಟನೆಗಳು ನಡೆದಿವೆ.

ತುಮಕೂರು: ಜಿಲ್ಲಾ ಆರೋಗ್ಯಾಧಿಕಾರಿಗಳ ಕಛೇರಿ ಎದುರು



ತುಮಕೂರು

ತುಮಕೂರಿನ ಜಿಲ್ಲಾ ಆರೋಗ್ಯಾಧಿಕಾರಿಗಳ ಕಛೇರಿ ಎದುರು ಅಕ್ಟೋಬರ್ 29, 2014ರಂದು ಬೆಳಿಗ್ಗೆ 11-00 ಗಂಟೆಗೆ ಪ್ರತಿಭಟನೆಯನ್ನು ನಡೆಸಲಾಯಿತು.

ಪ್ರತಿಭಟನಾಕಾರರನ್ನು ಉದ್ದೇಶಿಸಿ ಮಾತನಾಡಿದ ಡಿವೈಎಫ್ಐನ ಜಿಲ್ಲಾಧ್ಯಕ್ಷ ಎಸ್. ರಾಘವೇಂದ್ರ ರಾಜ್ಯದಲ್ಲಿ ಅಧಿಕಾರ ನಡೆಸಿದ ಎಲ್ಲಾ ಸರ್ಕಾರಗಳು ಸರ್ಕಾರಿ ಆಸ್ಪತ್ರೆಗಳನ್ನು ಕಡೆಗಣಿಸುತ್ತಾ ಬರುತ್ತಿದ್ದು ಸರಕಾರದ ಸುತ್ತೋಲೆಗಳೇ ಹೇಳುವ ಪ್ರಕಾರ ಜನಸಂಖ್ಯೆಗೆ ಅನುಗುಣವಾಗಿ ಸರಕಾರ ಆರೋಗ್ಯ ಕೇಂದ್ರಗಳನ್ನು ಸ್ಥಾಪಿಸಲು ಇಲ್ಲಿಯವರೆಗೂ ಸಾಧ್ಯವಾಗಿಲ್ಲ. ವೈದ್ಯರ ಬೇಡಿಕೆಗಳನ್ನು ಸರಿಯಾದ ರೀತಿಯಲ್ಲಿ ಮಾತುಕತೆಯ ಮೂಲಕ ಬಗೆಹರಿಸಬೇಕಾದ ಸರ್ಕಾರ ಎಸ್ಮಾ ಜಾರಿ ಮಾಡುವ ಬೆದರಿಕೆ ಹಾಕಿ ಕೆಲಸಕ್ಕೆ ಹೋಗುವಂತೆ ತಿಳಿಸುತ್ತದೆ. ಈ ರೀತಿಯ ಬೆದರಿಕೆಗಳನ್ನು ಅಧಿಕಾರ ನಡೆಸುವ ಸರ್ಕಾರಗಳು ಮಾಡಬಾರದು. ಎಷ್ಟು ದಿನ ಸಮಸ್ಯೆಗಳನ್ನು ಇಟ್ಟುಕೊಂಡು ಬೆದರಿಸಿ ಕೆಲಸಗಳನ್ನು ಮಾಡಿಸುತ್ತೀರಿ ಎಂದು ಪ್ರಶ್ನಿಸಿದರು. ಮುಂದುವರೆದು ಮಾತನಾಡಿದ ಅವರು ಕೂಡಲೇ ಸರ್ಕಾರಿ ವೈದ್ಯರ ಸಮಸ್ಯೆಗಳನ್ನು ಬಗೆಹರಿಸಬೇಕು ಎಂದು ಒತ್ತಾಯಿಸಿದರು. ಸರ್ಕಾರದ ಅಂಕಿ ಅಂಶಗಳ ಪ್ರಕಾರವೇ ಸರ್ಕಾರಿ ಆಸ್ಪತ್ರೆಗಳಲ್ಲಿ 300 ಹಾಸಿಗೆಗಳು ಇದ್ದರೆ ವೈದ್ಯರು ಸೇರಿದಂತೆ ಸಿಬ್ಬಂದ್ದಿಗಳು ಸೇರಿ 202 ಜನ ಸಿಬ್ಬಂದಿ ಇರಬೇಕು ಎಂದು ಹೇಳುತ್ತದೆ. ಆದರೆ ಯಾವುದೇ ರೀತಿ ಮೂಲಸೌಲಭ್ಯಗಳು ಇಲ್ಲದೆ ಸರ್ಕಾರಿ ಆಸ್ಪತ್ರೆಗಳು ನರಳುತ್ತಿವೆ ಎಂದರು.

ಡಿವೈಎಫ್ಐ ಜಿಲ್ಲಾ ಉಪಾಧ್ಯಕ್ಷ ಎಂ.ಜಿ. ಮಂಜುನಾಥ್ ಮಾತನಾಡಿ ಆರೋಗ್ಯದ ಹಕ್ಕು ಸಂವಿಧಾನ ನೀಡಿರುವ ಮೂಲಭೂತ ಹಕ್ಕು, ಈ ಹಕ್ಕಿನ ಭಾಗವಾಗಿಯೇ ಸ್ವತಂತ್ರ ಭಾರತದಲ್ಲಿ ಸರ್ಕಾರಿ ಆರೋಗ್ಯ ಸೇವೆಯನ್ನು ದೇಶದೆಲ್ಲೆಡೆ ವ್ಯಾಪಕವಾಗಿ ಕಟ್ಟುವ ಪ್ರಯತ್ನವನ್ನು ಮಾಡಲಾಯಿತು. ಆದರೆ ಇಂದು ಸರ್ಕಾರಿ ಆಸ್ಪತ್ರೆಗಳಿಗೆ ಬಡಜನರು ಬರಲು ಹಿಂಜರಿಯುವ ಸ್ಥಿತಿ ನಿರ್ಮಾಣವಾಗಿದೆ. ಅಗತ್ಯ ಸಿಬ್ಬಂದಿಗಳು ಇಲ್ಲದೆ, ವೈದ್ಯರುಗಳ ಸಮಸ್ಯೆಗಳನ್ನು ಎದುರಿಸುತ್ತಾ ಸರ್ಕಾರಿ ಆಸ್ಪತ್ರೆಗಳು ನಡೆಯುತ್ತಿವೆ. ಗ್ರಾಮೀಣ ಪ್ರದೇಶದಲ್ಲಿ ಸರಿಯಾದ ರೀತಿಯ ಆರೋಗ್ಯ ಕೇಂದ್ರಗಳು ಇಲ್ಲದೆ ಹಳ್ಳಿಯ ಜನ ಸಿಟಿಗಳಿಗೆ ಬರಬೇಕಾದ ಸ್ಥಿತಿ ಇದೆ. ಹೋಬಳಿ ಮಟ್ಟಗಳಲ್ಲಿ 30 ಹಾಸಿಗೆಗಳಿಗೆ ವೈದ್ಯರು ಸ್ತ್ರೀರೋಗ ತಜ್ಞರು, ಸೇರಿದಂತೆ 35 ಜನ ಸಿಬ್ಬಂದಿ ಇರಬೇಕು. ಸರ್ಕಾರಗಳು ಈ ರೀತಿಯಾಗಿ ಸಿಬ್ಬಂದಿಗಳನ್ನು ನೇಮಕ ಮಾಡಿವೆಯೇ, ಆರೋಗ್ಯ ಸಚಿವರು ವೈದ್ಯರುಗಳು ರಾಜಿನಾಮೆ ನೀಡಿದರೆ ಖಾಸಗಿ ಸಹಭಾಗಿತ್ವದಲ್ಲಿ ಚಿಕಿತ್ಸೆಗಳನ್ನು ನೀಡುವ ಮಾತುಗಳನ್ನಾಡುತ್ತಾರೆ. ಸರ್ಕಾರದ ಒಬ್ಬ ಸಚಿವರು ಈ ರೀತಿಯಾಗಿ ಮಾತನಾಡಬಾರದು. ಬದಲಿಗೆ ಸರ್ಕಾರಿ ಆಸ್ಪತ್ರೆಗಳನ್ನು ಬಲಪಡಿಸಲು ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕಾದ ಅವಶ್ಯಕತೆ ಇದೆ ಎಂದರು. ಸರ್ಕಾರ ಸರ್ಕಾರಿ ಆಸ್ಪತ್ರೆಗಳ ಬಗ್ಗೆ ಗಮನ ಹರಿಸದೆ ಇದ್ದಲ್ಲಿ ಗ್ರಾಮಗಳಲ್ಲಿ, ಹಳ್ಳಿ ಹಳ್ಳಿಗಳಲ್ಲಿ ಪ್ರಚಾರ ನಡೆಸುವ ಮೂಲಕ ವಿಧಾನಸೌಧ ಮುತ್ತಿಗೆಯನ್ನು ಹಾಕಬೇಕಾಗುತ್ತದೆ ಎಂದರು.

ಮನವಿ ಸ್ವೀಕರಿಸಿದ ಡಾ॥ ಪುರುಷೋತ್ತಮ್ ಮಾತನಾಡಿ ಡಿ.ವೈ.ಎಫ್.ಐ. ಕೇಳುತ್ತಿರುವ ಬೇಡಿಕೆಗಳನ್ನೇ ವೈದ್ಯರುಗಳು ಕೇಳುತ್ತಿದ್ದು ಸರ್ಕಾರಕ್ಕೆ ನಿಮ್ಮ ಮನವಿ ಪತ್ರವನ್ನು ಕಳುಹಿಸುವುದಾಗಿ ತಿಳಿಸಿದರು.

ಪ್ರತಿಭಟನೆ ಯಲ್ಲಿ ಡಿ.ವೈ. ಎಫ್.ಐ. ಜಿಲ್ಲಾ ಸಹ ಕಾರ್ಯದರ್ಶಿ, ರಘುಪ್ರಸಾದ್, ಹರೀಶ್, ಕೆಂಪರಾಜು ಮಂಜುಸ್ವಾಮಿ, ತುಮಕೂರು ನಗರ ಸಮಿತಿಯ ಪ್ರಕಾಶ್, ಸುನಿಲ್‌ನಾಯಕ್, ಮಹಂತೇಶ್, ನಾರಾಯಣಸ್ವಾಮಿ, ಮಂಜುನಾಥ್, ಎಸ್.ಎಫ್.ಐ.ನ ಶಿವಣ್ಣ, ಸೌಮ್ಯ, ಜಗದೀಶ್, ಮುಂತಾದವರು ನೇತೃತ್ವ ವಹಿಸಿದ್ದರು.

ಧಾರವಾಡ: ಜಿಲ್ಲಾಧಿಕಾರಿಗಳ ಮುಂದೆ ಪ್ರತಿಭಟನೆ

ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್ (ಡಿ.ವೈ.ಎಫ್.ಐ) ಧಾರವಾಡ ಜಿಲ್ಲಾ ಸಮಿತಿಯು ಧಾರವಾಡ ಜಿಲ್ಲಾಧಿಕಾರಿಗಳ ಕಛೇರಿ ಮುಂದೆ ಅಕ್ಟೋಬರ್ 29 ರಂದು ಪ್ರತಿಭಟನೆ ನಡೆಸಿತು.

ಈ ಸಂದರ್ಭದಲ್ಲಿ ಡಿವೈಎಫ್ಐ ಜಿಲ್ಲಾ ಸಂಚಾಲಕ ಮಾರುತಿ ಅಂಬಿಗೇರಾ ಮಾತನಾಡಿ ಕಳೆದ 25 ವರ್ಷಗಳಿಂದ ಆಳುವ ಸರಕಾರ ನೀತಿಗಳಲ್ಲಿ ದೊಡ್ಡ ಬದಲಾವಣೆಯಾಗಿದ್ದು ಸೇವಾಕ್ಷೇತ್ರವಾದ ಆರೋಗ್ಯಕ್ಷೇತ್ರವನ್ನು ಸಂಪೂರ್ಣವಾಗಿ ಕೇಂದ್ರ-ರಾಜ್ಯ ಸರ್ಕಾರಗಳು ವ್ಯಾಪಾರೀಕರಣಗೊಳಿಸುತ್ತಿವೆ. ಎಲ್ಲೆಡೆ ನಾಯಿಕೊಡೆಗಳಂತೆ ಖಾಸಗಿ ನರ್ಸಿಂಗ್‌ಹೋಂಗಳು, ಹೈಟೆಕ್ ಆಸ್ಪತ್ರೆಗಳು ತಲೆ ಎತ್ತಿವೆ. ವಿಧವಿಧದ ಪರೀಕ್ಷಾ ಯಂತ್ರಗಳು, ಖಾಸಗಿ ಲ್ಯಾಬ್‌ಗಳು ಹೆಚ್ಚುತ್ತಿವೆ. ವೈದ್ಯರು ಮಾತ್ರವಲ್ಲದೆ, ವಿವಿಧ ವ್ಯಾಪಾರ, ಉದ್ದಿಮೆ ದಂಧೆಗಳಲ್ಲಿ ತೊಡಗಿಸಿಕೊಂಡವರು ಇಂದು ಅತೀ ಹೆಚ್ಚು ಲಾಭ ತರುವ ಆರೋಗ್ಯ ಕ್ಷೇತ್ರದಲ್ಲಿ ಹಣ ಹೂಡುತ್ತಿದ್ದಾರೆ.

ಲಾಭವೇ ಗುರಿಯಾದ ಈ ವೈದ್ಯಕೀಯ ಕೇಂದ್ರಗಳು ಜನತೆಯ ಅನಾರೋಗ್ಯವನ್ನೇ ಗುರಿಯಾಗಿಸಿಕೊಂಡು ಜನಸಾಮಾನ್ಯರನ್ನು ಶೋಷಿಸುತ್ತಿವೆ. ವಿವಿಧ ಅನಗತ್ಯ ಪರೀಕ್ಷೆಗಳು, ಅನಗತ್ಯವಾದ ದುಬಾರಿ ಚಿಕಿತ್ಸೆಗಳು, ಹೀಗೆ ಆರೋಗ್ಯದ ಸಮಸ್ಯೆಗಳ ಬಗ್ಗೆ ಜನರಿಗಿರುವ ತಿಳುವಳಿಕೆಯ ಕೊರತೆ ಮತ್ತು ಆತಂಕವನ್ನು ಬಳಸಿಕೊಂಡು ದುಬಾರಿ ಶುಲ್ಕಗಳನ್ನು ಖಾಸಗಿ ಆಸ್ಪತ್ರೆಗಳು ವಿಧಿಸುತ್ತಿವೆ. ಸರಕಾರಿ ಆಸ್ಪತ್ರೆಗಳ ದಯನೀಯ ಸ್ಥಿತಿಯಿಂದಾಗಿ ಖಾಸಗಿ ಆಸ್ಪತ್ರೆಗಳಿಗೆ ತೆರಳುವ ಜನಸಾಮಾನ್ಯರು ಈ ರೀತಿಯ ದುಬಾರಿ ವೆಚ್ಚಗಳಿಗೆ ಬಲಿಪಶುವಾಗುತ್ತಿದ್ದಾರೆ. ದುಬಾರಿ ವೆಚ್ಚ ಪಾವತಿ ಮಾಡಲಾಗದ ರೋಗಿಗಳನ್ನು ಹಣ ಪಾವತಿಸುವವರೆಗೆ ಅಕ್ರಮ ಬಂಧನದಲ್ಲಿಡುವುದು, ಚಿಕಿತ್ಸೆ ಫಲಕಾರಿಯಾಗದೆ ಮೃತಪಟ್ಟವರ ಮೃತದೇಹಗಳನ್ನು ಬಿಟ್ಟುಕೊಡದಿರುವುದು ಮುಂತಾದ ಅಮಾನವೀಯ ಕಾನೂನುಬಾಹಿರ



ಧಾರವಾಡ

ಕೃತ್ಯಗಳನ್ನು ಖಾಸಗಿ ಆಸ್ಪತ್ರೆಗಳು ಸರಕಾರದ ಭಯವಿಲ್ಲದೆ ನಡೆಸುತ್ತಿವೆ. ಖಾಸಗಿ ವೈದ್ಯರ ಕ್ಲಿನಿಕ್‌ಗಳಿಂದ ಹಿಡಿದು ನರ್ಸಿಂಗ್‌ಹೋಂಗಳು, ಆಸ್ಪತ್ರೆಗಳು, ತಾವು ನೀಡುವ ಸೇವೆಗಳ ವಿವರ ಮತ್ತು ಅವುಗಳ ದರವನ್ನು ಚಿಕಿತ್ಸೆಗೆ ಬರುವ ರೋಗಿ ಅಥವಾ ರೋಗಿಯ ಕಡೆಯವರಿಗೆ ನೀಡಬೇಕು ಎಂಬ ಕಡ್ಡಾಯ ನಿಯಮವಿದೆ.

ಆದರೆ ಆ ನಿಯಮಗಳನ್ನು ಯಾವುದೇ ವೈದ್ಯರಾಗಲೀ, ಆಸ್ಪತ್ರೆಗಳಾಗಲೀ ಪಾಲಿಸುತ್ತಿಲ್ಲ. ಇನ್ನೊಂದೆಡೆ ವೈದ್ಯರ 'ಕನ್ಸಲ್ಟಿಂಗ್ ಫೀಸ್'ನಿಂದ ಹಿಡಿದು ಪ್ರತಿಯೊಂದು ಚಿಕಿತ್ಸೆ, ಪರೀಕ್ಷೆ, ಹಾಸಿಗೆ, ಕೊಠಡಿ, ಶಸ್ತ್ರಚಿಕಿತ್ಸಾ ಕೊಠಡಿಗಳವರೆಗೆ ವಿವಿಧ ರೀತಿಯ ದರಗಳನ್ನು ವಿವಿಧ ಖಾಸಗಿ ಆಸ್ಪತ್ರೆಗಳು ವಸೂಲಿ ಮಾಡುತ್ತಿವೆ. ಸೇವಾಕ್ಷೇತ್ರವಾದ ಆರೋಗ್ಯ ಕ್ಷೇತ್ರದಲ್ಲಿ ಈ ರೀತಿಯ ಅಸಮಾನ ದರ ಪದ್ಧತಿಗೆ ಅವಕಾಶವಿರಕೂಡದು. ಸಮಾನ ದರ್ಜೆಯ ಆಸ್ಪತ್ರೆಗಳಲ್ಲಿ ಸಮಾನ ದರ ಇರಬೇಕಿದೆ. ಆದರೆ ಆರೋಗ್ಯದಂತಹ ಅತೀ ಅಗತ್ಯ, ಸೂಕ್ಷ್ಮವಾದ ಕ್ಷೇತ್ರದಲ್ಲಿ ಈ ರೀತಿಯ ಅಸಮಾನತೆ, ಶೋಷಣೆಗಳ ವಿರುದ್ಧ ಸರಕಾರವಾಗಲೀ, ಜನ ಪ್ರತಿನಿಧಿಗಳಾಗಲೀ ಧ್ವನಿ ಎತ್ತುತ್ತಿಲ್ಲ. ಸರಕಾರಿ ಆಸ್ಪತ್ರೆಗಳಲ್ಲಿ ಸರಿಯಾದ ಕಟ್ಟಡ, ಚಿಕಿತ್ಸಾ ಸಾಮಗ್ರಿಗಳು, ಪ್ರಯೋಗಾಲಯಗಳು, ತಜ್ಞ ವೈದ್ಯರ ಕೊರತೆ ಹೀಗೆ ಸಮಸ್ಯೆಗಳು ತಾಂಡವವಾಡುತ್ತಿದೆ.


ಸರಕಾರಿ ಆರೋಗ್ಯ ಇಲಾಖೆಯ ಶೇ. 50 ರಷ್ಟು ಹುದ್ದೆಗಳು ಖಾಲಿ ಇವೆ. ಬಡಪಾಯಿ ರೋಗಿಗಳು ಸರಕಾರಿ ಆಸ್ಪತ್ರೆಗಳಿಗೆ ಹೋದರೆ ಅಲ್ಲಿನ ವ್ಯವಸ್ಥೆಯ ನಿರ್ಲಕ್ಷ್ಯಕ್ಕೆ ಬಲಿಯಾಗುತ್ತಿದ್ದಾರೆ. ಸರಿಯಾದ ಚಿಕಿತ್ಸೆ ದೊರಕದೆ ಸಾಯುತ್ತಿದ್ದಾರೆ. ಸರಕಾರದ ನಿಯಮಗಳ ಪ್ರಕಾರವೇ ಪ್ರತಿ 30 ಸಾವಿರ ಜನಸಂಖ್ಯೆಗೆ ಒಂದು ಆರೋಗ್ಯ ಕೇಂದ್ರ, ಒಂದು ಲಕ್ಷ ಜನಸಂಖ್ಯೆಗೆ ಸಮುದಾಯ ಆಸ್ಪತ್ರೆ (30 ಹಾಸಿಗೆ), ತಾಲೂಕಿಗೊಂದು ತಾಲೂಕು ಆಸ್ಪತ್ರೆ (100 ಹಾಸಿಗೆ) ಮತ್ತು ಜಿಲ್ಲಾಸ್ಪತ್ರೆಗಳು ಇರಬೇಕು. ಆದರೆ ಸರಕಾರಗಳ ವರದಿಯ ಪ್ರಕಾರವೇ, ಜನಸಂಖ್ಯೆಗೆ ಅನುಪಾತವಾಗಿ ಇರಬೇಕಾದ್ದರಲ್ಲಿ, ಕನಿಷ್ಠ ಶೇ. 30 ರಷ್ಟು ಆರೋಗ್ಯ ಕೇಂದ್ರಗಳಾಗಲೀ, ಸಮುದಾಯ ಆಸ್ಪತ್ರೆಗಳಾಗಲೀ ಇಲ್ಲ. ಇರುವ ಆರೋಗ್ಯ ಕೇಂದ್ರ, ಆಸ್ಪತ್ರೆಗಳನ್ನು ಖಾಸಗಿ ಮೆಡಿಕಲ್ ಕಾಲೇಜುಗಳಿಗೆ ಬಿಟ್ಟು ಕೊಡಲಾಗುತ್ತಿದೆ. ವೈದ್ಯ ವಿದ್ಯಾರ್ಥಿಗಳ ಕಲಿಕೆಗಾಗಿ ಬಡರೋಗಿಗಳನ್ನು ಬಳಸಲಾಗುತ್ತಿದೆ. ಇಂತಹ ಪರಿಸ್ಥಿತಿಯಿಂದಾಗಿ ಅತೀ ಅಗತ್ಯವಾದ, ವೈದ್ಯಕೀಯ ಸೇವೆಯಿಂದ ಜನಸಾಮಾನ್ಯರು ವಂಚಿತರಾಗುತ್ತಿದ್ದಾರೆ. ತಮ್ಮ ಜೀವಮಾನದ ಗಳಿಕೆಗಳನ್ನು ಅದಕ್ಕಾಗಿ ಸುರಿದು ಸಾಲದ ಸುಳಿಗೆ ಬೀಳುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ಸರ್ಕಾರದ ನಿಯಮಗಳ ಪ್ರಕಾರ ದೊರಕಬೇಕಾಗಿರುವ ಪ್ರಾಥಮಿಕ ಆರೋಗ್ಯ ಕೇಂದ್ರಗಳು, ಸಮುದಾಯ ಆಸ್ಪತ್ರೆಗಳಿಗಾಗಿ, ತಾಲೂಕು, ಜಿಲ್ಲಾ ಆಸ್ಪತ್ರೆಗಳಲ್ಲಿ ಪರಿಪೂರ್ಣ ಸೌಲಭ್ಯಗಳನ್ನು ಒದಗಿಸಬೇಕು. ಖಾಸಗಿ ಆಸ್ಪತ್ರೆಗಳ ನಿಯಂತ್ರಣದಲ್ಲಿಡಬೇಕೆಂದು ಕೇಂದ್ರ-ರಾಜ್ಯ ಸರ್ಕಾರಗಳನ್ನು ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್ (ಡಿ.ವೈ.ಎಫ್.ಐ.) ಒತ್ತಾಯಿಸುತ್ತದೆ. ಎಂದರು. ತಕ್ಷಣ ಈ ಬೇಡಿಕೆಯನ್ನು ಈಡೇರಿಸದೆ ಹೋದರೆ ಮುಂದೆ ತೀವ್ರತರನಾದ ಹೋರಾಟಕ್ಕೆ ಮುಂದಾಗಬೇಕಾಗುತ್ತದೆ ಎಂದೂ ಅವರು ಎಚ್ಚರಿಸಿದರು.

ಡಿವೈಎಫ್ಐ ಜಿಲ್ಲಾ ಮುಖಂಡರಾದ ಸಾಗರ ಕೂಡಗಿ, ಈರಪ್ಪ ನಾಯ್ಕ, ಶೇಖರ ಪವಾರ, ಮುತ್ತುರಾಜ ಪೂಜಾರಿ, ಆದರ್ಶ ಮಕರವಳ್ಳಿ, ಶಿವಕುಮಾರ ರೊಳ್ಳಿ, ಗುಂಡಪ್ಪ ಚವ್ಹಾಣ ಮುಂತಾದವರು ಪ್ರತಿಭಟನೆಯ ನೇತೃತ್ವ ವಹಿಸಿದ್ದರು. ಪ್ರತಿಭಟನೆ ಬೆಂಬಲಿಸಿ ಸಿ.ಐ.ಟಿ.ಯು.ನ ಜಿಲ್ಲಾಧ್ಯಕ್ಷರಾದ ಬಿ.ಐ. ಈಳಿಗೇರ ಮಾತನಾಡಿದರು.

ಹಾವೇರಿಯಲ್ಲಿ ಪ್ರತಿಭಟನೆ

ಹಾವೇರಿಯ ಜಿಲ್ಲಾಧಿಕಾರಿ ಕಛೇರಿ ಎದುರು ಪ್ರತಿಭಟನೆ ನಡೆಯಿತು. ಡಿವೈಎಫ್ಐ ಜಿಲ್ಲಾ ಸಂಚಾಲಕರು, ನಿಂಗಪ್ಪ ಆರೇರ, ಜಿಲ್ಲಾ ಮುಖಂಡರಾದವಿನಾಯಕ ವೈ, ಮಂಜುನಾಥ ಪೂಜಾರ ಮುಂತಾದವರ ನೇತೃತ್ವದಲ್ಲಿ ಹಾವೇರಿಯಲ್ಲಿ ಪ್ರತಿಭನೆ ನಡೆಸಿ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಲಾಗಿದೆ.

ಕಲುಷಿತ ಪರಿಸರ ಸಂತ್ರಸ್ತರಿಗೆ ಡಿವೈಎಫ್ಐ ನೇತೃತ್ವ



ವರದಿ : ವಾ. ಉಚ್ಚಿಲ್



ಮಂಗಳೂರು ನಗರದ ಹೊರ ವಲಯದಲ್ಲಿರುವ ಎಂಆರ್‌ಪಿಎಲ್ ಸಾರ್ವಜನಿಕ ಉದ್ಯಮ ಸಂಸ್ಥೆಯ ಸಂಕೀರ್ಣಕ್ಕೆ ತಾಗಿ ಕೊಂಡಿದೆ ಜೋಕಟ್ಟೆ ಗ್ರಾಮ. ಎಂಆರ್‌ಪಿಎಲ್ ಸಂಸ್ಥೆಯ ಕಂಪೌಂಡಿನ ಪಕ್ಕದಲ್ಲೇ ಜನಸಾಂದ್ರತೆ ಹೆಚ್ಚಿರುವ ವಸತಿ ಪ್ರದೇಶಗಳಿವೆ. ಕಂಪೌಂಡಿನ ಸ್ವಲ್ಪವೇ ಒಳಭಾಗದಲ್ಲಿ ಎಂಆರ್‌ಪಿಎಲ್ ಇತ್ತೀಚೆಗೆ ಸಲ್ಫರ್ ಮತ್ತು ಕೋಕ್ ಘಟಕಗಳನ್ನು ಸ್ಥಾಪಿಸಿ ಕಾರ್ಯಾರಂಭ ಮಾಡಿದೆ. ಈ ಘಟಕಗಳ ರಾಸಾಯನಿಕಗಳ ಕಲುಷಿತ ತ್ಯಾಜ್ಯಗಳನ್ನು ನೆಲಕ್ಕೂ ಆಕಾಶಕ್ಕೂ ಬಿಡಲಾಗುತ್ತಿದೆ. ಇದರಿಂದ ನೆಲದಿಂದ ಅಪಾಯಕಾರಿ ರಾಸಾಯನಿಕಗಳು ಒಳಸೇರಿ ಮನುಷ್ಯರಿಗೂ ಪ್ರಾಣಿ ಸಸ್ಯಗಳಿಗೂ ಅಪಾಯಕಾರಿಯಾಗಿವೆ. ನೆಲದಡಿಯ ನೀರನ್ನು ಕಲುಷಿತಗೊಳಿಸಿ ಜೋಕಟ್ಟೆ ಗ್ರಾಮದ ಜನರು ವಿಷಯುಕ್ತ ನೀರನ್ನು ಕುಡಿಯುವಂತಾಗಿದೆ. ಗ್ರಾಮದ ತಗ್ಗು ಪ್ರದೇಶಗಳಲ್ಲಿರುವ ಗಜನಿ ಭೂಮಿಯಲ್ಲಿ ತೈಲಯುಕ್ತ ನೀರು ಕಂಡು ಬರುತ್ತಿದೆ. ಮಳೆ ಸುರಿದರೂ ತೈಲಾಂಶ ಹೋಗುತ್ತಿಲ್ಲ. ಹೈಡ್ರೋಜನ್ ಸಲ್ಫೈಡ್‌ಯುಕ್ತ ಸಂಯುಕ್ತಗಳ ಹೊಗೆಯನ್ನು ಸಲ್ಫರ್‌ಘಟಕದ ಚಿಮಣಿಯಿಂದ ಹೊರಬಿಡಲಾಗುತ್ತಿದ್ದು, ವಾತಾವರಣ ದುರ್ವಾಸನೆಯಿಂದ ಕೂಡಿರುವುದಲ್ಲದೆ ಶರೀರ–ಕ್ಕೆ ತುರಿಕೆಯನ್ನು ಉಂಟು ಮಾಡುತ್ತಿದೆ. ಘಟಕದ ಯಂತ್ರಗಳ ಭಾರೀ ಸದ್ದಿನಿಂದಾಗಿ ಕಂಪೌಂಡಿನ ಸಮೀಪದಲ್ಲೇ ಇರುವ ಜೋಕಟ್ಟೆಯ ಕೆಲವು ಮನೆಗಳಲ್ಲಿ ನಿದ್ರೆ ಮಾಡಲು ಕಷ್ಟವಾಗಿದ್ದು, ಆರು ಮನೆಗಳವರು ಈಗಾಗಲೇ ಮನೆಬಿಟ್ಟು ಬೇರೆ ಕಡೆ ಹೋಗಿದ್ದಾರೆ.

ಎಂಆರ್‌ಪಿಎಲ್ ನವರು ಪರಿಸರಕ್ಕೆ ತ್ಯಾಜ್ಯಗಳನ್ನು ಬಿಟ್ಟ ಸಂದರ್ಭಗಳಲ್ಲಿ ಸಂತ್ರಸ್ತರಾದ ಸುತ್ತಲಿನ ಊರಿನ ನಾಗರಿಕರು ಪ್ರತಿಭಟನೆ ಮಾಡುತ್ತಿದ್ದರು. ಆ ಪ್ರತಿಭಟನೆ ಮಾಡುತ್ತಿದ್ದವರ ಮುಖಂಡರಿಗೆ ಚಿಕ್ಕ ಕಾಂಟ್ರಾಕ್ಟು ಕೆಲಸ ಒದಗಿಸಿ ಪ್ರತಿಭಟನೆ ಹಿಂದೆಗೆಯುವಂತೆ ಎಂಆರ್‌ಪಿಎಲ್ ಕಂಪೆನಿ ಮಾಡುತ್ತಿತ್ತು. ಹಾಗೇ ಪ್ರಯೋಜನ ಪಡೆದವರಲ್ಲಿ ಸ್ಥಳೀಯ ಕಾಂಗ್ರೆಸ್, ಬಿಜೆಪಿ, ಜನತಾದಳ ನಾಯಕರೂ ಇದ್ದರು. ಹೀಗಾಗಿ ಸ್ಥಳೀಯ ಪಕ್ಷ ನಾಯಕರ ಬಗ್ಗೆ ಜನರಿಗೆ ಈಗಂತೂ ವಿಶ್ವಾಸ ಉಳಿದಿಲ್ಲ. ಸಲ್ಫರ್ ಘಟಕದಿಂದಾಗಿ ಪರಿಸರ ಮಾಲಿನ್ಯ ಉಂಟಾದಾಗ ಜೋಕಟ್ಟೆ ಗ್ರಾಮಸ್ಥರು ಅವರ ಯಾರ ಬಳಿಗೂ ಹೋಗದೆ ತಾವೇ ನಾಗರಿಕ ಸಮಿತಿ ರಚಿಸಿಕೊಂಡು ಡಿವೈಎಫ್ಐ ನೇತೃತ್ವ ನೀಡಬೇಕೆಂದು ಆಹ್ವಾನಿಸಿದ್ದರು.

ಡಿವೈಎಫ್ಐ ನೇತೃತ್ವದಲ್ಲಿ ಜೋಕಟ್ಟೆ ನಾಗರಿಕ ಸಮಿತಿಯ ಹೋರಾಟ ಜೋಕಟ್ಟೆಯಲ್ಲಿ ನಡೆದಿರುವುದಲ್ಲದೆ ಕೆಲವು ದಿನಗಳ ಹಿಂದೆ 800 ಜನರ ಮೆರವಣಿಗೆ ರ್‍ಯಾಲಿಯಾಗಿ ಮಂಗಳೂರು ಜಿಲ್ಲಾಧಿಕಾರಿ ಕಚೇರಿಯ ಮುಂದೆ ನಡೆದಿದೆ. ಬಳಿಕ ಪತ್ರಿಕಾ ಹೇಳಿಕೆ ಮೂಲಕ ಎಂಆರ್‌ಪಿಎಲ್ ಆಡಳಿತ ನೀಡಿದ ಸಮಜಾಯಿಷಿ ಜೋಕಟ್ಟೆ ಗ್ರಾಮಸ್ಥರಿಗೆ ಸಮಾಧಾನ ತಂದಿರುವುದಿಲ್ಲ.

ನವಂಬರ್ 3 ರಂದು ಎಂಆರ್‌ಪಿಎಲ್‌ನ ಕಾರ್ಗೋ ಗೇಟ್ ಬಳಿ ಡಿವೈಎಫ್ಐ ಮತ್ತು ನಾಗರಿಕ ಹೋರಾಟ ಸಮಿತಿ ನೇತೃತ್ವದಲ್ಲಿ ಇಡೀ ದಿನದ ಧರಣಿ ಸತ್ಯಾಗ್ರಹ ನಡೆದಿದ್ದು, ಈ ಸಂದರ್ಭದಲ್ಲಿ ಮಾತನಾಡಿದ ಮುಖಂಡರು ಎಂಆರ್‌ಪಿಎಲ್‌ನ ಜನವಿರೋಧಿ ಧೋರಣೆ–ಯ ಬಗ್ಗೆ ತೀವ್ರ ಆಕ್ರೋಶವನ್ನು ವ್ಯಕ್ತಪಡಿಸಿದರು. ಸಲ್ಫರ್ ಹಾಗೂ ಕೋಕ್ ಘಟಕಗಳನ್ನು ಮುಚ್ಚಲು ಆಗ್ರಹಿಸಲಾಯಿತು. ಡಿವೈಎಫ್ಐ ರಾಜ್ಯಾ ಧ್ಯಕ್ಷ ಮುನೀರ್ ಕಾಟಿಪಳ್ಳ, ಮಂಗಳೂರು ನಗರ ಸಮಿತಿ ಅಧ್ಯಕ್ಷ ಬಿ.ಕೆ.ಇಮ್ತಿಯಾಜ್, ಡಿವೈಎಫ್ಐ ಸ್ಥಳೀಯ ಮುಖಂಡರಾದ ಶ್ರೀನಾಥ್ ಕುಳಾಯಿ, ಹೋರಾಟ ಸಮಿತಿ ಸಂಚಾಲಕ ಬಿ.ಎಸ್.ಹುಸೈನ್, ನಾಡದೋಣಿ ಮೀನುಗಾರರ ಸಂಘದ ಅಧ್ಯಕ್ಷ ಶರತ್ ಗುಡ್ಡೆಕೊಪ್ಪ ಮತ್ತಿತರರು ಪ್ರತಿಭಟನಾಕಾರರನ್ನು ಉದ್ದೇಶಿಸಿ ಮಾತನಾಡಿದರು. ಜನಪ್ರತಿನಿಧಿಗಳ ಮೌನವನ್ನು ಖಂಡಿಸಿದರು. ಗ್ರಾಮಪಂಚಾಯತ್ ಸದಸ್ಯರನ್ನೊಳಗೊಂಡಂತೆ ಗ್ರಾಮದ ಇತರ ಗಣ್ಯರೂ ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ರಸ್ತೆ ದುರಸ್ತಿಗೆ ಆಗ್ರಹಿಸಿ ಉರ್ವಸ್ಟೋರ್‌ನಲ್ಲಿ ಡಿವೈಎಫ್ಐ ಪ್ರತಿಭಟನೆ:

ಮಂಗಳೂರು ನಗರದ ಕೊಟ್ಟಾರ ಚೌಕಿಯ ಫ್ಲೈಓವರ್ ಪಕ್ಕದ ಹದಗೆಟ್ಟ ಸರ್ವಿಸ್ ರಸ್ತೆಯನ್ನು ದುರಸ್ತಿಗೊಳಿಸಲು ಆಗ್ರಹಿಸಿ ಡಿವೈಎಫ್ಐ ಉರ್ವಸ್ಟೋರ್ ಘಟಕದ ಆಶ್ರಯದಲ್ಲಿ ನವಂಬರ್ 2 ರಂದು ಪ್ರತಿಭಟನೆ ನಡೆಸಲಾಯಿತು.

ಡಿವೈಎಫ್ಐ ಮಂಗಳೂರು ನಗರ ಸಮಿತಿ ಅಧ್ಯಕ್ಷ ಬಿ.ಕೆ.ಇಮ್ತಿಯಾಜ್, ನಗರ ಸಮಿತಿ ಕಾರ್ಯದರ್ಶಿ ಸಂತೋಷ್ ಕುಮಾರ್ ಬಜಾಲ್, ಉರ್ವಸ್ಟೋರ್ಸ್ ಘಟಕದ ಅಧ್ಯಕ್ಷ ನಾಗೇಂದ್ರ, ಮನೋಜ್ ಉರ್ವಸ್ಟೋರ್, ಪ್ರಶಾಂತ್ ಎಂ.ಬಿ, ಪ್ರಶಾಂತ್ ಆಚಾರ್ಯ, ಧನರಾಜ್ ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ನಿವೇಶನಕ್ಕೆ ಕಾದಿರಿಸಿದ ಜಮೀನನ್ನು ಕಾಲೇಜಿಗೆ

ಕೋಣಾಜೆ ಪಂಚಾಯತಿಗೆ ಮುತ್ತಿಗೆ:

ಕೋಣಾಜೆ ಗ್ರಾಮ ಪಂಚಾಯತ್ ವ್ಯಾಪ್ತಿಯ ಅಸೈಗೋಳಿಯಲ್ಲಿ ಬಡವರಿಗೆ ಮನೆ ನಿವೇಶನಕ್ಕೆಂದು ಕಾದಿರಿಸಲಾದ 4 ಎಕ್ರೆ ಸರಕಾರಿ ಜಮೀನನ್ನು ಸರಕಾರಿ ಕಾಲೇಜಿಗೆ ಮಂಜೂರು ಮಾಡಲು ನಿರ್ಣಯಿಸಿರುವ ಗ್ರಾಮ ಪಂಚಾಯತ್ ವಿರುದ್ಧ ಕೋಣಾಜೆ ಗ್ರಾಮಸ್ಥರು ನವಂಬರ್ 3 ರಂದು ಮುತ್ತಿಗೆ ಹಾಕಿದರು.

ಬೇರೆ ಬೇರೆ ಪಕ್ಷಗಳಿಗೆ ಸೇರಿದ್ದ ಗ್ರಾಮಸ್ಥರು ಮಂಗಳೂರು ವಿಶ್ವ ವಿದ್ಯಾನಿಲಯದ ಆವರಣದ ಬಳಿಯಿಂದ ಗ್ರಾಮ ಪಂಚಾಯತ್‌ವರೆಗೆ ಜಾಥಾ ನಡೆಸಿ ಬಳಿಕ ಪ್ರತಿಭಟನೆ ನಡೆಸಿದರು. ಬೇರೆ ಬೇರೆ ಮುಖಂಡರ ಜೊತೆ ಸಿಪಿಐ(ಎಂ) ಮಂಗಳೂರು ನಗರ ಸಮಿತಿ ಕಾರ್ಯದರ್ಶಿ ಸುನಿಲ್ ಕುಮಾರ್ ಬಜಾಲ್, ಸಿಪಿಐ(ಎಂ) ಉಳ್ಳಾಲ ವಲಯ ಕಾರ್ಯದರ್ಶಿ ಕೃಷ್ಣಪ್ಪ ಸಾಲ್ಯಾನ್ ಕೂಡಾ ಪ್ರತಿಭಟನೆಯನ್ನುದ್ದೇಶಿಸಿ ಮಾತನಾಡಿದರು.



‘ಕಾರ್ಮಿಕ ವರ್ಗಕ್ಕೆ ಹೋರಾಟದಲ್ಲಿ ಸಂಘಟನೆಯೊಂದೇ ಅಸ್ತ್ರ’

– ಉಡುಪಿ ಜಿಲ್ಲಾ ಹಂಚು ಕಾರ್ಮಿಕರ ಸಂಘದ 14ನೇ ವಾರ್ಷಿಕ ಮಹಾಸಭೆಯಲ್ಲಿ ಕೆ. ಶಂಕರ –



ವೆಂಕಟೇಶ ಕೋಣಿ

ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯ ‘ಎಸ್.ಕೆ. ಟೈಲ್ಸ್ ವರ್ಕರ್ಸ್ ಯೂನಿಯನ್’ ಉಡುಪಿ ಜಿಲ್ಲೆ ರಚನೆಯಾದ ಬಳಿಕ ‘ಉಡುಪಿ ಜಿಲ್ಲಾ ಹಂಚು ಕಾರ್ಮಿಕರ ಸಂಘ’ದ ಹೆಸರಿನಲ್ಲಿ ಪ್ರತ್ಯೇಕಗೊಂಡಿತು. ಉಡುಪಿ ಜಿಲ್ಲೆಯ 14 ಹಂಚಿನ ಕಾರ್ಖಾನೆಗಳ ಕಾರ್ಮಿಕ ಸಂಘಗಳ ಸೇರ್ಪಡೆಯೊಂದಿಗೆ ಸಿ.ಐ.ಟಿ.ಯು. ನೊಂದಾಯಿತ ಉಡುಪಿ ಜಿಲ್ಲಾ ಹಂಚು ಕಾರ್ಮಿಕರ ಸಂಘ ಏಕೈಕ ಬಲಿಷ್ಟ ಕಾರ್ಮಿಕ ಸಂಘಟನೆಯಾಗಿ ಬೆಳೆದು ಬಂದಿರುತ್ತದೆ. ಇದರ 14ನೇ ವಾರ್ಷಿಕ ಮಹಾಸಭೆಯು ದಿನಾಂಕ 2 ನವೆಂಬರ್ 2014ರಂದು ಕುಂದಾಪುರದ ‘ಕಾರ್ಮಿಕ ಭವನ’ದಲ್ಲಿ ಯಶಸ್ವಿಯಾಗಿ ಜರುಗಿತು.

ಸಿ.ಐ.ಟಿ.ಯು. ರಾಜ್ಯ ಉಪಾಧ್ಯಕ್ಷ ಹಾಗೂ ಉಡುಪಿ ಜಿಲ್ಲಾಧ್ಯಕ್ಷ ಕೆ. ಶಂಕರ ಉಡುಪಿ ಜಿಲ್ಲಾ ಹಂಚು ಕಾರ್ಮಿಕರ ಸಂಘದ 14ನೇ ವಾರ್ಷಿಕ ಮಹಾಸಭೆಯನ್ನು ಉದ್ದೇಶಿಸಿ ಮುಖ್ಯ ಅತಿಥಿ–

ಪುಟ 14 ಕ್ಕೆ



'ಮೇಕ್ ಇನ್ ಇಂಡಿಯಾ' ಹೆಸರಿನಲ್ಲಿ ಮೋದಿಯಿಂದ ಜನತೆಗೆ ವಂಚನೆ'

ಸಿಪಿಐ(ಎಂ) ಬಾಗೇಪಲ್ಲಿ ತಾಲ್ಲೂಕು ಸಮ್ಮೇಳನದಲ್ಲಿ ಜಿ.ವಿ. ಶ್ರೀರಾಮರೆಡ್ಡಿ

'ಮೇಡಿನ್ ಇಂಡಿಯಾ' ಮತ್ತು 'ಮೇಕ್ ಇನ್ ಇಂಡಿಯಾ' ನಡುವೆ ಇರುವಂತಹ ವ್ಯತ್ಯಾಸವನ್ನು ತಿಳಿಯದಂತೆ ಮೋದಿ ಸರಕಾರ ಈ ದೇಶದ ಜನತೆಯನ್ನು 'ಮೋಡಿ' ಮಾಡಿ ವಂಚಿಸುತ್ತಿದೆ ಎಂದು ಸಿಪಿಐ(ಎಂ) ಪಕ್ಷದ ರಾಜ್ಯ ಕಾರ್ಯದರ್ಶಿ ಜಿ.ವಿ.ಶ್ರೀರಾಮರೆಡ್ಡಿಯವರು ಹೇಳಿದರು. ತಾಲೂಕಿನ ಚೇಳೂರು ಗ್ರಾಮದಲ್ಲಿ ನವೆಂಬರ್ 6–7, 2014 ರಂದು ನಡೆದ ಸಿಪಿಐ(ಎಂ) ಪಕ್ಷದ ಬಾಗೇಪಲ್ಲಿ ತಾಲ್ಲೂಕು ಸಮ್ಮೇಳನವನ್ನು ನವೆಂಬರ್ 6 ರಂದು ಉದ್ಘಾಟಿಸಿ ಅವರು ಮಾತನಾಡುತ್ತಿದ್ದರು.

ಕಾಂಗ್ರೆಸ್, ಬಿಜೆಪಿ ಸರಕಾರಗಳು ಅನುಸರಿಸುತ್ತಿರುವ ಉದಾರೀಕರಣ, ಖಾಸಗೀಕರಣ ಹಾಗೂ ಆರ್ಥಿಕ ನೀತಿಗಳಿಂದ ದೇಶದಲ್ಲಿ ಭ್ರಷ್ಟಾಚಾರ, ನಿರುದ್ಯೋಗ, ಬಡತನ, ಅನಕ್ಷರತೆ ಹಾಗೂ ಆತ್ಯಾಚಾರ ಪ್ರಕರಣಗಳು ತಾಂಡವವಾಡುತ್ತಿವೆ ಎಂದು ಅವರು ತೀವ್ರವಾಗಿ ಕಾಂಗ್ರೆಸ್ ಬಿಜೆಪಿ ಪಕ್ಷಗಳ ನೀತಿಗಳನ್ನು ತೀವ್ರವಾಗಿ ಖಂಡಿಸಿದರು. ಅಧಿಕಾರ ಮತ್ತು ರಾಜಕೀಯ ಸ್ವಾರ್ಥಕ್ಕಾಗಿ ಸಿಪಿಐ(ಎಂ) ಪಕ್ಷ ಎಂದಿಗೂ ಯಾವುದೇ ಪಕ್ಷಗಳೊಂದಿಗೆ ಹೊಂದಾಣಿಕೆ ಮಾಡಿಕೊಳ್ಳುವುದಿಲ್ಲ. ರಾಷ್ಟ್ರೀಯ ಪಕ್ಷಗಳಾದ ಕಾಂಗ್ರೆಸ್ ಮತ್ತು ಬಿಜೆಪಿ ಹೊರತುಪಡಿಸಿ ಯಾವುದೇ ರಾಜಕೀಯ ಪಕ್ಷಗಳು ನಮ್ಮ ಪಕ್ಷ–ಕ್ಕೆ ಪ್ರಧಾನ ಶತ್ರುಗಳಲ್ಲ, ಕಾಂಗ್ರೆಸ್, ಬಿಜೆಪಿ, ಜೆಡಿ(ಎಸ್), ಸಮಾಜವಾದಿ ಪಕ್ಷ ಸೇರಿದಂತೆ ರಾಷ್ಟ್ರೀಯ ಮತ್ತು ಪ್ರಾದೇಶಿಕ ರಾಜಕೀಯ ಪಕ್ಷಗಳಲ್ಲಿ ಪಕ್ಷದ 'ಹೈಕಮಾಂಡ್' ನಿರ್ಣಯವೇ ಅಂತಿಮ. ಆದರೆ ಸಿಪಿಐ(ಎಂ) ಪಕ್ಷ ಭಿನ್ನವಾದದ್ದು. ಸಿಪಿಐ(ಎಂ) ಒಬ್ಬ ಮುಖಂಡನ ನಿರ್ಣಯಕ್ಕೆ ಅವಕಾಶವಿಲ್ಲದಿರುವಂತಹ ಏಕೈಕ ಪಕ್ಷ ಎಂದರು. ಬಿಜೆಪಿ ರಾಷ್ಟ್ರೀಯ ಪಕ್ಷವಲ್ಲ, ಇದೊಂದು ಅಪಾಯಕಾರಿ ಸಂಘಟನೆ. ಮಾಜಿ ಪ್ರಧಾನಿ ವಾಜಪೇಯಿ ಸರಕಾರವಿದ್ದಾಗ ಆವರು ನಿರೀಕ್ಷಿಸಿದ ಪ್ರಮಾಣದಲ್ಲಿ ಆರೆಸ್ಸೆಸ್ ಬೇಳೆ ಬೇಯಲಿಲ್ಲ. ಆದರೆ ಇಂದು ನಮೋ ನೇತೃತ್ವದಲ್ಲಿ ನಡೆಯುತ್ತಿರುವ ಸರಕಾರ ಆರೆಸ್ಸೆಸ್ ಹಿಡಿತದಲ್ಲಿದೆ. ಇವರು ಇಡೀ ಶಿಕ್ಷಣ ವ್ಯವಸ್ಥೆಯನ್ನೇ ಕೇಸರಿಕರಣ ಮಾಡಲು ಹೊರಟಿದ್ದಾರೆ ಎಂದೂ ಶ್ರೀರಾಮರೆಡ್ಡಿಯವರು ಎಚ್ಚರಿಸಿದರು.

ಕಾಂಗ್ರೆಸ್ ಮತ್ತು ಬಿಜೆಪಿ ರಾಜಕೀಯ ನೀತಿಗಳ, ಧೋರಣೆಗಳ ವಿರುದ್ಧವೇ ನಮ್ಮ ಹೋರಾಟ. ಮೇಡಿನ್ ಇಂಡಿಯಾ ಮತ್ತು ಮೇಕಿಂಗ್ ಇಂಡಿ–ಯಾ ನಡುವೆ ಇರುವಂತಹ ವ್ಯತ್ಯಾಸವನ್ನು ತಿಳಿಯದಂತೆ ಮೋದಿ ಸರಕಾರ ಈ ದೇಶದ ಜನತೆಯನ್ನು ವಂಚಿ ಸುತ್ತಿದ್ದಾರೆ. ಬಹುರಾಷ್ಟ್ರೀಯ ಕಂಪೆನಿಗಳ ಮಾಲಕರ ಒತ್ತಾಯಕ್ಕೆ ಮಣಿದು ಕಾರ್ಮಿಕರ ಕಾನೂನನ್ನು ತಿದ್ದುಪಡಿ ಮಾಡುವ ಮೂಲಕ ದುಡಿಯುವ ಕಾರ್ಮಿಕರಿಗೆ ಅನ್ಯಾಯ ಮಾಡುವುದು ಒಂದೆಡೆ ಯಾದರೆ ಇನ್ನೊಂದು ಕಡೆ ಇವರ ಅನುಕೂಲಕ್ಕಾಗಿ ಈ ದೇಶಕ್ಕೆ ಅನ್ನ ನೀಡುವಂತಹ ರೈತರ ಕೃಷಿ ಜಮೀನನ್ನು ವಶಪಡಿಸಿಕೊಳ್ಳುವ ಮೂಲಕ ರೈತರನ್ನು ವಂಚಿಸುತ್ತಿದ್ದಾರೆ. ಪ್ರಚಾರದ ಉದ್ದೇಶದಿಂದ ಕೇಂದ್ರದ ನಮೋ ಸರಕಾರ ಸ್ವಚ್ಛತೆಗೆ ಕೈ ಹಾಕಿದೆ. ಆದರೆ ದೇಶದಲ್ಲಿ ಶೇ. 74ರಷ್ಟು ಕುಟುಂಬಗಳಿಗೆ ಶೌಚಾಲಯ, ಸ್ನಾನದ ಗೃಹಗಳೇ ಇಲ್ಲ. ಶೌಚಾಲಯ, ಸ್ನಾನದ ಗೃಹಗಳನ್ನು ನಿರ್ಮಿಸಲು ಯೋಜನೆಗಳು ರೂಪಿಸಲಾಗದೆ, ಸ್ವಚ್ಛ ಭಾರತ ನಿರ್ಮಾಣ ಮಾಡುವುದಕ್ಕೆ, ರಾಜಕಾರಣಿಗಳು ಪೋಟೊಗಾಗಿ ಪೋಸುಗಳನ್ನು ನೀಡುವುದಕ್ಕೆ ಸೀಮಿತರಾಗುತ್ತಿದ್ದಾರೆ ಎಂದು ವ್ಯಂಗ್ಯವಾಡಿದರು.

ಸಮ್ಮೇಳನದಲ್ಲಿ ಸಿಪಿಐ(ಎಂ) ಜಿಲ್ಲಾ ಸಮಿತಿ ಕಾರ್ಯದರ್ಶಿ ಎಂ.ಪಿ. ಮುನಿವೆಂಕಟಪ್ಪ, ತಾಲೂಕು ಕಾರ್ಯದರ್ಶಿ ರಘು ರಾಮರೆಡ್ಡಿ, ಜಿ.ಪಂ. ಸದಸ್ಯೆ ಬಿ.ಸಾವಿತ್ರಮ್ಮ, ತಾ.ಪಂ ಸದಸ್ಯರಾದ ನಾರಾಯಣಪ್ಪ, ಗೋಪಾಲಕೃಷ್ಣ, ಸದಸ್ಯೆ ಶೋಭಾರಾಣಿ, ಸಿಪಿಐ(ಎಂ) ಮುಖಂಡರಾದ ರಾಮಲಿಂಗಪ್ಪ, ಚನ್ನರಾಯಪ್ಪ, ಮಂಜುನಾಥರೆಡ್ಡಿ, ಮುಸ್ತಫಾ, ಜಯರಾಮರೆಡ್ಡಿ, ಬೈಯ್ಯಾರೆಡ್ಡಿ, ನಾರಾಯಣರೆಡ್ಡಿ, ಮತ್ತಿತರರು ಉಪಸ್ಥಿತರಿದ್ದರು.

ಪ್ರತಿನಿಧಿ ಅಧಿವೇಶನ

ಸಮ್ಮೇಳನದ ಪ್ರತಿನಿಧಿ ಅಧಿವೇಶನವು ನವೆಂಬರ್ 6 ಮತ್ತು 7 ರಂದು ನಡೆಯಿತು. ಬಾಗೇಪಲ್ಲಿ ತಾಲ್ಲೂಕಿನ ಒಟ್ಟು 1,552 ಸದಸ್ಯರನ್ನು ಪ್ರತಿನಿಧಿಸಿ 220 ಪ್ರತಿನಿಧಿಗಳು ಸಮ್ಮೇಳನದಲ್ಲಿ ಪಾಲ್ಗೊಂಡಿದ್ದರು. ರಾಜಕೀಯ–ಸಂಘಟನಾತ್ಮಕ ವರದಿಯ ಕುರಿತ ಚರ್ಚೆಯ ನಂತರ ಸಮ್ಮೇಳನವು 22 ಜನ ಸದಸ್ಯರ ತಾಲ್ಲೂಕು ಸಮಿತಿಯನ್ನು ಆಯ್ಕೆ ಮಾಡಿತು. ಈ ಸಮಿತಿಯು ಕಾರ್ಯದರ್ಶಿಯನ್ನಾಗಿ ರಘುರಾಮರೆಡ್ಡಿಯವರನ್ನು ಆಯ್ಕೆ ಮಾಡಿದೆ. ನವೆಂಬರ್ 7 ರಂದು ಸಂಜೆ ಬೃಹತ್ ಬಹಿರಂಗ ಸಭೆಯೊಂದಿಗೆ ಸಮ್ಮೇಳನವು ಮುಕ್ತಾಯಗೊಂಡಿತು. ●

'ನೆಹರೂ ಕುರಿತು ಆರೆಸ್ಸೆಸ್ ಹೇಳಿಕೆ ಅದರ ಕೊಲೆಗಡುಕತನಕ್ಕೆ ಸಾಕ್ಷಿಯಾಗಿದೆ'

ಗಂಗಾವತಿ : 'ಗಾಂಧಿಜಿಯವರನ್ನು ಕೊಲ್ಲುವ ಬದಲು ಗೋಡ್ಸೆಯು ನೆಹರೂ ಅವರನ್ನು ಕೊಲ್ಲಬೇಕಿತ್ತು.' ಎಂಬ ಕೇರಳದ ಆರೆಸ್ಸೆಸ್ಸಿಗನೊಬ್ಬ ನೀಡಿದ ಹೇಳಿಕೆ ಸಂಘದ ಕೊಲೆಗಡುಕತನಕ್ಕೆ ಸಾಕ್ಷಿಯಾಗಿದೆ' ಎಂದು ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯ ನಿತ್ಯಾನಂದಸ್ವಾಮಿ ಹೇಳಿದ್ದಾರೆ. ಅವರು ಗಂಗಾವತಿ ಎಪಿಎಂಸಿ ಮಾರಾಟ ಭವನದಲ್ಲಿ ಸಿಪಿಐ(ಎಂ) 6ನೇ ತಾಲ್ಲೂಕು ಸಮ್ಮೇಳನವನ್ನು ಉದ್ಘಾಟಿಸಿ ಮಾತನಾಡುತ್ತಿದ್ದರು.

ಗಾಂಧಿಜಿ ಕೊಲೆಯ ಬಗ್ಗೆ ಆರೆಸ್ಸೆಸ್ ಇಂದಿಗೂ ಪಶ್ಚಾತ್ತಾಪ ವ್ಯಕ್ತಪಡಿಸಿಲ್ಲ. ಗಾಂಧಿ ಬದಲು ನೆಹರೂ ಅವರನ್ನು ಕೊಲ್ಲಬೇಕಾಗಿತ್ತು ಎಂದು ಹೇಳಿರುವುದು ಅದರ ಕ್ರೂರ ಫ್ಯಾಸಿಸ್ಟ್ ಮನೋಭೂಮಿಕೆಗೆ ಹಿಡಿದ ಕನ್ನಡಿಯಾಗಿದೆ. ಗುಜರಾತ್ ನರಮೇಧಕ್ಕೆ ಇದೇ ಕೊಲೆಗಡುಕತನ ಕಾರಣವಾಗಿದೆ. ದೇಶದ ಉದ್ದಗಲಕ್ಕೂ ನಡೆಯುತ್ತಿರುವ ಕೋಮು ಗಲಭೆಗಳಲ್ಲಿ ಇದೇ ಫ್ಯಾಸಿಸ್ಟ್ ಮೆದುಳು ಕೆಲಸಮಾಡುತ್ತಿದೆ. ಇಂತಹ ಕೊಲೆಗಡುಕ ಶಕ್ತಿಗಳು ದೇಶದಲ್ಲಿ ಅಧಿಕಾರಕ್ಕೆ ಬಂದಿರುವುದು ಅತ್ಯಂತ ಆತಂಕದ ಸಂಗತಿಯಾಗಿದೆ ಎಂದು ಅವರು ಹೇಳಿದರು. ಸಿಪಿಐ(ಎಂ) ತಾಲೂಕ ಸಮಿತಿ ಕಾರ್ಯದರ್ಶಿ ಎ. ಹುಲುಗಪ್ಪ ಸಭೆಯ ಅಧ್ಯಕ್ಷತೆ ವಹಿಸಿದ್ದರು. ಸಿಪಿಐ(ಎಂ) ಜಿಲ್ಲಾ ಸಮಿತಿ ಕಾರ್ಯದರ್ಶಿ ಜಿ. ನಾಗರಾಜರವರು ಸಮಾರಂಭದಲ್ಲಿ ಮುಖ್ಯ ಅಥಿತಿಗಳಾಗಿ ಪಾಲ್ಗೊಂಡಿದ್ದರು.

ಆರಂಭದಲ್ಲಿ ಪಕ್ಷದ ಹಿರಿಯ ಸದಸ್ಯ



ನಭೀಸಾಬ್ ಅವರು ಧ್ವಜಾರೋಹಣ ನೆರವೇರಿಸಿದರು. ಹುತಾತ್ಮರ ಸ್ತಂಭಕ್ಕೆ ಗೌರವ ಸಲ್ಲಿಸುವುದರೊಂದಿಗೆ ಸಮ್ಮೇಳನದ ಕಲಾಪಗಳಿಗೆ ಚಾಲನೆ ನೀಡಲಾಯಿತು. ಅಗಲಿದ ಸಂಗಾತಿಗಳಿಗೆ ಶ್ರದ್ಧಾಂಜಲಿ ಸಲ್ಲಿಸುವ ನಿರ್ಣಯವನ್ನು ಹುಸೇನಪ್ಪ ಮಂಡಿಸಿದಾಗ ಎರಡು ನಿಮಿಷ ಮೌನ ಆಚರಿಸಿ ಶ್ರದ್ಧಾಂಜಲಿ ಸಲ್ಲಿಸಿದರು.

ಸಂಗಾತಿ ನಿರುಪಾದಿ, ಮರಕುಂಬಿ ಬಸವರಾಜ ಮತ್ತು ಹುಲುಗೆಮ್ಮ ಅವರನ್ನು ಒಳಗೊಂಡ ಅಧ್ಯಕ್ಷೀಯ ಮಂಡಳಿಯು ಪ್ರತಿನಿಧಿ ಅಧಿವೇಶನವನ್ನು ನಡೆಸಿತು. ಕಾರ್ಯದರ್ಶಿ ಎ. ಹುಲುಗಪ್ಪ ಮೂರು ವರ್ಷಗಳ ಚಟುವಟಿಕೆಗಳ ವಿಮರ್ಶಾ ವರದಿಯನ್ನು ಮಂಡಿಸಿದರು. ವರದಿಯ ಮೇಲಿನ ಚರ್ಚೆಯಲ್ಲಿ 17 ಜನ ಪ್ರತಿನಿಧಿಗಳು ಭಾಗವಹಿಸಿ ಮಾತನಾಡಿದರು. ತಾಲೂಕ ಸಮಿತಿಯ ಪರವಾಗಿ ಕಾರ್ಯದರ್ಶಿಗಳು ನೀಡಿದ ಉತ್ತರವನ್ನು ಅಂಗೀಕರಿಸಿ ಸಮ್ಮೇಳನವು ವರದಿಯನ್ನು ಸರ್ವಾನುಮತದಿಂದ ಅನುಮೋದಿಸಿತು.

ತುಂಗಭದ್ರ ಸಮನಾಂತರ ಕಾಲುವೆ, ಬಗರ್‌ಹುಕುಂ ಸಾಗುವಳಿ ಸಕ್ರಮ, ನಿವೇಶನ ರಹಿತರಿಗೆ ನಿವೇಶನ, ಉದ್ಯೋಗ ಖಾತ್ರಿ ಯೋಜನೆಯ ಸಮರ್ಪಕ ಜಾರಿ, ಡೊನೇಷನ್ ಹಾವಳಿ ತಡೆಗಟ್ಟುವುದು ಮತ್ತು ಮುಖ್ಯವಾಗಿ ತಾಲೂಕಿನ ವಿವಿಧ ಗ್ರಾಮಗಳಲ್ಲಿ ಅಸ್ತಿತ್ವದಲ್ಲಿರುವ ಜಾತಿ ಅಸ್ಪೃಶ್ಯತೆ ವಿರುದ್ಧದ ಹೋರಾಟ ಹಾಗೂ ಮರಕುಂಬಿ ಗ್ರಾಮದ ದಲಿತರಿಗೆ ನಿವೇಶನ ನೀಡಲು ಒತ್ತಾಯಿಸಿ ಹೋರಾಟ ಮಾಡಲು ನಿರ್ಧರಿಸುವ ನಿರ್ಣಯಗಳನ್ನು ಕೈಗೊಳ್ಳಲಾಯಿತು. ಕೊನೆಯಲ್ಲಿ 15 ಜನ ಸದಸ್ಯರಿರುವ ತಾಲೂಕು ಸಮಿತಿಯನ್ನು ಆಯ್ಕೆ ಮಾಡಲಾಯಿತು. ಸಂಗಾತಿ ನಿರುಪಾದಿ ಸಮಿತಿಯ ಕಾರ್ಯದಶಿಯಾಗಿ ಆಯ್ಕೆಯಾದರು. ನಿತ್ಯಾನಂದಸ್ವಾಮಿಯವರ ಸಮಾರೋಪ ಮಾತುಗಳೊಂದಿಗೆ ಸಮ್ಮೇಳನ ಮುಕ್ತಾಯವಾಯಿತು.

– ಕೆ. ಹುಸೇನಪ್ಪ.



ಮಹಾರಾಷ್ಟ್ರ ಮತ್ತು ಹರ್ಯಾಣದಲ್ಲಿ ಬಿಜೆಪಿಯ ಇತ್ತೀಚಿನ ಚುನಾವಣಾ ವಿಜಯಗಳಲ್ಲೂ ಆರೆಸ್ಸೆಸ್/ತನ್ನ ಕುಖ್ಯಾತ ದುಷ್ಟ ಅಜೆಂಡಾದ 'ಸೀಳು ನಾಲಗೆಯ' ರಾಜಕೀಯವನ್ನು ಚಾಚೂ ತಪ್ಪದೆ ಅನುಸರಿಸಿದೆ ಎಂದು ಮಾಧ್ಯಮ ವರದಿಗಳು ಸೂಚಿಸುತ್ತವೆ. ಒಂದೆಡೆಯಲ್ಲಿ, ಸಾರ್ವಜನಿಕ ತೋರಿಕೆಗೆ 'ಅಭಿವೃದ್ಧಿ', 'ಗುಜರಾತ್ ಮಾದರಿ' , 'ಒಳ್ಳೆಯ ದಿನಗಳು ಬರಲಿವೆ' ಇವೆಲ್ಲ; ಇನ್ನೊಂದೆಡೆಯಲ್ಲಿ, ಚುನಾವಣಾ ಪ್ರಯೋಜನಗಳನ್ನು ಗಿಟ್ಟಿಸಲು ಅದರ ನಿಜವಾದ ಕಾರ್ಯವಿಧಾನವಾಗಿ ಕೋಮು ಧ್ರುವೀಕರಣವನ್ನು ತೀಕ್ಷ್ಣಗೊಳಿಸುವುದು ಮತ್ತು ಹಿಂಸಾಚಾರ. ಇದು ಭಾರತದ ನಮ್ಮ ಆಧುನಿಕ ಜಾತ್ಯಾತೀತ ಪ್ರಜಾಸತ್ತಾತ್ಮಕ ಗಣತಂತ್ರಕ್ಕೆ ವಿನಾಶಕಾರಿಯಾಗುತ್ತದೆ.

'ಸೀಳು ನಾಲಗೆಯ' ರಾಜಕೀಯ ಬಿಜೆಪಿಯ ಚುನಾವಣಾ ಕಾರ್ಯತಂತ್ರದ ಬೆನ್ನೆಲುಬು

ಸೀತಾರಾಮ್ ಯೆಚುರಿ

ಕೊನೆಗೂ ದಿಲ್ಲಿ ವಿಧಾನಸಭೆಗೆ ಮುಂದಿನ ವರ್ಷದ ಆರಂಭದಲ್ಲಿ ಚುನಾವಣೆ ನಡೆಯುವಂತೆ ಕಾಣುತ್ತದೆ. ನವಂಬರ್ 4ರಂದು ಪ್ರಧಾನ ಮಂತ್ರಿಗಳ ಅಧ್ಯಕ್ಷತೆಯಲ್ಲಿ ನಡೆದ ಕೇಂದ್ರ ಸಂಪುಟದ ವಿಶೇಷ ಸಭೆಯಲ್ಲಿ ದಿಲ್ಲಿ ವಿಧಾನ ಸಭೆಯನ್ನು ತಕ್ಷಣದಿಂದಲೇ ಜಾರಿಗೆ ಬರುವಂತೆ ವಿಸರ್ಜಿಸಬೇಕೆಂಬ ಉಪರಾಜ್ಯಪಾಲರ ಶಿಫಾರಸಿಗೆ ಅನುಮೋದನೆ ನೀಡಲಾಗಿದೆ.

ಹೀಗೆ ದೇಶದ ರಾಜಧಾನಿಯಲ್ಲಿ ಹೊಸ ಚುನಾವಣೆಗಳ ಪ್ರಕ್ರಿಯೆ ಆರಂಭವಾಗಿದೆ. ಇದರೊಂದಿಗೆ ನವಂಬರ್ 25ರಂದು ಲೋಕಸಭೆಗೆ ಚುನಾಯಿರಾದ ಬಿಜೆಪಿ ಸದಸ್ಯರು ತೆರವುಗೊಳಿಸಿದ ಮೂರು ಸ್ಥಾನಗಳಿಗೆ ನವಂಬರ್ 25ರಂದು ನಡೆಯಬೇಕಾಗಿದ್ದ ಚುನಾವಣೆಗಳ ಪ್ರಕ್ರಿಯೆ ತಂತಾನೇ ರದ್ದಾಗುತ್ತದೆ. ಚುನಾವಣಾ ಆಯೋಗ ಅಧಿಸೂಚನೆಯ ಪ್ರಕಾರ ನವಂಬರ್ 5 ಈ ಉಪಚುನಾವಣೆಗಳಿಗೆ ನಾಮಪತ್ರ ಸಲ್ಲಿಸುವ ಕೊನೆಯ ದಿನಾಂಕವಾಗಿದೆ. ಕಾಂಗ್ರೆಸಿನ ಹೊರಗಣ ಬೆಂಬಲದಿಂದ ರಚಿಸಿದ್ದ ಅರವಿಂದ ಕೇಜ್ರಿವಾಲ್ ನೇತೃತ್ವದ ಆಮ್ ಆದ್ಮಿ ಪಕ್ಷದ ಸರಕಾರ ಫೆಬ್ರುವರಿ 2014ರಲ್ಲಿ ರಾಜೀನಾಮೆ ನೀಡಿದಂದಿನಿಂದ ದಿಲ್ಲಿ ವಿಧಾನ ಸಭೆ ಅಮಾನತ್ತಿನಲ್ಲಿತ್ತು. ವಿಧಾನ ಸಭೆ ವಿಸರ್ಜನೆಯಾದ ಆರು ತಿಂಗಳೊಳಗೆ ಹೊಸ ಚುನಾವಣೆಗಳನ್ನು ನಡೆಸಬೇಕಾಗಿದೆ. ಚುನಾವಣೆಗಳು ನಡೆದ ಹೊಸ ಸರಕಾರ ರಚನೆಯಾಗುವವರೆಗೆ ಈಗಿರುವ ರಾಷ್ಟ್ರಪತಿ ಆಳ್ವಿಕೆಯನ್ನು ಕೇಂದ್ರ ಸರಕಾರ ಖಂಡಿತವಾಗಿ ಮುಂದುವರೆಸುತ್ತದೆ.

ಈ ನಿರ್ಧಾರ ಬಂದಿರುವುದು ಅಮಾನತಿನಲ್ಲಿದ್ದ ವಿಧಾನ ಸಭೆಯಲ್ಲಿ ಒಂದು ಬಹುಮತ ಕಲೆ ಹಾಕುವಲ್ಲಿ ಬಿಜೆಪಿ ವಿಫಲವಾದ ನಂತರ. ಒಂದು ಬಹುಮತ ಕಲೆ ಹಾಕಲು ಬಿಜೆಪಿ ನೀತಿ ಬಾಹಿರ ಕುದುರೆ ವ್ಯಾಪಾರದಲ್ಲಿ ತೊಡಗಲೂ ಸರ್ವಪ್ರಯತ್ನ ನಡೆಸಿತು ಎಂದು ಎಎಪಿ ಮತ್ತು ಅದರ ಮುಖಂಡರಾದ ದಿಲ್ಲಿಯ ಮಾಜಿ ಮುಖ್ಯಮಂತ್ರಿ ಆಪಾದಿಸಿದ್ದಾರೆ. ಹರ್ಯಾಣದಲ್ಲಿ ಚುನಾವಣಾ ವಿಜಯವನ್ನು ಗಳಿಸಿರುವ ಮತ್ತು ಮಹಾರಾಷ್ಟ್ರದಲ್ಲಿ ಅತಿ ದೊಡ್ಡ ಪಕ್ಷವಾಗಿ ಹೊರಹೊಮ್ಮಿರುವ ಬಿಜೆಪಿ ಬಹುಮತ ಕಲೆ ಹಾಕುವಂತಹ ಇಂತಹ ವ್ಯರ್ಥಪ್ರಯತ್ನಗಳನ್ನು ಬಿಜೆಪಿ ಕೈಬಿಟ್ಟಂತೆ ಕಾಣುತ್ತದೆ.

ಉಪಚುನಾವಣೆಗಳಲ್ಲಿ ವಿಫಲತೆ

ಈ ವಿಧಾನಸಭಾ ಚುನಾವಣೆಗಳಲ್ಲಿ ಗೆದ್ದರೂ ಬಿಜೆಪಿ 2014ರ ಸಾರ್ವತ್ರಿಕ ಚುನಾವಣೆಗಳ ನಂತರ ನಡೆದ ಉಪಚುನಾವಣೆಗಳ ವಿವಿಧ ಸುತ್ತುಗಳಲ್ಲಿ ಬಿಜೆಪಿ ವಿಫಲವಾಗಿದೆ. ಉತ್ತರಪ್ರದೇಶ, ಗುಜರಾತ ಮತ್ತು ರಾಜಸ್ತಾನದಲ್ಲಿ ನಡೆದ ಉಪಚುನಾವಣೆಗಳ ಇತ್ತೀಚಿನ ಸುತ್ತಿನ ಮೊದಲು ಮೂರು ಸುತ್ತುಗಳಲ್ಲಿ ವಿವಿಧ ರಾಜ್ಯಗಳಲ್ಲಿ 50 ವಿಧಾನಸಭಾ ಸ್ಥಾನಗಳಿಗೆ ಉಪಚುನಾವಣೆಗಳು ನಡೆದವು.

ಈ 50ರಲ್ಲಿ 35ರಲ್ಲಿ ಸಾರ್ವತ್ರಿಕ ಚುನಾವಣೆಗಳಲ್ಲಿ ಬಿಜೆಪಿ ಗಮನಾರ್ಹ ಮುನ್ನಡೆ ಸಾಧಿಸಿತ್ತು. ಆದರೆ ಉಪಚುನಾವಣೆಗಳಲ್ಲಿ ಅದು ಗೆದ್ದದ್ದು ಕೇವಲ 18ರಲ್ಲಿ ಮಾತ್ರ. ಈ ರಾಜ್ಯಗಳಲ್ಲಿ ಹಿಂದಿನ ವಿಧಾನಸಭಾ ಚುನಾವಣೆಗೆ ಹೋಲಿಸಿದಾಗಲೂ ಬೆಂಬಲದಲ್ಲಿ ತೀವ್ರ ಇಳಿಕೆ ಕಾಣ ಬಂದಿತು. ನಂತರದ ಸುತ್ತಿನ ಉಪಚುನಾವಣೆಗಳಲ್ಲಿ, ಉತ್ತರಪ್ರದೇಶದಲ್ಲಿ ಹಿಂದಿನ ವಿಧಾನಸಭಾ ಚುನಾವಣೆಗಳಿಗೆ ಹೋಲಿಸಿದರೆ 8 ಸ್ಥಾನಗಳನ್ನು ಕಳಕೊಂಡಿತು. 80 ಲೋಕಸಭಾ ಸೀಟುಗಳಲ್ಲಿ 71 ನ್ನು ಗೆದ್ದು ದಾಖಲೆ ಸ್ಥಾಪಿಸಿದ್ದ ಬಿಜೆಪಿ ಕೇಂದ್ರದಲ್ಲಿ ಸರಕಾರ ರಚಿಸಿದ ನೂರು ದಿನಗಳಲ್ಲೇ ಇದು ಸಂಭವಿಸಿದೆ. ಆ ಚುನಾವಣೆಗಳಲ್ಲಿ ಸಾಕಷ್ಟು ಮುಂದಿದ್ದ ಇನ್ನೂ 7ಸ್ಥಾನಗಳಲ್ಲಿ ಅದು ಸೋತಿತು. ಗುಜರಾತಿನಲ್ಲೂ ಹಿಂದಿನ ಲೋಕಸಭಾ ಮತ್ತು ಹಿಂದಿನ ವಿಧಾನಸಭಾ ಚುನಾವಣೆಗಳಿಗೆ ಮತ್ತು ಲೋಕಸಭಾ ಚುನಾವಣೆಗಳ ಗೆಲುವಿನ ಅಂತರಕ್ಕೆ ಹೋಲಿಸಿದಾಗ ಮೂರು ಸ್ಥಾನಗಳನ್ನು ಕಳಕೊಂಡಿತು. ಈ ಸುತ್ತಿನಲ್ಲಿ ಒಂಭತ್ತು ರಾಜ್ಯಗಳಲ್ಲಿ ನಡೆದ 32 ಸ್ಥಾನಗಳ ಉಪಚುನಾವಣೆಗಳಲ್ಲಿ ಬಿಜೆಪಿ ಗೆಲ್ಲಲು ಸಾಧ್ಯವಾಗಿರುವುದು 12 ಸ್ಥಾನಗಳನ್ನು ಮಾತ್ರ.

ಮಹಾರಾಷ್ಟ್ರ ಮತ್ತು ಹರ್ಯಾಣದ ಅದರ ಇತ್ತೀಚಿನ ಚುನಾವಣಾ ವಿಜಯಗಳಲ್ಲೂ ಆರೆಸ್ಸೆಸ್/ಬಿಜೆಪಿ ಅದರ ಈಗ ಕುಖ್ಯಾತವಾಗಿರುವ ದುಷ್ಟ ಅಜೆಂಡಾದ 'ಸೀಳು ನಾಲಗೆಯ' ರಾಜಕೀಯವನ್ನು ಚಾಚೂ ತಪ್ಪದೆ ಅನುಸರಿಸಿದೆ ಎಂದು ಮಾಧ್ಯಮ ವರದಿಗಳು ಸೂಚಿಸುತ್ತವೆ. ಒಂದೆಡೆಯಲ್ಲಿ 'ಅಭಿವೃದ್ಧಿ', 'ಗುಜರಾತ್ ಮಾದರಿ' , 'ಒಳ್ಳೆಯ ದಿನಗಳು ಬರಲಿವೆ' ಇವೆಲ್ಲ ಸಾರ್ವಜನಿಕ ತೋರಿಕೆಗೆ, ಇನ್ನೊಂದೆಡೆಯಲ್ಲಿ ಕೋಮು ಧ್ರುವೀಕರಣವನ್ನು ತೀಕ್ಷ್ಣಗೊಳಿಸುವುದು ಮತ್ತು ಹಿಂಸಾಚಾರದ ಚುನಾವಣಾ ಪ್ರಯೋಜನಗಳನ್ನು ಗಿಟ್ಟಿಸಲು ಹವಣಿಸುವುದು ಅದರ ನಿಜವಾದ ಕಾರ್ಯವಿಧಾನ.

ದಿಲ್ಲಿ ಚುನಾವಣೆಯಲ್ಲೂ

ಮುಂಬರುವ ದಿಲ್ಲಿ ಚುನಾವಣೆಗಳಲ್ಲೂ ಇದೇ ರಣನೀತಿ ಅದರ ಕಾರ್ಯತಂತ್ರದ ಬೆನ್ನೆಲುಬಾಗಿರುತ್ತದೆ ಎಂಬುದು ಈಗಾಗಲೇ ನಿಚ್ಚಳವಾಗಿದೆ, ಚುನಾವಣಾ ಸೋಲುಗಳ ಹಿನ್ನೆಲೆಯಲ್ಲಿ ಆರೆಸ್ಸೆಸ್ ಮುಖಂಡರ ಟಿಪ್ಪಣಿಗಳು ಇದನ್ನು ಸ್ಪಷ್ಟಗೊಳಿಸಿವೆ. ಲವ್ ಜಿಹಾದ್‌ನಂತಹ ಘೋಷಣೆಗಳನ್ನು, ಮುಝಫ್ಫರ್‌ನಗರ, ಸಹರಾಣ್ಪುರ್, ಮೊರಾದಾಬಾದ್ ಗಲಭೆಗಳನ್ನು ದೊಡ್ಡ ಚುನಾವಣಾ ಪ್ರಶ್ನೆಗಳಾಗಿ ಮಾಡಿರುವುದಕ್ಕೆ ಬಿಜೆಪಿ ಈ ಚುನಾವಣೆಗಳಲ್ಲಿ ಭಾರೀ ಬೆಲೆ ತೆರಬೇಕಾಗಿ ಬಂತು ಎಂಬುದು ಅವರ ಟಿಪ್ಪಣಿ– "2014ರಲ್ಲಿ ನಮಗೆ ಮತಗಳು ಬಂದದ್ದು ನಮ್ಮ ಹಿಂದುತ್ವ ಸಂಬಂಧಿತ ಅಜೆಂಡಾದಿಂದ. ನಾವು ನಮ್ಮ ನಿಜವಾದ ಪರಿಚಯವನ್ನು ಮರೆತು ಎಲ್ಲರನ್ನೂ ಒಳಗೊಳ್ಳುವ ರಾಜಕೀಯವನ್ನು ಆರಂಭಿಸಿದಾಗಲೆಲ್ಲಾ ನಾವು ಚುನಾವಣೆಗಳಲ್ಲಿ ಸೋತಿದ್ದೇವೆ"(ಮೇಲ್ ಟುಡೇ, ಸಪ್ಟಂಬರ್ 17, 2014).

ಮಹಾರಾಷ್ಟ್ರ ಮತ್ತು ಹರ್ಯಾಣ ಚುನಾವಣೆಗಳ ನಂತರ ಆರೆಸ್ಸೆಸ್/ಬಿಜೆಪಿ ದಿಲ್ಲಿಯ ವಿವಿಧ ಭಾಗಗಳಲ್ಲಿ, ಭವಾನ, ನಂದನ್‌ಗಿರಿ, ತ್ರಿಲೋಕಪುರಿ, ಸಮಯಪುರ್ ಬದ್ಲಿ ಮುಂತಾದ ದಿಲ್ಲಿಯ ಪ್ರದೇಶಗಳಲ್ಲಿ ಕೋಮುಧ್ರುವೀಕರಣವನ್ನು ತೀಕ್ಷ್ಣಗೊಳಿಸುವ ತನ್ನ ಶಸ್ತ್ರಭಂಡಾರವನ್ನು ತತ್ಪರತೆಯಿಂದ ತೀಕ್ಷ್ಣಗೊಳಿಸುತ್ತಿದೆ.

ನವಂಬರ್ 2ರಂದು ಉತ್ತರ ದಿಲ್ಲಿಯ ಭವಾನ ಪ್ರದೇಶದಲ್ಲಿ ಒಂದು ಮಹಾಪಂಚಾಯತ್ ನಡೆಯಿತು– ನವಂಬರ್ 4ರಂದು ನಡೆಯಲಿದ್ದ ಮುಹರ್ರಂ ಮೆರವಣಿಗೆಯನ್ನು ವಿರೋಧಿಸಬೇಕೆಂದು. ಈ ಸಭೆಯಲ್ಲಿ ಸ್ಥಳೀಯ ಬಿಜೆಪಿ ಶಾಸಕ ಉದ್ರೇಕಕಾರಿ ಭಾಷಣ ಮಾಡಿದನೆಂದು ಆಪಾದಿಸಲಾಗಿದೆ. ಮುಂಬರುವ ಚುನಾವಣೆಗಳ ಮೇಲೆ ಕಣ್ಣಿಟ್ಟು ಉದ್ರೇಕವನ್ನು ಬಡಿದೆಬ್ಬಿಸಲಾಗುತ್ತಿದೆ ಎಂದು ಸ್ಥಳೀಯ ನಿವಾಸಿಗಳು ಎನ್‌ಡಿಟಿವಿ ಮುಂತಾದ ಮಾಧ್ಯಮಗಳಿಗೆ ಹೇಳಿದ್ದಾರೆ.

ಒಂದು ಕಾಲನಿಯ ಹಿಂದೂ ಮತ್ತು ಮುಸ್ಲಿಂ ನಿವಾಸ ಪ್ರದೇಶಗಳನ್ನು ಒಂದು ಸಣ್ಣ ಕಾಲುವೆ ಪ್ರತ್ಯೇಕಿಸಿದೆ. ಅಲ್ಪಸಂಖ್ಯಾತ ಸಮುದಾಯದವರು ಕೋಮುಧ್ರುವೀಕರಣವನ್ನು ತಗ್ಗಿಸಲು ತಾವು ಒಂದು ದಶಕದಿಂದಲೂ ಹೆಚ್ಚು ಕಾಲದಿಂದ ಅನುಸರಿಸಿಕೊಂಡು ಬಂದಿರುವ ಮುಹರ್ರಂ ಮೆರವಣಿಗೆಯ ದಾರಿಯನ್ನು ಬದಲಿಸುವುದಾಗಿ ಪ್ರಕಟಿಸಿದರೂ 'ಎಳೆದಾಟ'ಗಳು ಮುಂದುವರಿಯುತ್ತಿವೆ. ಉತ್ತರ ದಿಲ್ಲಿಯ ನಂದ್‌ನಗಿರಿಯಲ್ಲಿ ಗಂಭೀರ ಪರಿಸ್ಥಿತಿ ಮುಂದುವರೆಯುತ್ತಿದೆ. ಇದು ಪೂರ್ವ ದಿಲ್ಲಿಯ ತ್ರಿಲೋಕಪುರಿಯಿಂದ ಬಹಳ ದೂರವೇನೂ ಇರದ ಸ್ಥಳ. ಎರಡು ಕೋಮುಗಳ ನಡುವಿನ ಯಾವುದೋ ವಿವಾದದ ಮೇಲೆ ಕಳೆದ ವಾರ ಕೋಮು ತಿಕ್ಕಾಟಗಳು ನಡೆದಿವೆ. ಮಾಧ್ಯಮ ವರದಿಗಳ ಪ್ರಕಾರ ಇಲ್ಲಿಯೂ ಗಲಭೆಕೋರರಿಗೆ ಕುಮ್ಮಕ್ಕು ನೀಡಿದ್ದು ಬಿಜೆಪಿ ಮುಖಂಡರೇ. ದೀಪಾವಳಿಯ ರಾತ್ರಿಯಂದು ಪಟಾಕಿ ಸಿಡಿಸುವಲ್ಲಿ ನಡೆಯುವ ಎಂದಿನ ವಿವಾದಗಳನ್ನು ಬಳಸಿಕೊಂಡು ಸಮಯಪುರ್ ಬದ್ಲಿ ಮತ್ತು ಮಂಜು ಕಾ ತಿಲಾದಲ್ಲಿ ಕೋಮು ಸೆಳೆತಗಳನ್ನು ಉಲ್ಬಣಗೊಳಿಸಲಾಗಿದೆ. ಈ ಘಟನೆಗಳಲ್ಲಿ 50ವರ್ಷದ ಮಹಿಳೆಯೊಬ್ಬರು ಪ್ರಾಣ ಕಳಕೊಂಡಿದ್ದಾರೆ, ಸುಮಾರು 40 ಜನ ಗಾಯಗೊಂಡಿದ್ದಾರೆ.

ಈ ದೀಪಾವಳಿಯಂದು ದಿಲ್ಲಿಯ ತ್ರಿಲೋಕಪುರಿ ಪ್ರದೇಶದ ದೃಶ್ಯಗಳು–ಮುಂಬರುವ ಚುನಾವಣೆಗೆ ಸಿದ್ಧತೆ?



'ವಿಶಿಷ್ಟ ತರಹೆ'ಯ ಲಾಂಛನ

ಕಟ್ಟಾ ಹಿಂದುತ್ವ ಅಜೆಂಡಾವನ್ನು ಕ್ರೋಡೀಕರಿಸುವ ಮತ್ತು ರಾಷ್ಟ್ರೀಯ ರಾಜಕೀಯದಲ್ಲಿ ಆರೆಸ್ಸೆಸ್/ಬಿಜೆಪಿಯ ಆಳ್ವಿಕೆಯನ್ನು ಮುಂದುವರೆಸುತ್ತಲೇ ಇರಬಲ್ಲ ಏಕೈಕ ಆಧಾರವಾಗಿ ಕೋಮುವಾದಿ ಧ್ರುವೀಕರಣವನ್ನು ತೀಕ್ಷ್ಣಗೊಳಿಸುವ ಪ್ರಕ್ರಿಯೆಯನ್ನು ಸ್ವತಃ ಪ್ರಧಾನ ಮಂತ್ರಿಗಳೇ ಮುಂದೊಯ್ದಿದ್ದಾರೆ. ಮುಂಬೈಯಲ್ಲಿ ಮಾಧ್ಯಮಗಳು ಇದನ್ನು ವ್ಯಾಪಕವಾಗಿ ವರದಿ ಮಾಡಿವೆ. ಪ್ರಧಾನ ಮಂತ್ರಿಗಳ ವೆಬ್‌ಸೈಟಿನಲ್ಲಿರುವ ಒಂದು ಭಾಷಣವನ್ನು ಕೇಳಿದ ಒಬ್ಬ ರಾಜಕೀಯ ವಿಶ್ಲೇಷಕರ ಈ ಟಿಪ್ಪಣಿಯನ್ನು ನೋಡಿ: "ಭಾರತದ ಪ್ರಸಕ್ತ ಪ್ರಧಾನ ಮಂತ್ರಿಗಳು ಪುನಶ್ಚೇತನಗೊಂಡ ಹಿಂದೂವಾದದ ಒಂದು ವಿಶಿಷ್ಟ ತರಹದ ಲಾಂಛನವಾಗಿ ತನ್ನನ್ನು ಪುನರ್ರೂಪಿಸಿಕೊಂಡಿದ್ದಾರೆ ಎಂಬುದನ್ನು ಯಾರು ತಾನೇ ನಿರಾಕರಿಸಲು ಸಾಧ್ಯ?"

ಈ 'ವಿಶಿಷ್ಟ ತರಹೆ' ಎಂಬುದು ಪ್ರಧಾನ ಮಂತ್ರಿಗಳು ಹೆಮ್ಮೆ ಪಡುವ ಭಾರತದ ಸುದೂರ ಭೂತಕಾಲವನ್ನು ಸೂಚಿಸುತ್ತದೆ. ಇದರಲ್ಲಿ ಅವರು ಇತಿಹಾಸದ ಸ್ಥಾನದಲ್ಲಿ ಪುರಾಣವನ್ನು, ತತ್ವಶಾಸ್ತ್ರದ ಸ್ಥಳದಲ್ಲಿ ಮತಶಾಸ್ತ್ರವನ್ನು ಲೀಲಾಜಾಲವಾಗಿ ಕೂರಿಸುತ್ತಾರೆ.

ಇಂತಹ ಒಂದು ದುಷ್ಟ ಅಜೆಂಡಾವನ್ನು ನಿರಂತರವಾಗಿ ಅನುಸರಿಸುವುದು ಭಾರತದ ನಮ್ಮ ಆಧುನಿಕ ಜಾತ್ಯಾತೀತ ಪ್ರಜಾಸತ್ತಾತ್ಮಕ ಗಣ–ತಂತ್ರಕ್ಕೆ ವಿನಾಶಕಾರಿಯಾಗುತ್ತದೆ. ಭಾರತೀಯ ಜನತೆ ಈ ಅಪಾಯವನ್ನು ನೇರವಾಗಿ ಎದುರಿಸಬೇಕಾಗಿದೆ. ಅದಕ್ಕಾಗಿ ಕೋಮುವಾದಿ ಶಕ್ತಿಗಳನ್ನು ಸೋಲಿಸಬೇಕಾಗಿದೆ. ಆಮೂಲಕ ನಮ್ಮ ಜಾತ್ಯಾತೀತ ಪ್ರಜಾಸತ್ತಾತ್ಮಕ ಗಣತಂತ್ರವನ್ನು ಒಂದು ಉನ್ಮತ್ತ ಅಸಹಿಷ್ಣು ಫ್ಯಾಸಿಸ್ಟ್ ಮಾದರಿ 'ಹಿಂದೂರಾಷ್ಟ್ರ'ವಾಗಿ ಪರಿವರ್ತಿಸುವ ಆರೆಸ್ಸೆಸ್ ಕಣ್ಣೋಟವನ್ನು ತಿರಸ್ಕರಿಸಬೇಕಾಗಿದೆ. ಒಂದು ಐಕ್ಯ ಜಾತ್ಯಾತೀತ ಪ್ರಜಾಪ್ರಭುತ್ವವಾದಿ ಭಾರತದ ಬುನಾದಿಯನ್ನು ಭದ್ರಗೊಳಿಸಿದಾಗ ಮಾತ್ರವೇ ನಮ್ಮೆಲ್ಲ ಜನತೆಗೆ ಒಂದು ಉತ್ತಮ ಭಾರತವನ್ನು ನಿರ್ಮಿಸುವ ಸಮರ ನಿರ್ಣಾಯಕವಾಗಿ ಮುಂದಕ್ಕೆ ಚಲಿಸಲು ಸಾಧ್ಯ.

'ಮಿತವ್ಯಯ'ದ ಹೆಸರಿನಲ್ಲಿ ಜನಸಾಮಾನ್ಯರ ಸಬ್ಸಿಡಿಗಳಲ್ಲಿ ಕಡಿತ

ವಿಶ್ವಬ್ಯಾಂಕ್–ಐಎಂಎಫ್ ನ ಆರ್ಥಿಕ ನವ–ಉದಾರವಾದಿ ಆರ್ಥಿಕ ಧೋರಣೆಗಳ ಪಾಶ್ಚಿಮಾತ್ಯ ದೇಶಗಳನ್ನು ಅನುಸರಿಸಿ ಮೋದಿ ಸರಕಾರವೂ 'ಮಿತವ್ಯಯ'ದ ಕ್ರಮಗಳನ್ನು ಜಾರಿ ಮಾಡಲು ನಿರ್ಧರಿಸಿದೆ. ಇದರಲ್ಲಿ ಒಂದು 'ಯೋಜನೇತರ ವೆಚ್ಚಗಳಲ್ಲಿ 10ಶೇ. ಕಡಿತ'. ನಿಜ, ಸರಕಾರದ ಪ್ರಕಟಣೆಯಲ್ಲಿ ಮೊದಲು ಕಾಣಿಸುವುದು ಸರಕಾರೀ ಅಧಿಕಾರಿಗಳಿಗೆ ಮೊದಲ ದರ್ಜೆಯ ಪ್ರಯಾಣದಲ್ಲಿ ಕಡಿತ, ಪಂಚತಾರಾ ಹೋಟೇಲುಗಳಲ್ಲಿ ಕಡಿತ, ನಂತರ ಯೋಜನೇತರ ವೆಚ್ಚಗಳಲ್ಲಿ ಕಡಿತ, ಅಂದರೆ ನೇರ ಮಾತುಗಳಲ್ಲಿ ಹೇಳುವುದಾದರೆ, ಬಡಜನರಿಗೆ ನೀಡುವ ಸಬ್ಸಿಡಿಗಳಲ್ಲಿ ಕಡಿತ. ಪ್ರಮಾಣದ ದೃಷ್ಟಿಯಿಂದ ನೋಡಿದರೆ ಈ 'ಮಿತವ್ಯಯ'ದ ಕ್ರಮಗಳಲ್ಲಿ ಸಬ್ಸಿಡಿ ಕಡಿತಗಳದ್ದೇ ಸಿಂಹಪಾಲು. ಅಂದರೆ ಜನಗಳಿಗೆ ತುಸುವಾದರೂ ಪರಿಹಾರ ಒದಗಿಸುವ ಯೋಜನೆಗಳ, ಕಲ್ಯಾಣ ಕ್ರಮಗಳ ವೆಚ್ಚದಲ್ಲಿ 10ಶೇ. ಕಡಿತ.

ವೆಚ್ಚ ಕಡಿತ ಮಾಡುವ ಈ 'ಯೋಜನೇತರ' ಬಾಬ್ತುಗಳು ಯಾವವು ಎಂದು ಸರಕಾರದ ಈ ಪ್ರಕಟಣೆ ತಿಳಿಸಿಲ್ಲ. ಆದರೆ ಅಸ್ಸಾಂನ ಕಾಂಗ್ರೆಸ್ ಮುಖ್ಯಮಂತ್ರಿಗಳ ಪ್ರತಿಕ್ರಿಯೆ ಇದರ ಸಂಕೇತ ನೀಡುತ್ತದೆ. 'ತಮ್ಮ ರಾಜ್ಯದ ಹಲವು ಉದ್ಯೋಗಾವಕಾಶ ನಿರ್ಮಾಣ ಕಾರ್ಯಕ್ರಮಗಳಿಗೆ ಕೇಂದ್ರ ಸರಕಾರ ನೀಡಬೇಕಾದ ಮೊತ್ತಗಳನ್ನು ಕಡಿತ ಮಾಡಲಾಗಿದೆ' ಎಂದು ಅವರು ಟೀಕಿಸಿದ್ದಾರೆ.

ಅವರ ಸರಕಾರ ವಿವಿಧ ಇಲಾಖೆಗಳಲ್ಲಿ ಖಾಲಿಯಿರುವ 53,420 ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ಮತ್ತು 8,000 ಕಾನ್‌ಸ್ಟೇಬಲ್‌ಗಳನ್ನು ನೇಮಿಸಲು ನಿರ್ಧರಿಸಿತ್ತಂತೆ. ಮೋದಿ ಸರಕಾರದ 'ಮಿತವ್ಯಯ'ದ ಹೆಸರಿನಲ್ಲಿ ಖಾಲಿ ಹುದ್ದೆಗಳನ್ನು ತುಂಬುವುದರ ಮೇಲೆ ತರುವ ನಿಷೇಧ ಇದನ್ನು ಬಹಳವಾಗಿ ತಟ್ಟುತ್ತದೆ ಎಂದು ಅವರು ಆಕ್ರೋಶ ವ್ಯಕ್ತಪಡಿಸಿದ್ದಾರೆ. ಅಸ್ಸಾಂನಲ್ಲಿ ಯುವಜನರು ಉದ್ಯೋಗಾವಕಾಶ ನಿರ್ಮಾಣಕ್ಕೆ ಸರಕಾರವನ್ನೇ ಅವಲಂಬಿಸಬೇಕಾಗುತ್ತದೆ, ಏಕೆಂದರೆ ಗುಜರಾತಿನಂತೆ ಖಾಸಗೀ ವಲಯದವರು ಇಲ್ಲಿಗೆ ಬರುವುದಿಲ್ಲ ಎಂದು ಹೇಳಿರುವ ಅಸ್ಸಾಂನ ಮುಖ್ಯಮಂತ್ರಿಗಳಿಗೆ ಖಾಸಗಿಯವರನ್ನೇ ಅವಲಂಬಿಸುವ ನವ–ಉದಾರವಾದಿ ಧೋರಣೆಗಳಲ್ಲೇ ಅಡಕವಾಗಿರುವ ಇಂತಹ ಅಸಮಾನತೆಗಳ ಬಗ್ಗೆ ಈಗ ಜ್ಞಾನೋದಯವಾದಂತಿದೆ. ಏಕೆಂದರೆ ಅವರ ಪಕ್ಷದ ನೇತೃತ್ವದ ಯುಪಿಎ ಸರಕಾರದ ಧೋರಣೆಗಳ ತಾರ್ಕಿಕ ಮುಂದುವರಿಕೆಯೇ ಈಗ ಮೋದಿ ಸರಕಾರದ ಈ ಕ್ರಮಗಳು.

ಇದರಲ್ಲಿ ಮಹಾತ್ಮ ಗಾಂಧಿ ಗ್ರಾಮೀಣ ಉದ್ಯೋಗಾವಕಾಶ ಯೋಜನೆಯಲ್ಲಿ ಕಡಿತದ ನಿಲುವೂ ಸೇರಿದೆ. ಅಸ್ಸಾಂ ಮುಖ್ಯಮಂತ್ರಿಗಳು ಈ ಕಡಿತವನ್ನು ಈಗ ಖಂಡಿಸುತ್ತಿದ್ದಾರೆ. ಆದರೆ ಅವರ ಪಕ್ಷ ತಮ್ಮ ಸಾಧನೆಯೆಂದು ಹೇಳಿಕೊಳ್ಳುವ ಈ 'ನರೇಗ'ದ ಕತ್ತು ಹಿಸುಕುವ ಪ್ರಯತ್ನವನ್ನು ಪ್ರತಿರೋಧಿಸಿ ಅದನ್ನು ರಕ್ಷಿಸಿಕೊಳ್ಳುವ ಯಾವ ಕಾರ್ಯಕ್ರಮವನ್ನೂ ಇದುವರೆಗೆ ರೂಪಿಸಿಲ್ಲ. ಈ ಅಂಕಣದಲ್ಲಿ ಕಳೆದ ವಾರ ಗಮನಿಸಿದಂತೆ ಎಡಪಕ್ಷಗಳು ಮಾತ್ರ ಈ ಬಗ್ಗೆ ರಾಷ್ಟ್ರವ್ಯಾಪಿ ಪ್ರತಿಭಟನೆ ನಡೆಸಲು ನಿರ್ಧರಿಸಿವೆ.

ತ್ರಿಪುರಾದ ಎಡರಂಗ ಸರಕಾರದ ಮುಖ್ಯಮಂತ್ರಿಗಳು ಪ್ರಧಾನ ಮಂತ್ರಿಗಳಿಗೆ ಪತ್ರ ಬರೆದು ಇದು ಬಡವರಿಗೆ ನೀಡಿರುವ ಹಕ್ಕು, ಈ ವಿಷಯದಲ್ಲಿ ಸರಕಾರದ ಹೊಣೆಗಾರಿಕೆಯನ್ನು ಬಜೆಟ್ ಅಥವ ಬೇರೆ ಯಾವ ಮಿತಿಗಳ ಹೆಸರಿನಲ್ಲಿ ತಪ್ಪಿಸಿಕೊಳ್ಳಲು ಅವಕಾಶವಿಲ್ಲ ಎಂದು ನೆನಪಿಸಿದ್ದಾರೆ. ಹೊಸ ಸರಕಾರ ಈ ಕಾನೂನನ್ನು ಇನ್ನಷ್ಟು ಉತ್ತಮಪಡಿಸುತ್ತದೆ ಎಂಬ ನಿರೀಕ್ಷೆ ಜನರಿಗಿತ್ತು, ಆದರೆ ಸರಕಾರ ತದ್ವಿರುದ್ಧವಾಗಿ ಸಾಗುತ್ತಿದೆ, ಇದು ಗ್ರಾಮೀಣ ಪ್ರದೇಶಗಳ ಬಡವರನ್ನು, ಅದರಲ್ಲೂ ಪರಿಶಿಷ್ಟ ಜಾತಿಗಳು ಮತ್ತು ಬುಡಕಟ್ಟುಗಳಿಗೆ, ಅಲ್ಪಸಂಖ್ಯಾತ ಕೋಮುಗಳಿಗೆ ಸೇರಿದ ಜನಗಳನ್ನು ತೀವ್ರವಾಗಿ ತಟ್ಟುತ್ತದೆ ಎಂದು ಅವರು ಎಚ್ಚರಿಸಿದ್ದಾರೆ.

ಈ ನಡುವೆ ಪ್ರಧಾನಮಂತ್ರಿಗಳು ಸ್ವಕ್ಷೇತ್ರ ವಾರಣಾಸಿಗೆ ಭೇಟಿ ನೀಡುವ ಸಲುವಾಗಿ ಭರದ ಸಿದ್ಧತೆಗಳು ನಡೆದಿವೆ. ಅವರ ಜೊತೆಗೆ 5 ರಿಂದ 6 ಕೇಂದ್ರ ಮಂತ್ರಿಗಳೂ ಹೋಗಲಿದ್ದಾರಂತೆ. ಪ್ರಧಾನ ಮಂತ್ರಿಗಳ ಇಷ್ಟೊಂದು ದೊಡ್ಡ ಪರಿವಾರ ಬರುತ್ತಿರುವಾಗ ಭದ್ರತೆಯ ಭಾರೀ ಬಂದೋಬಸ್ತ್ ನಡೆಯಲೇಬೇಕು ತಾನೇ! ಪ್ರಧಾನ ಮಂತ್ರಿಗಳು 'ದತ್ತು ತೆಗೆದುಕೊಳ್ಳಲಿರುವ' ಹಳ್ಳಿಯಲ್ಲಿ ಹೆಲಿಪ್ಯಾಡ್‌ಗೆ ನಡೆದಿರುವ ಸಿದ್ಧತೆಗಳನ್ನು ಟಿವಿ ಚಾನೆಲ್‌ಗಳು ಬಿತ್ತರಿಸಿವೆ. ಬಹುಶಃ ಇವಕ್ಕೆಲ್ಲ 'ಮಿತವ್ಯಯ'ದ ಕ್ರಮಗಳು ಅನ್ವಯವಾಗುವುದಿಲ್ಲ.

'ಒಳ್ಳೆಯ ದಿನ'ಗಳ ಡೈರಿ

ವೇದರಾಜ ಎನ್.ಕೆ.



ಸಾಮಾಜಿಕ ಮಾಧ್ಯಮಗಳಲ್ಲಿ ಅಪಪ್ರಚಾರ : ನುಡಿಗೂ ನಡೆಗೂ ಎಷ್ಟೊಂದು ಅಂತರ!

'ಅಭಿವೃದ್ಧಿ' ಅಜೆಂಡಾದ ಆಚೆ


ದೇಶದ ರಾಜಧಾನಿ ಮತ್ತು ಹಲವು ರಾಜ್ಯಗಳ ರಾಜಧಾನಿಗಳಲ್ಲೂ ಕೋಮುವಾದಿ ದ್ವೇಷವನ್ನು ಉಗುಳುವ ಧ್ವನಿ ಸಂದೇಶಗಳು ಅಂತರ್ಜಾಲದಲ್ಲಿ, ಮೊಬೈಲುಗಳಲ್ಲಿ ಬಹಳವಾಗಿ ಪ್ರಸಾರವಾಗುತ್ತಿವೆ. ಒಂದು ನಿರ್ದಿಷ್ಟ ಕೋಮಿನ ವಿರುದ್ಧ ಗುರಿ ಮಾಡಿರುವ ಈ ಸಂದೇಶಗಳನ್ನು ಇ–ಮೇಲ್, ವಾಟ್ಸ್‌ಆಪ್ ಮುಂತಾದವುಗಳ ಮೂಲಕ ಕಳಿಸಲಾಗುತ್ತಿದೆ. ಈ ಬಗ್ಗೆ ತನಿಖೆ ನಡೆಸಿ ಅಪರಾಧಿಗಳನ್ನು ತಕ್ಷಣವೇ ಪತ್ತೆ ಹಚ್ಚಬೇಕು ಎಂದು **ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ(ಎಐಡಿಡಬ್ಲ್ಯುಎ) ಗೃಹ ಮಂತ್ರಿಗಳಿಗೆ ಮನವಿ ಪತ್ರವನ್ನು ಸಲ್ಲಿಸಿದೆ.**

"ನಿಮಗೆ ತಿಳಿದೇ ಇದೆ, ಕಳೆದ ಕೆಲವು ತಿಂಗಳಲ್ಲಿ ಹಲವು ಕೋಮುಹಿಂಸಾಚಾರದ ಘಟನೆಗಳು ನಡೆದಿವೆ, ಇವಕ್ಕೆ ಕಿಡಿ ಹೊತ್ತಿಸಿದ್ದು, ಸ್ವಂತ ಆಯ್ಕೆಯಿಂದ ಆದ ಮದುವೆಗಳು ಅಲ್ಪಸಂಖ್ಯಾತರ ಕೋಮುವಾದಿ ಪ್ರಚಾರದ ಒಂದು ಭಾಗ ಎನ್ನುವಂತೆ ತಪ್ಪಾಗಿ ಚಿತ್ರಿಸುವ ಮೂಲಕ. ಇಂತಹ ಸನ್ನಿವೇಶದಲ್ಲಿ ಅಂತರ್ಜಾಲ ಮತ್ತು ಸಾಮಾಜಿಕ ಮಾಧ್ಯಮದ ಮೂಲಕ ಇಂತಹ ಕೀಳುಭಾವನೆಯ ಅಪಪ್ರಚಾರ ಪರಿಸ್ಥಿತಿಯನ್ನು ಇನ್ನಷ್ಟು ಬಿಗಡಾಯಿಸಿ ಕೋಮು ವೈಷಮ್ಯ ಮತ್ತು ದ್ವೇಷವನ್ನು ಮತ್ತಷ್ಟು ತೀವ್ರಗೊಳಿಸುತ್ತದೆ" ಎಂದು ಈ ಮನವಿ ಪತ್ರದಲ್ಲಿ ನೆನಪಿಸಲಾಗಿದೆ.

ಇಂತಹ ಕೋಮುದ್ವೇಷಪೂರಿತ ಅಂಶಗಳನ್ನು, ವಿಶೇಷವಾಗಿ ಮೊಬೈಲುಗಳ ಮೂಲಕ ವಿನಿಮಯ ಮಾಡುವ ಅಪರಾಧಿಗಳನ್ನು ಪತ್ತೆ ಹಚ್ಚಿ ಅವರ ವಿರುದ್ಧ ಕಟ್ಟುನಿಟ್ಟಾದ ಕ್ರಮಗಳನ್ನು ಜರುಗಿಸಬೇಕು, ಗ್ರಹಮಂತ್ರಿಗಳು ಇವನ್ನು ಗಮನಿಸಿ **ಕೋಮು ಸಾಮರಸ್ಯವನ್ನು ಕಾಯ್ದುಕೊಳ್ಳಲು ಸಕಲ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಎಐಡಿಡಬ್ಲ್ಯುಎ ತನ್ನ ಮನವಿ ಪತ್ರದಲ್ಲಿ ಆಗ್ರಹಿಸಿದೆ.**

ನಮ್ಮ ದೇಶದ ಗ್ರಹಮಂತ್ರಿಗಳೂ ಕೋಮುಗಲಭೆಗಳಿಗೆ ಕಿಡಿ ಹೊತ್ತಿಸಲು ಸಾಮಾಜಿಕ ಮಾಧ್ಯಮವನ್ನು ಬಳಸಲಾಗುತ್ತಿದೆ ಎಂದು ಒಪ್ಪಿಕೊಂಡಿದ್ದಾರೆ, ಭಾರತದಲ್ಲಿ ಅಲ್ಲ, ಮೊನಾಕೊದಲ್ಲಿ, ಇಂಟರ್‌ಪೋಲ್(ಅಂತರ್‍ರಾಷ್ಟ್ರೀಯ ಪೋಲಿಸ್ ಸಂಘಟನೆ)ನ 83ನೇ ಜನರಲ್ ಅಸೆಂಬ್ಲಿಯಲ್ಲಿ (ಪಿಟಿಐ, ನವಂಬರ್5). ಇದರಲ್ಲಿಯೂ ವಾಸ್ತವ ಜಗತ್ತಿನಲ್ಲಿ ಆಗುತ್ತಿರುವಂತೆ ಮಹಿಳೆಯರು ಮತ್ತು ಮಕ್ಕಳೇ ಪ್ರಮುಖ ಬಲಿಗಳು ಎಂದೂ ಅವರು ತಮ್ಮ ಭಾಷಣದಲ್ಲಿ ಹೇಳಿದ್ದಾರೆ. ಸಾಮಾಜಿಕ ಜಾಲಗಳು ಖಾಸಗಿ ಮಾಹಿತಿ ಬಳಕೆದಾರರ ಸಂಖ್ಯೆಯನ್ನು ವಿಪರೀತವಾಗಿ ಹಿಗ್ಗಿಸಿವೆ, ಈ ಮೂಲಕ ಮಹಿತಿಗಳನ್ನು ಕಳವು ಮಾಡಿ ಅವುಗಳನ್ನು ದುರುಪಯೋಗ ಪಡಿಸಿಕೊಳ್ಳಲಾಗುತ್ತಿದೆ ಎಂದೂ ಅವರು ಹೇಳಿರುವುದಾಗಿ ವರದಿಯಾಗಿದೆ.

ಪುಟ 15 ಕ್ಕೆ



'ಮನ ಕೀ ಬಾತ್'

ಇದು ಪ್ರಧಾನ ಮಂತ್ರಿಗಳು ಅಮೆರಿಕಾ ಭೇಟಿಯಿಂದ ಮರಳಿದ ಮೇಲೆ ಆರಂಭಿಸಿರುವ ಕಾರ್ಯಕ್ರಮ– ತಿಂಗಳಿಗೊಮ್ಮೆ ಆಕಾಶವಾಣಿಯಿಂದ ದೇಶಬಾಂಧವರನ್ನುದ್ದೇಶಿಸಿ ತಮ್ಮ ಮನದಾಳದ ಮಾತುಗಳನ್ನು ಆಡಲಿಕ್ಕೆಂದು. ಎಲ್ಲ ಖಾಸಗಿ ಚಾನೆಲ್‌ಗಳೂ ಇದನ್ನು ಮರುಪ್ರಸಾರ ಮಾಡುತ್ತವೆ. ಇದು ಅಮೆರಿಕಾದಲ್ಲಿ ಅವರು ಕಲಿತು ಬಂದಿರುವ ಒಂದು ಸಂಗತಿ ಎನ್ನಲಾಗುತ್ತಿದೆ. ಅಲ್ಲಿ ಅಧ್ಯಕ್ಷ ಒಬಾಮ ಪ್ರತಿವಾರ ರೇಡಿಯೋದಲ್ಲಿ ಮಾತಾಡುತ್ತಾರೆ.

ಇರಲಿ, ಈ ತಿಂಗಳ ನಮ್ಮ ಪ್ರಧಾನಿಗಳ ಮನದ ಮಾತು–

"ನಿಮ್ಮ ಈ ಪ್ರಧಾನ ಸೇವಕನಲ್ಲಿ ವಿಶ್ವಾಸವಿರಲಿ.... ಹೊರಗೆ ಹೋಗಿರುವ ಪ್ರತಿಯೊಂದು ಪೈಸೆ ಮರಳಿ ಬರುತ್ತದೆ ಎಂದು ನಾನು ಹೇಳ ಬಯಸುತ್ತೇನೆ." ಮುಂದಿನ ಉಸಿರಲ್ಲೇ ಅವರು ಹೇಳುತ್ತಾರೆ–ವಿದೇಶಗಳಲ್ಲಿ ಪೇರಿಸಿಟ್ಟ ಹಣದ ಮೊತ್ತ ಎಷ್ಟೆಂದು ಯಾರಿಗೂ ಗೊತ್ತಿಲ್ಲ, ಹಿಂದಿನ ಸರಕಾರಕ್ಕೂ ಗೊತ್ತಿರಲಿಲ್ಲ!

ಇದಕ್ಕೆ ಸ್ಪಂದಿಸಿರುವ ಖ್ಯಾತ ವ್ಯಂಗ್ಯಚಿತ್ರಕಾರ ಪಿ.ಮಹಮ್ಮದ್ ಅವರ ಈ ಕಾರ್ಟೂನ್ (ಕೃಪೆ: ವಿಜಯ ಕರ್ನಾಟಕ) ನೋಡಿ:

'ಈಗ ದಿಲ್ಲಿಯಲ್ಲಿ ಆರೆಸ್ಸೆಸ್‌ನದ್ದೇ ಕಾರುಬಾರು'

ಹೀಗೆಂದು ರಾಷ್ಟ್ರೀಯ ಪತ್ರಿಕೆಯೊಂದು ವರದಿ ಮಾಡಿದೆ.(ದಿ ಹಿಂದೂ, ನವಂಬರ್ 2) ಬೇರೆ ಪತ್ರಿಕೆಗಳಲ್ಲೂ ಇಂತಹ ವರದಿಗಳು–ವಿಶ್ಲೇಷಣೆಗಳು ಬಹಳಷ್ಟು ಬರುತ್ತಿವೆ. ಒಂದೆಡೆಯಲ್ಲಿ, ಮಂತ್ರಿಗಳನ್ನು ನಿಯಮಿತವಾಗಿ ಭೇಟಿ ಮಾಡಿ ಸರಕಾರದ ಧೋರಣೆಗಳ ಮೇಲೆ ಪ್ರಭಾವ ಬೀರುವುದು, ಇನ್ನೊಂದೆಡೆಯಲ್ಲಿ ಹೊರಗೆ 'ಸಾರ್ವಜನಿಕ ಅಭಿಪ್ರಾಯ'ಗಳನ್ನು ಮೂಡಿಸುವುದು ಅದರ ಕಾರ್ಯತಂತ್ರ ಎನ್ನಲಾಗಿದೆ. ಅರೆಸ್ಸೆಸ್ ಮತ್ತು ಬಿಜೆಪಿಯ ಕಾಳಜಿಗಳು ಸಮಾನವಾಗಿವೆ, ಆದರೆ ಅದು ನೇರವಾಗಿ ಸರಕಾರದೊಂದಿಗೆ ವ್ಯವಹರಿಸುವುದಿಲ್ಲ ಎಂದು ಒಬ್ಬ ಬಿಜೆಪಿ ಮುಖಂಡರು ಹೇಳಿದರೂ ಆರು ಮಂತ್ರಿಗಳು ಕಳೆದ ವಾರವಷ್ಟೇ ಅರೆಸ್ಸೆಸ್ ಮತ್ತು ಅದರ 'ಪರಿವಾರ'ದ ಸಂಘಟನೆಗಳೊಂದಿಗೆ ಸಮಾಲೋಚನೆ ನಡೆಸಿರುವುದು ವರದಿಯಾಗಿದೆ.

ಬಿಜೆಪಿಯೊಳಗೆ ಒಂದು ಸಂಯೋಜನಾ ಸಮಿತಿ ರಚಿಸಲಾಗಿದೆಯಂತೆ. ಆ ಪಕ್ಷ ಆರೆಸ್ಸೆಸ್‌ನ ಅಜೆಂಡಾದಿಂದ ದೂರ ಸರಿಯದಂತೆ ನೋಡಿಕೊಳ್ಳುವುದು ಇದರ ಕೆಲಸವಂತೆ. ಆರೆಸ್ಸೆಸ್ ಕಳಿಸಿದ ಪ್ರಧಾನ ಕಾರ್ಯದರ್ಶಿಯೊಬ್ಬರು ಇದರ ಮುಖ್ಯಸ್ಥರು. ಕಳೆದ ತಿಂಗಳಿಂದ ಆರೆಸ್ಸೆಸ್‌ನ ಸರ್ವೋಚ್ಚ ಮುಖಂಡರೂ ಸೇರಿದಂತೆ ಹಲವು ಪ್ರಮುಖ ಮುಖಂಡರು ನಿವೃತ್ತ ಸೇನಾಧಿಕಾರಿಗಳೂ ಸೇರಿದಂತೆ ಬುದ್ಧಿಜೀವಿಗಳು, ಪತ್ರಕರ್ತರು, ಉದ್ಯಮಿಗಳು, ವಕೀಲರು ಮತ್ತು ಇತರ 'ವಿಚಾರ ನೇತಾರರು'ಗಳನ್ನು ಭೇಟಿ ಮಾಡುತ್ತಿದ್ದಾರೆ–'ಸಂಘದ ಕಣ್ಣೋಟವನ್ನು ಹಂಚಿಕೊಂಡು ಒಮ್ಮತವನ್ನು ರೂಪಿಸಲಿಕ್ಕಾಗಿ'. ಇಂತಹ ಕಣ್ಣೋಟದಲ್ಲಿ ಈಶಾನ್ಯ ಭಾರತದ ಬುಡಕಟ್ಟು ಪ್ರದೇಶಗಳಿಗೆ ಸ್ವಾಯತ್ತತೆ ನೀಡಿರುವ ಸಂವಿಧಾನದ ಆರನೇ ಶೆಡ್ಯೂಲನ್ನು ರದ್ದು ಮಾಡುವ ಸಂವಿಧಾನ ತಿದ್ದುಪಡಿ ಇಂತಹ ಕಣ್ಣೋಟ ಮತ್ತು ಒಮ್ಮತದಲ್ಲಿ ಸೇರಿದೆ ಎಂಬುದು ಗಮನಾರ್ಹ. ಮುಸ್ಲಿಂ ಬಾಂಗ್ಲಾದೇಶಿ 'ವಲಸಿಗ'ರನ್ನು ಹಿಂದಕ್ಕೆ ಕಳಿಸುವುದಂತೂ ಈ ಕಣ್ಣೋಟದಲ್ಲಿ ಇದ್ದೇ ಇರುತ್ತದೆ!



Impressed by RSS punctuality, Govt offices have installed 'Watch Dogs'.

ಆರೆಸ್ಸೆಸ್‌ನ ಕಾಲನಿಷ್ಠೆಯಿಂದ ಉತ್ತೇಜಿತರಾಗಿ ಸರಕಾರೀ ಕಚೇರಿಗಳಲ್ಲಿ ಗಂಟೆ–ಗಂಟೆಗೂ ನೆನಪಿಸುವ 'ಕಾವಲು ಗಡಿಯಾರ'ಗಳನ್ನು ಹಾಕಲಾಗಿದೆ

– ಟೈಂಸ್ ಆಫ್ ಇಂಡಿಯಾದಲ್ಲಿ ನೈನನ್ ರವರ ವ್ಯಂಗ್ಯ

ಕರ್ನಾಟಕದ ಕಮ್ಯೂನಿಸ್ಟ್ ಚಳುವಳಿಯ ನೇತಾರರಾಗಿದ್ದ ಎನ್.ಕೆ. ಉಪಾಧ್ಯಾಯ-ಎನ್. ಎಲ್ ಉಪಾಧ್ಯಾಯ ಸಹೋದರರು ಹಿರಿಯ ಸ್ವಾತಂತ್ರ್ಯ ಹೋರಾಟಗಾರರು, ಕರ್ನಾಟಕ ಏಕೀಕರಣ ಚಳುವಳಿಯ ಮುಂದಾಳುಗಳೂ ಕೂಡ. 1994 ರಲ್ಲಿ ಕಿರಿಯ ಸಹೋದರ ಕಾಮ್ರೇಡ್ ಎನ್.ಕೆ. ಉಪಾಧ್ಯಾಯ ಅವರ ಕರ್ನಾಟಕದಲ್ಲಿನ ಸ್ವಾತಂತ್ರ್ಯ ಹೋರಾಟದ ನೆನಪುಗಳನ್ನು ಹಾಗೂ ಅನುಭವಗಳನ್ನು ಆಧರಿಸಿ ಬರೆದ ಲೇಖನವಿದು. 1994 ರ 'ಐಕ್ಯರಂಗ'ದ ಸ್ವಾತಂತ್ರ್ಯ ದಿನದ ವಿಶೇಷಾಂಕದಲ್ಲಿ ಪ್ರಕಟವಾದ ಈ ಲೇಖನ ಈಗ ಮತ್ತೆ 'ಜನಶಕ್ತಿ' ಓದುಗರಿಗಾಗಿ.

ಕರ್ನಾಟಕದಲ್ಲಿ ಸ್ವಾತಂತ್ರ್ಯ ಚಳುವಳಿಯ ಕೆಲವು ನೆನಪುಗಳು

ಎನ್. ಕೆ. ಉಪಾಧ್ಯಾಯ

1920 ರಿಂದಲೂ ದೇಶದ ಸ್ವಾತಂತ್ರ್ಯಕ್ಕಾಗಿ ಬ್ರಿಟಿಷರ ವಿರುದ್ಧ ನಡೆಸಿದ ಧೀಮಂತ ಹೋರಾಟದಲ್ಲಿ ಏಕೀಕರಣಕ್ಕೆ ಮುಂಚಿನ ವಿಭಜಿತ ಕರ್ನಾಟಕದ ಜನತೆಯ, ಸಂಸ್ಥಾನಗಳ ಪ್ರಜೆಗಳ, ರೈತರ, ಕಾರ್ಮಿಕರ, ವಿದ್ಯಾರ್ಥಿಗಳ ಪಾತ್ರ ಚರಿತ್ರಾರ್ಹವಾಗಿತ್ತು. ಕರ್ನಾಟಕದ ಜನತೆ ಕೂಡಾ ಸ್ವಾತಂತ್ರ್ಯಕ್ಕಾಗಿ ದುಬಾರಿ ಬೆಲೆತೆತ್ತಿದ್ದಾರೆ. ಕನ್ನಡಿಗರ-ಕಾರ್ಮಿಕರ ಪಾತ್ರ ಹೆಮ್ಮೆ ಪಡುವಂಥಾದ್ದಾಗಿತ್ತು. ಮಹಾತ್ಮಾಗಾಂಧಿಯರ ಅಹಿಂಸಾ ತತ್ವವನ್ನು ನೆನಸುತ್ತಾ ಬ್ರಿಟಿಷ್ ಗುಲಾಮಗಿರಿಯನ್ನು ನಾಶಗೊಳಿಸುವ ಸಲುವಾಗಿ ಕರ್ನಾಟಕದ ರೈತರೂ, ಕಾರ್ಮಿಕರೂ ಹಿಂಸಾತ್ಮಕ ದಾರಿಯನ್ನೂ ಹಿಡಿಯಬೇಕಾಯಿತು. ಮುಷ್ಕರ,ಹರತಾಳಗಳಿಂದಲೇ ಸಂತೃಪ್ತರಾಗದೆ ರೈಲ್ವೆ ಫಿಷ್‌ಪ್ಲೇಟ್ ತೆಗೆಯುವ, ತಂತಿ ಕತ್ತರಿಸುವ, ರೈಲ್ವೆ ಸ್ಟೇಷನ್‌ಗಳಿಗೆ ದಾಳಿ ಮಾಡುವ, ಕಂದಾಯ ಕಛೇರಿಗಳನ್ನು ಆಕ್ರಮಿಸುವ, ಶಸ್ತ್ರಾಸ್ತ್ರಗಳನ್ನು ವಶಪಡಿಸಿಕೊಳ್ಳುವ ಮಟ್ಟಕ್ಕೂ ಹೋಗಿದ್ದರೆಂಬುದನ್ನು ನೆನಪಿಸಿ ಕೊಂಡರೆ ಛಿದ್ರ ವಿಚಿದ್ರವಾಗಿದ್ದ ಕನ್ನಡಿಗರಲ್ಲಿ ರಾಜ ಮಹಾರಾಜರ, ಪಾಳೆಯಗಾರರ, ದೇಸಾಯಿ, ಜಹಗೀರದಾರ, ಜಮೀನ್ದಾರರ ಹಿಡಿತದಲ್ಲಿದ್ದ ಜನ ತಮ್ಮ ದೇಶಪ್ರೇಮವನ್ನು ತೋರ್ಪಡಿಸಿದ ರೀತಿ ವ್ಯಕ್ತಮಾಡಿದ ಧೈರ್ಯ ನೆನಪಿಸಿ ಕೊಂಡರೆ ಇಂದಿಗೂ ಧಮನಿಗಳಲ್ಲಿ ಬಿಸಿರಕ್ತ ಚಿಮ್ಮುತ್ತದೆ.

ಯಾವುದೇ ದೇಶದ ಸ್ವಾತಂತ್ರ್ಯ- ಸ್ವಾತಂತ್ರ್ಯ ಹೋರಾಟ ಬಹು ದುಬಾರಿ. ವಿದ್ಯಾರ್ಥಿಗಳು ಶಾಲೆ-ಕಾಲೇಜು ಬಿಟ್ಟು ಹೊರನಡೆದರು. ಕಾರ್ಮಿಕರು ಕಾರ್ಖಾನೆ ತ್ಯಜಿಸಿದರು. ರೈತ ಭೂಮಿಯ ಚಿಂತೆ ದೂರಮಾಡಿದ. ಸಾರ್ವಜನಿಕರು ದೇಶವೇ ಸಂಪತ್ತು ಎಂದು ಹೇಳಿ ಪೋಲಿಸರ- ಮಿಲಿಟರಿಯ ಲಾಠಿಯೇಟು ಗುಂಡೇಟುಗಳನ್ನೆಲ್ಲ ಎದುರಿಸಿದರು. ರಕ್ತ ಸುರಿಸಿದರು, ಸೆರೆಮನೆ ಸೇರಿದರು, ಹೆಣವಾಗಿ ಬಿದ್ದರು. ನೌಕರಿ ಹೋಯಿತು, ಹೊಲ ಇಲ್ಲದಂತಾಯಿತು, ಮನೆಮಠಗಳೆಲ್ಲ ಕೈದಕ್ಕದಾದವು. ಆದರೂ ಕರ್ನಾಟಕದ ಜನತೆ ಅಂಜಲಿಲ್ಲ. ಹಿಂಜರಿಯಲಿಲ್ಲ. ಅವರ ಗುರಿ ಒಂದೇ ಆಗಿತ್ತು- ಬ್ರಿಟಿಷರನ್ನು ದೇಶಬಿಟ್ಟು ತೊಲಗಿಸುವುದು. ಸ್ವಾತಂತ್ರ್ಯ ಗಳಿಸುವುದು. ದೇಶದ ಸ್ವಾತಂತ್ರ್ಯವೇ ನಮ್ಮ ಹೊಲ ಉಳಿಸೀತು, ಹೊಲ ಹಂಚಿಕೊಟ್ಟೀತು, ನಮ್ಮ ಕಾರ್ಖಾನೆ ನೌಕರಿ ರಕ್ಷಿಸೀತು, ಹೊಸ ನೌಕರಿ ಸೃಷ್ಟಿಸೀತು, ಮಕ್ಕಳ ಬೌದ್ಧಿಕ ವಿಕಾಸಕ್ಕೆ ಅವಕಾಶ ಮಾಡಿಕೊಟ್ಟೀತು, ದೇಶೀ ಕೈಗಾರಿಕೆಗಳ ಬೆಳವಣಿಗೆ ಮಾಡೀತು, ನಾಗರೀಕ ಹಕ್ಕು ದೊರಕೀತು, ಜನರ ಸುಲಿಗೆ ನಿಲ್ಲಿಸೀತು, ದೇಶದ ಅಭಿವೃದ್ಧಿಯಾದೀತು, ಕರ್ನಾಟಕವನ್ನೊಳಗೊಂಡ ಭಾರತ ಜಗತ್ತಿನ ಅಭಿವೃದ್ಧಿ ಶೀಲ ರಾಷ್ಟ್ರಗಳ ಸಾಲಿನಲ್ಲಿ ಹೆಮ್ಮೆರವಾಗಿ ಮೆರೆದೀತು ಎಂಬುದಾಗಿತ್ತು. ಆಗಸ್ಟ್ 15, 1947ರಂದು ಆಂಗ್ಲ ಬಾವುಟ ಇಳಿಸಿ ರಾಷ್ಟ್ರೀಯ ಧ್ವಜ ಹಾರಿಸಿದ್ದೆವು. ಆದರೆ 47 ವರ್ಷಗಳಲ್ಲಿ ನಮ್ಮೆಲ್ಲರ ಕನಸು ಪೂರ್ಣವಾಗಿ ನನಸಾಗಲಿಲ್ಲ. ಮಾತ್ರವಲ್ಲ ಈಗಿರುವ ಕಾಂಗ್ರೆಸ್ ಸರಕಾರದ ಪ್ರಧಾನ ಮಂತ್ರಿ, ನರಸಿಂಹರಾಯರು 47 ವರ್ಷಗಳ ಮುಂಚೆ ಗಳಿಸಿದ್ದ ಸ್ವಾತಂತ್ರ್ಯಕ್ಕೇನೆ ಅಪಾಯ ತಂದೊಡ್ಡಿದ್ದಾರೆ. ಅಂದು ಬ್ರಿಟೀಷ್ ಗುಲಾಮರಾಗಿ ಅವರ ವಿರುದ್ಧ ಸಮರ ಹೂಡಲಾಯಿತು. ಇಂದು ಅಮೇರಿಕನ್ ಸಾಮ್ರಾಜ್ಯಶಾಹಿಯ ಐಎಂಎಫ್-ವಿಶ್ವಬ್ಯಾಂಕಿನ ಗುಲಾಮಗಿರಿ ಅವುಗಳ ವಿರುದ್ಧ ಸಮರ - ಎಡಪಕ್ಷಗಳು, ಸಂಘಟಿತ ಕಾರ್ಮಿಕವರ್ಗ, ರೈತ ವಿದ್ಯಾರ್ಥಿ, ಯುವಜನತೆ ಕೇಂದ್ರ ಸರ್ಕಾರದ ನೀತಿಗಳ ವಿರುದ್ಧ, ಅಮೇರಿಕನ್ ಸಾಮ್ರಾಜ್ಯಶಾಹಿಗೆ ಶರಣಾಗುವುದರ ವಿರುದ್ಧ ಸಮರ ಸಾರಿದ್ದಾರೆ, ಹೋರಾಟ ನಡೆಸಿದ್ದಾರೆ. ಕಾಯಿದೆ ಭಂಗ ಚಳುವಳಿ ನಡೆಸಿದ್ದಾರೆ. ಅಗತ್ಯ ಬಿದ್ದರೆ ಬ್ರಿಟಿಷರ ವಿರುದ್ಧ ಹಿಡಿದ ಹೋರಾಟದ ದಾರಿ ಹಿಡಿಯಲು


ಕಾಂ. ಎನ್. ಎಲ್. ಉಪಾಧ್ಯಾಯ, ಕಾಂ. ಪಿ. ರಾಮಚಂದ್ರರಾವ್, ಕಾಂ. ಎನ್. ಕೆ. ಉಪಾಧ್ಯಾಯರವರು

ಸಿದ್ಧರಾಗುತ್ತಿದ್ದಾರೆ. ಇಂಥ ಪರಿಸ್ಥಿತಿಯಲ್ಲಿ ಕನ್ನಡಿಗರು ಬ್ರಿಟಿಷರ ವಿರುದ್ಧ ನಡೆಸಿದ್ದ ಹೋರಾಟಗಳ ಕೆಲವಂಶಗಳನ್ನು ನೆನಪಿಸೋಣ. ಅವುಗಳಿಂದ ಸ್ಫೂರ್ತಿ ಪಡೆಯೋಣ.

1920 ರಿಂದ ಆರಂಭ

1942ರ ಕರ್ನಾಟಕವನ್ನು ವೀಕ್ಷಿಸಿದರೆ ಇಂದಿನ 20 ಜಿಲ್ಲೆಗಳ ಪೈಕಿ 7 ಜಿಲ್ಲೆಗಳು ಮತ್ತು ಬೆಂಗಳೂರು ಕಂಟೋನ್‌ಮೆಂಟ್, ಬ್ರಿಟಿಷರ ಆಡಳಿತದಲ್ಲಿದ್ದವು. ಧಾರವಾಡ, ಬೆಳಗಾವ, ಕಾರವಾರ, ಬಿಜಾಪುರ, ಮುಂಬಯಿ ಪ್ರಾಂತದಲ್ಲೂ, ಮಂಗಳೂರು, ಬಳ್ಳಾರಿ ಮದ್ರಾಸ್ ಪ್ರಾಂತದಲ್ಲೂ ಗುಲ್ಬರ್ಗ, ಬೀದರ, ರಾಯಚೂರು, ಹೈದರಾಬಾದ ಸಂಸ್ಥಾನದಲ್ಲೂ ಸೇರಿಕೊಂಡಿದ್ದವು. ಕೊಡಗು ಪ್ರತ್ಯೇಕವಾಗಿಯೆ ಇತ್ತು. ಇವುಗಳಲ್ಲದೆ ಜಮಖಂಡಿ ಮುಧೋಳ, ರಾಮದುರ್ಗ, ಸಂಡೂರು, ವಡಗಾವ (ಕುರುಂದವಾಡ), ಸವಣೂರು, ಸಾಂಗ್ಲಿ, ಮಿರಜ, ಕೊಲಾಪುರ, ಅವುಂದ ಮೊದಲಾದ ಸಂಸ್ಥಾನಗಳಿದ್ದವು. ಕೊನೆಯ 5 ಸಂಸ್ಥಾನಗಳು ಮಹಾರಾಷ್ಟ್ರದಲ್ಲಿದ್ದರೂ ಅವುಗಳ ಪ್ರದೇಶಗಳು ಮುಂಬಯಿ ಕರ್ನಾಟಕದಲ್ಲಿದ್ದವು. ಈ ಎಲ್ಲಾ ಪ್ರದೇಶಗಳಲ್ಲಿಯ ಸ್ವಾತಂತ್ರ್ಯ ಹೋರಾಟ ಒಂದೇ ತೆರನಾಗಿರದಿದ್ದರೂ ಕೂಡ ರಾಷ್ಟ್ರೀಯತೆಯ ಭಾವನೆ ಮಾತ್ರ ದೇಶದ ಇತರ ಪ್ರದೇಶಗಳಿಗೆ ಸರಿಸಮಾನವಾಗಿತ್ತು. 1885 ರಲ್ಲಿ ರಾಷ್ಟ್ರೀಯ ಕಾಂಗ್ರೆಸ್‌ನ ಪ್ರಥಮ ಸಮ್ಮೇಳನ ಮುಂಬಯಿಯಲ್ಲಿ ನಡೆದಾಗಿನಿಂದಲೂ ಸ್ವಾತಂತ್ರ್ಯ ಚಳುವಳಿಯಲ್ಲಿ ಕರ್ನಾಟಕದ ಸಂಪರ್ಕ ಉಂಟಾಗಿತ್ತು. ಬಂಗಾಳದ ವಿಭಜನೆಯಾದಾಗ 'ವಂಗ ಭಂಗ'ದ ವಿರುದ್ಧ ಮುಂಬಯಿ ಕರ್ನಾಟಕದ ಹಲವೆಡೆ ಪ್ರತಿಭಟನಾ ಸಭೆಗಳು ನಡೆದವು. 1920-21 ರಲ್ಲಿ ಸ್ವಾತಂತ್ರ್ಯ ಚಳುವಳಿ ವಿಶಾಲವಾಗಿ ಹಬ್ಬಿತು. ಕೋರ್ಟುಗಳಿಗೆ ಬಹಿಷ್ಕಾರ ಹಾಕಬೇಕೆಂಬ ಕರೆಗೆ ಹೆಚ್ಚಿನ ಬೆಂಬಲ ಸಿಕ್ಕಿತು. ಜೊತೆಯಲ್ಲಿಯೇ ಸಭೆ, ಮೆರವಣಿಗೆ, ವಿದೇಶಿ ವಸ್ತುಗಳ ದಹನ, ಶೇಂದಿ ಅಂಗಡಿಗಳ ಪಿಕೆಟಿಂಗ್ ನಡೆಯಿತು. ಧಾರವಾಡ ಮೊದಲಾದ ಕಡೆ ಪೋಲಿಸರ ಗೋಲಿಬಾರ್‌ನಿಂದಾಗಿ ಹಲವಾರು ಜನ ಅಸುನೀಗಿದರು. 'ಪ್ರಿನ್ಸ್ ಆಫ್ ವೇಲ್ಸ್'ನ ಸಂದರ್ಶನವನ್ನು ಪ್ರತಿಭಟಿಸಿದಾಗ ಗೋಲಿಬಾರಿನಿಂದ

ಬೆಂಗಳೂರು ಕಂಟೋನ್‌ಮೆಂಟ್‌ನಲ್ಲಿ ಇಬ್ಬರು ಖಿಲಾಫತ್ ಸ್ವಯಂ ಸೇವಕರು ಕೊಲ್ಲಲ್ಪಟ್ಟರು(ನವೆಂಬರ್ 18, 1928). ರಾಜ್ಯದಾದ್ಯಂತ ಹಲವಾರು ಮುಖಂಡರ ಬಂಧನವಾಯಿತು. ಕಾರವಾರ ಜಿಲ್ಲೆಯಲ್ಲಿ ಹೆಡ್ ಮಾಸ್ತರುಗಳನ್ನೊಳಗೊಂಡು ಹಲವಾರು ಶಿಕ್ಷಕರು ತಮ್ಮ ಹುದ್ದೆಗಳಿಗೆ ರಾಜಿನಾಮೆ ಕೊಟ್ಟು ವಿದ್ಯಾರ್ಥಿಗಳ ಜೊತೆಯಲ್ಲಿ ಚಳುವಳಿಯಲ್ಲಿ ಧುಮುಕಿದರು. ಬಳ್ಳಾರಿಯೂ ಕಾರವಾರದ ದಾರಿ ಹಿಡಿಯಿತು. 1920-22 ಪ್ರಾರಂಭದ ಚಳುವಳಿಗೆ ಕರ್ನಾಟಕದ ಹೆಚ್ಚಿನ ಜಿಲ್ಲೆಗಳಲ್ಲಿ ಉತ್ಸಾಹಪೂರಿತ ಬೆಂಬಲ ಲಭ್ಯವಾಯಿತು.

ಚಳುವಳಿಗೆ ಹೊಸ ರೂಪ

1923 ರಿಂದ 1930 ರವರೆಗೆ ದೇಶದ ಇತರ ಭಾಗಗಳಲ್ಲಿ ಮುಖ್ಯವಾಗಿ ಪಂಜಾಬ್, ಉತ್ತರ ಪ್ರದೇಶ, ಬಂಗಾಲ, ಮದ್ರಾಸ್, ಮುಂಬೈ ಮೊದಲಾದೆಡೆಗಳಲ್ಲಿ ಕಮ್ಯೂನಿಸ್ಟ್ ಪಕ್ಷದ, ಇತರ ಉಗ್ರವಾದಿ ಗುಂಪುಗಳ ಚಟುವಟಿಕೆಗಳು ಮುಂದುವರಿದವು. 1930 ರಿಂದ ಕರ್ನಾಟಕದಲ್ಲಿ ಚಳುವಳಿಗೆ ಹೊಸರೂಪ ಬಂತು. ಕಾರವಾರ ಜಿಲ್ಲೆಯ ಅಂಕೋಲದಲ್ಲಿ ಏಪ್ರಿಲ್ 4, 1930ರಂದು 30,000 ಜನ ಉಪ್ಪು ಸತ್ಯಾಗ್ರಹ ಪ್ರಾರಂಭಿಸಿದರು. ಅದು 45 ದಿವಸ ನಡೆಯಿತು. ಅದು ಮಂಗಳೂರು, ಧಾರವಾಡ ಬಿಜಾಪುರ, ಕಾರವಾರ ಜಿಲ್ಲೆಗಳಿಗೆ ಹಬ್ಬಿತು. ಸತ್ಯಾಗ್ರಹಿಗಳು ಗೋವದಿಂದ ಉಪ್ಪು ತರಿಸಿ ಮಾರಾಟ ಮಾಡಿ ಎಕ್ಸೈಸ್ ಕಾನೂನನ್ನು ಮುರಿದರು. ಅನಂತರ ಫಾರೆಸ್ಟ್ ಸತ್ಯಾಗ್ರಹ, ಕರ ನಿರಾಕರಣೆ ಚಳುವಳಿ, ದಾರುಬಂದಿ ಚಳುವಳಿ ನಡೆದು ಸಾವಿರಾರು ಜನ ಸೆರೆಮನೆ ಸೇರಿದರು. ಸಿರ್ಸಿ, ಸಿದ್ದಾಪುರ, ಅಂಕೋಲದಲ್ಲಿ 1934ರಲ್ಲಿ 800ಕ್ಕಿಂತಲೂ ಹೆಚ್ಚು ಕುಟುಂಬಗಳ ಭೂಮಿ, ಮನೆ ಮಠಗಳನ್ನೆಲ್ಲ ಸರ್ಕಾರ ವಶಪಡಿಸಿಕೊಂಡು ಅವರನ್ನೆಲ್ಲ ನಿರ್ಗತಿಕರನ್ನಾಗಿ ಮಾಡಿತು. 1930-34 ರವರೆಗಿನ ಚಳುವಳಿ ಕಾರವಾರ ಜಿಲ್ಲೆಯಲ್ಲಿ ಅತಿಹೆಚ್ಚು ಪ್ರಭಾವಿತವಾಗಿತ್ತು. ಮುಂದೆ 1939-40ರಲ್ಲಿ ಪ್ರಾರಂಭವಾದ ಕಮ್ಯುನಿಸ್ಟ್ ಪಾರ್ಟಿಯ ನೇತೃತ್ವದ ರೈತ ಚಳುವಳಿಗೆ ನಾಂದಿಹಾಕಿತು. 1920-1934 ರವರೆಗೆ ನಡೆದ ಚಳುವಳಿಗೆ ಪ್ರೋತ್ಸಾಹ ಧೈರ್ಯ ತುಂಬಿದ ಪತ್ರಿಕೆಗಳೆಂದರೆ ಬಾಲಗಂಗಾಧರ ತಿಲಕ್ ಅವರ ಮರಾಠಿ ದಿನ ಪತ್ರಿಕೆ 'ಕೇಸರಿ' ಮತ್ತು 'ಮರಾಠ' ಹಾಗೆಯೇ ಕನ್ನಡ ಪತ್ರಿಕೆಗಳಾದ ಮಂಗಳೂರಿನ "ಸ್ವದೇಶಾಭಿಮಾನಿ" (1907) ಅಗಡಿಯ "ಸುಭೋಧ ಚಂದ್ರಿ" (1907) ಧಾರವಾಡದ "ಕರ್ನಾಟಕ ವೃತ್ತಾ" (1895) ರಾಜ ಹಂಸ (1881), ಹುಬ್ಬಳ್ಳಿಯ "ಕನ್ನಡ ಕೇಸರಿ" (1906) ಮೈಸೂರಿನ "ವೃತ್ತಾಂತ ಚಿಂತಾಮಣಿ"(1885). ಅನಂತರ ಹುಬ್ಬಳ್ಳಿಯ "ಸಂಯುಕ್ತ ಕರ್ನಾಟಕ".

ಕಾರವಾರ ಜಿಲ್ಲೆಯಲ್ಲಿ ಉಪ್ಪು ಸತ್ಯಾಗ್ರಹ, ಫಾರೆಸ್ಟ್ ಸತ್ಯಾಗ್ರಹ, ಶೇಂದಿ ಅಂಗಡಿ ಪಿಕೆಟಿಂಗ್, ಶಿಕ್ಷಕರ ಸಾಮೂಹಿಕ ರಾಜಿನಾಮೆ, ವಿದ್ಯಾರ್ಥಿಗಳ ಹರತಾಳದ ರೂಪ ತಾಳಿದರೆ, ಬೆಳಗಾವ, ಧಾರವಾಡ, ಬಿಜಾಪುರಗಳಲ್ಲಿ ತೀವ್ರ ಹಿಂಸಾತ್ಮಕ, ಗೆರಿಲ್ಲಾ ರೀತಿಯ ಹೋರಾಟ ನಡೆಯಿತು. 15 ರಿಂದ 25ರ ಹರೆಯದ ಯುವಕರು, ಹಳ್ಳಿ ರೈತರ ತಂಡ ಶಿಸ್ತು ಬದ್ಧವಾಗಿ ಟೆಲಿಗ್ರಾಂ ತಂತಿ ಕತ್ತರಿಸುವ, ರೈಲ್ವೆ ಹಳಿ ಕೀಳುವ, ಸ್ಟೇಶನ್‌ಗಳನ್ನು ಆಕ್ರಮಿಸುವ ಕೆಲಸಗಳನ್ನು ವ್ಯವಸ್ಥಿತವಾಗಿ ನಡೆಸಿರುವುದು ಗಮನಿಸತಕ್ಕದ್ದು. ಬಿಜಾಪುರ ಜಿಲ್ಲೆಯ ಮಿಂಚಿನಾಳ ರೈಲ್ವೆ ಸ್ಟೇಶನಿನ ಮೇಲೆ ನಡೆದ ಆಕ್ರಮಣ ಇಂದಿಗೂ ನನ್ನ ಮನದಲ್ಲಿ ಹಸಿಯಾಗಿಯೇ ಉಳಿದಿದೆ. ಸತ್ಯಾಗ್ರಹಿಗಳಲ್ಲಿದ್ದ ಹುಮ್ಮಸ್ಸು, ಧೈರ್ಯ, ಸಮಯ ಪ್ರಜ್ಞೆ, ಕರ್ತವ್ಯ ನಿಷ್ಠೆ, ಹೊತ್ತ ಜವಾಬ್ದಾರಿಯನ್ನು ಸಕಾಲದಲ್ಲಿ ಮುಗಿಸಬೇಕೆಂಬ ನಿರ್ಧಾರಗಳು ಬ್ರಿಟಿಷರ ವಿರುದ್ಧ ಚಳುವಳಿಯ ಮಹತ್ವ ಗ್ರಾಮಾಂತರ ಪ್ರದೇಶದ ಯುವಕರಲ್ಲಿ ಕೂಡ ಎಷ್ಟು ಆಳವಾಗಿ ಬೇರೂರಿದೆಯೆಂದು ಕಂಡು ಬರುತ್ತದೆ. ಇಂಥ ಹೋರಾಟಗಳ

➡

→

ಪ್ರತಿಫಲವಾಗಿಯೇ ಬಿಜಾಪುರ ನಗರ ಮತ್ತು ಹಳ್ಳಿ ಪ್ರದೇಶದಲ್ಲಿ ಭೂಮಾಲಿಕರ ವಿರುದ್ಧ ಭೂಮಿಗಾಗಿ, ಭೂಮಿಯ ಹಕ್ಕಿಗಾಗಿ ಹೋರಾಟ ನಡೆಸಲು ಸಾಧ್ಯವಾಗಿದೆ.

ಮೈಸೂರು ಸಂಸ್ಥಾನದಲ್ಲಿ ಚಳುವಳಿ

ಕರ್ನಾಟಕದ ಇತರ ಭಾಗಗಳಲ್ಲಿ ರಾಷ್ಟ್ರೀಯ ಚಳುವಳಿ ಪ್ರಾರಂಭವಾಗಿ ತೀವ್ರಗೊಳ್ಳುತ್ತಿರುವಾಗಲೇ ಮೈಸೂರು, ಕೊಡಗು ಜಿಲ್ಲೆಗಳಲ್ಲಿಯೂ ರಾಷ್ಟ್ರೀಯ ಚಳುವಳಿ ಪ್ರಾರಂಭವಾಗಿತ್ತು. ಮುಂಬಯಿ ಕರ್ನಾಟಕದಲ್ಲಿ ಮಧ್ಯಮವರ್ಗದ ಮತ್ತು ರೈತರ ಪಾತ್ರ ಪ್ರಧಾನವಾಗಿದ್ದರೆ ಹಳೇ ಮೈಸೂರಿನಲ್ಲಿ ಮಧ್ಯಮವರ್ಗ ಮತ್ತು ರೈತರ ಜೊತೆಯಲ್ಲಿ ಕಾರ್ಮಿಕರ ವಿದ್ಯಾರ್ಥಿಗಳ ಪಾತ್ರ ಪ್ರಾಧಾನವಾಗಿತ್ತೆಂಬುದು ಗಮನಾರ್ಹ. ಮಂಗಳೂರು ಜಿಲ್ಲೆಯಲ್ಲಿ ಕೂಡ ವಿದ್ಯಾರ್ಥಿಗಳ, ಕಾರ್ಮಿಕರ ಪಾಲ್ಗೊಳ್ಳುವಿಕೆ ಇತ್ತು. ಮೈಸೂರು ಸಂಸ್ಥಾನದಲ್ಲಿ ಜವಾಬ್ದಾರಿ ಸರಕಾರ ಸ್ಥಾಪನೆಗಾಗಿ ಚಳುವಳಿ ಅದರ ಜೊತೆಯಲ್ಲಿಯೇ ದೇಶಕ್ಕಾಗಿ ಸ್ವಾತಂತ್ರ್ಯ ಚಳುವಳಿಯ ಕಿಡಿ 1920–26ರಲ್ಲಿ ಪ್ರಾರಂಭವಾಗಿತ್ತು. ಮಹಾರಾಜರ ವಿರುದ್ಧ ಹೋರಾಟ ಒಂದೆಡೆಯಾದ–ರೆ ಬ್ರಿಟಿಷರ ವಿರುದ್ಧ ಹೋರಾಟ ಮತ್ತೊಂದೆಡೆ. ಈ ಎರಡೂ ಹೋರಾಟಗಳು ಒಟ್ಟಾಗಿಯೇ ನಡೆಸಲ್ಪಟ್ಟವು. ಜವಾಬ್ದಾರಿ ಸರಕಾರಗಳ ರಚನೆಗಾಗಿ ಎಲ್ಲ ಸಂಸ್ಥಾನಗಳಲ್ಲೂ ಚಳುವಳಿ ನಡೆಯಿತು. ಇದಕ್ಕೆಲ್ಲ ಸ್ಪೂರ್ತಿ ನೀಡಿದ್ದು ಸ್ವಾತಂತ್ರ್ಯ ಚಳುವಳಿ. ಸಂಸ್ಥಾನಗಳೆಲ್ಲ ಬ್ರಿಟಿಷ್ ಭಾರತದಲ್ಲೇ ವಿಲೀನಗೊಳ್ಳಬೇಕೆಂಬ ನಿರ್ಣಯ ಎಲ್ಲ ಸಂಸ್ಥಾನಗಳ ಪ್ರಜಾಪ್ರತಿನಿಧಿಗಳ ಸಭೆಯಲ್ಲಿ ನಿರ್ಧರಿಸಲಾಗಿತ್ತು. ಅದನ್ನು ಕಾರ್ಯರೂಪದಲ್ಲಿ ತರುವ ಪ್ರಯತ್ನ ಮೈಸೂರು ಸಂಸ್ಥಾನದಲ್ಲಿ ನಡೆಯಿತು. ದೇಶದ ಸ್ವಾತಂತ್ರ್ಯ ಚಳುವಳಿಯ ಪ್ರಥಮ ಹೆಜ್ಜೆ ಕಾಂಗ್ರೆಸ್ ಧ್ವಜ ಹಾರಿಸುವುದಾಗಿತ್ತು. ಬ್ರಿಟಿಷರು ಅದ–ಕ್ಕೆ ಅವಕಾಶ ಮಾಡಿಕೊಡುತ್ತಿರಲಿಲ್ಲ. ಪೋಲಿಸರ ಪ್ರತಿಬಂಧ ಮುರಿದು ಧ್ವಜಾರೋಹಣ. ಆಗ ದಬ್ಬಾಳಿಕೆ– ಸೆರೆಮನೆಗಳನ್ನು ಕಾಣಬೇಕಾಗುತ್ತಿತ್ತು. ಜವಾಬ್ದಾರಿ ಸರ್ಕಾರ ಸ್ಥಾಪನೆಗಾಗಿ, ಸ್ವಾತಂತ್ರ್ಯ ಚಳುವಳಿಗಾಗಿ ಮೈಸೂರು ರಾಜ್ಯಾದ್ಯಂತ ಧ್ವಜಾರೋಹಣ ಮಾಡುವ ಕಾರ್ಯಕ್ರಮ ನಡೆದಾಗ ಬ್ರಿಟಿಶ್ ಆಡಳಿತೆಯಲ್ಲಿ ನಡೆದಂತೆ–ಯೇ ಮೈಸೂರು ಸಂಸ್ಥಾನದಲ್ಲೂ ಕಾಂಗ್ರೆಸ್ ಧ್ವಜಾರೋಹಣಕ್ಕೆ ಸರಕಾರ ಅಡ್ಡಿ ಉಂಟು ಮಾಡಿತು. ಜನತೆ ಅದನ್ನು ವಿರೋಧಿಸಿತು. ಹಲವಾರು ಕಡೆ ಸರಕಾರದ ಪ್ರತಿಬಂಧಕಾಜ್ಞೆ ಮುರಿಯಲಾಯಿತು. ಗೋಲಿಬಾರಾಯಿತು. ಕೆಲವು ಕಡೆ ನಿರಪರಾಧಿಗಳು ಹುತಾತ್ಮರಾದರು. 1931 ಜೂನ್ 2ನೇ ತಾರೀಕು ಬೆಂಗಳೂರು ರೈಲ್ವೆ ಸ್ಟೇಶನಿನ ಮುಂದುಗಡೆ ಕೆಂಪಾಂಬುದಿ ಕೆರೆಯ ಅಂಗಳದಲ್ಲಿ 60 ಅಡಿ ಎತ್ತರದ ಧ್ವಜಸ್ತಂಭವನ್ನು ಕಾರ್ಮಿಕರ ಸಹಕಾರದಿಂದ ಸ್ಥಾಪಿಸಿ ಧ್ವಜಾರೋಹಣ ಮಾಡಿದಾಗ ಧ್ವಜಸ್ತಂಭದಿಂದ ರಾಷ್ಟ್ರಧ್ವಜವನ್ನು ಕೆಳಗಿಳಿಸಿ ಪೋಲಿಸರು ಅಪಮಾನ ಮಾಡಿದರು. ಜನ ಈ ಅಪಮಾನ ಸಹಿಸಲು ಸಿದ್ಧರಿರಲಿಲ್ಲ. ಪೋಲಿಸರು ಧ್ವಜವನ್ನು ವಾಪಸ್ ಕೊಡುವ ತನಕ ಸತ್ಯಾಗ್ರಹ ಮುಂದುವರಿಯಿತು. ಮದ್ದೂರಿನ ಬಳಿ ಶಿವಪುರದಲ್ಲಿ 1938 ಎಪ್ರಿಲ್ 26 ರಂದು ಧ್ವಜ ಹಾರಿಸಿದಾಗಲೂ ಪೋಲಿಸರು ಧ್ವಜ ಹಾರಿಸಿದವರನ್ನು ಸರದಿ ಪ್ರಕಾರ ಬಂಧಿಸಿದರು. ನಾಲ್ಕು ದಿವಸ ಇದೇ ರೀತಿ ಬಂಧನ ನಡೆಸಿ ಬೇಸತ್ತ ಪೋಲಿಸರು ಮರು ದಿವಸದಿಂದ ಸತ್ಯಾಗ್ರಹಿಗಳನ್ನು ಬಂಧಿಸುವುದನ್ನೇ ಬಿಟ್ಟು ಕೊಟ್ಟರು. ವಿಧುರಾಶ್ವತ್ಥದ ಹತ್ಯಾಕಾಂಡ ಇಡಿ ದೇಶದ ಗಮನವನ್ನು ಸೆಳೆಯಿತು. 1938 ಎಪ್ರಿಲ್ 25 ರಂದು ಕೋಲಾರ ಜಿಲ್ಲೆಯ ಗೌರಿ ಬಿದನೂರು ತಾಲೂಕಿನ ಐತಿಹಾಸಿಕ ಮತ್ತು ಧಾರ್ಮಿಕ ಕ್ಷೇತ್ರವಾದ ವಿದುರಾಶ್ವತ್ಥದಲ್ಲಿ ಹತ್ಯಾಕಾಂಡ ನಡೆಯಿತು. ಅಂದು ಮುಂಜಾನೆ ಕಾಂಗ್ರೆಸ್ ಧ್ವಜ ಹಾರಿಸಲಾಯಿತು. ಪೋಲಿಸರಿಗೆ ಅದು ಸಹನೆಯಾಗಲಿಲ್ಲ. ಗೋಲಿಬಾರ್ ಆಯಿತು. 49 ಜನ ಗುಂಡಿಗೆ ಬಲಿಯಾಗಿ ಆಸುನೀಗಿದರು. ಇವರ ಪೈಕಿ ತುಂಬು ಗರ್ಭಿಣಿ ಗೌರಮ್ಮ ಎಂಬಾಕೆ ಒಬ್ಬಳು. ಈ ಘಟನೆ ಕರ್ನಾಟಕದ ಜಲಿಯಾನ್ ವಾಲಾಬಾಗ್ ಎಂದು ಹೆಸರು ಪಡೆಯಿತು.

ಕಮ್ಯುನಿಸ್ಟರ ಪಾತ್ರ

ಬ್ರಿಟಿಷರ ವಿರುದ್ಧ ಹೋರಾಟದಲ್ಲಿ ಮಹಾತ್ಮ ಗಾಂಧಿಯವರು ಮತ್ತು ಕಾಂಗ್ರೆಸ್ಸಿನ ಧೋರಣೆಗಳಲ್ಲಿ, ಹೋರಾಟದ ತಂತ್ರಗಳಲ್ಲಿ, ಪದ್ಧತಿಗಳಲ್ಲಿ ಕಮ್ಯುನಿಸ್ಟ್ ಮುಖಂಡತ್ವಕ್ಕೆ ಸಂಪೂರ್ಣ ಒಪ್ಪಿಗೆ ಇಲ್ಲದಿದ್ದರೂ ಕೂಡ ಕಮ್ಯುನಿಸ್ಟ್ ಪಕ್ಷ, ಕಾಂಗ್ರೆಸ್ ಪಕ್ಷದಲ್ಲಿದ್ದು ಕಾಂಗ್ರೆಸ್ ಪಕ್ಷದ ಚುನಾವಣೆಗಳಲ್ಲಿ ಸ್ಪರ್ಧಿಸಿ ಗೆದ್ದು ಹಲವಾರು ಕಮಿಟಿಗಳಲ್ಲಿ ಅಖಿಲ ಭಾರತ ಕಾಂಗ್ರೆಸ್ ಕಮಿಟಿಯಲ್ಲಿ ಕೂಡ (ಎಐಸಿಸಿ) ಆರಿಸಿ ಬರುತ್ತಿತ್ತು. ಆ ಕಮಿಟಿಗಳಲ್ಲಿ ತನ್ನ ಧೋರಣೆಯನ್ನು ಪ್ರತಿಪಾದಿಸುತ್ತಿತ್ತು. ಕಾಂಗ್ರೆಸ್ ಸೋಶಲಿಸ್ಟ್ ಪಾರ್ಟಿ ಕೂಡ ಕಾಂಗ್ರೆಸ್ಸಿನೊಳಗೆ ಇತ್ತು. ಹಿಟ್ಲರ್ ಸೋವಿಯತ್ ಯೂನಿಯನಿನ ಮೇಲೆ ಆಕ್ರಮಣ ಮಾಡಿದಾಗ ಜಾಗತಿಕ ಪರಿಸ್ಥಿತಿಯಲ್ಲುಂಟಾದ ಬದಲಾವಣೆಗಳನ್ನು ಲಕ್ಷಿಸಿ ಭಾರತ ಕಮ್ಯುನಿಸ್ಟ್ ಪಕ್ಷ ತಮ್ಮ ನಿಲುಮೆಯಲ್ಲಿ ಬದಲಾವಣೆ ಮಾಡಿ ಸೋವಿಯತ್ ರಶ್ಯಾವನ್ನು ರಕ್ಷಿಸಲು, ಜಗತ್ತನ್ನು ನಾಝೀ ಆಕ್ರಮಣದಿಂದ ಉಳಿಸಲು ಹಿಟ್ಲರ್, ಮುಸೋಲಿನಿ, ಟೋಜೊ ಅವರನ್ನು ಸೋಲಿಸುವುದೇ ಪ್ರಧಾನ ಕರ್ತವ್ಯ, ಆ ಮೂಲಕ ದೇಶದ ಸ್ವಾತಂತ್ರ್ಯ ಚಳುವಳಿಯನ್ನು ಮುಂದುವರಿಸಬೇಕೆಂದು ನಿರ್ಧರಿಸಿ ಕಾಂಗ್ರೆಸ್ ಜೊತೆಗಿದ್ದ ತನ್ನ ಸಂಬಂಧವನ್ನು ಕಡಿದು ಹಾಕಿತು. ಜನರ ಸಮಸ್ಯೆಗಳಿಗೆ ಪರಿಹಾರ ಒದಗಿಸಲು ಬ್ರಿಟಿಷ್ ಆಡಳಿತೆಯ ವಿರುದ್ಧ ಹೋರಾಟ ಮುಂದುವರಿಸಿತು.



ಚಿಕ್ಕಬಳ್ಳಾಪುರ ಜಿಲ್ಲೆಯ ವಿಧುರಾಶ್ವಥದಲ್ಲಿ ಹುತಾತ್ಮರ ಸ್ಮಾರಕಗಳು

ಕರ್ನಾಟಕದಲ್ಲಿ ಮುಖ್ಯವಾಗಿ ಮೈಸೂರು ಸಂಸ್ಥಾನ, ಮಂಗಳೂರು, ಕಾರವಾರ ಕೊನೆಯಲ್ಲಿ ಬಿಜಾಪುರ, ಧಾರವಾಡಗಳಲ್ಲಿ ಕಮ್ಯುನಿಸ್ಟರು ಸ್ವಾತಂತ್ರ್ಯಕ್ಕಾಗಿ ನಡೆದ ಹೋರಾಟಗಳಲ್ಲಿ ನೇರ ಹಾಗೂ ಮೈಸೂರು ಸಂಸ್ಥಾನದಲ್ಲಿ ಜವಾಬ್ದಾರಿ ಸರಕಾರಕ್ಕಾಗಿ ಅನಂತರ ಕರ್ನಾಟಕ ಪ್ರಾಂತದಲ್ಲಿ ಅದರ ವಿಲೀನಕ್ಕಾಗಿ ಹೋರಾಟದಲ್ಲಿ ಪಾಲ್ಗೊಂಡಿದ್ದರು.

ಮಂಗಳೂರು ಜಿಲ್ಲೆಯಲ್ಲಿ ಎಸ್.ಎನ್. ಹೊಳ್ಳ, ಬಿ.ವಿ. ಕಕ್ಕಿಲ್ಲಾಯ ಮೊದಲಾದವರು ನೇಕಾರರ, ಬೀಡಿ, ಗೇರು, ಟೈಲ್ಸ್, ಕಾಫಿ, ಬಂದರು, ಪ್ರೆಸ್ ಮೊದಲಾದ ಕೆಲಸಗಾರರ ಸಂಘಟನೆಗಳನ್ನು, ವಿದ್ಯಾರ್ಥಿಗಳನ್ನು ಕೆಲವು ಪ್ರದೇಶಗಳಲ್ಲಿ ರೈತರನ್ನು ಚಳುವಳಿಯಲ್ಲಿ ಭಾಗವಹಿಸುವಂತೆ ಮಾಡಿದ್ದರು. ಮಂಗಳೂರಿನ ಕಾಲೇಜಿನಲ್ಲಿ ಅಭ್ಯಾಸ ಮಾಡುತ್ತಿದ್ದ ಎನ್.ಎಲ್.ಉಪಾಧ್ಯಾಯರು, ಹೈಸ್ಕೂಲಿನಲ್ಲಿ ನಾನು ವಿದ್ಯಾರ್ಥಿ ದೆಸೆಯಲ್ಲಿಯೇ ಚಳುವಳಿಗೆ ಆಕರ್ಷಿಸಲ್ಪಟ್ಟು, ಸ್ಕೂಲಿಗೆ ಬಹಿಷ್ಕಾರ ಹಾಕಿ ಜನರೊಡನೆ ಸಹಭೋಜನದಂತಹ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಿದ್ದರು.

ರೈತ– ಕಾರ್ಮಿಕ ಸಂಘಟನೆ

ಮೈಸೂರು ಸಂಸ್ಥಾನದಲ್ಲಿ ಕಾಂಗ್ರೆಸ್ ಮುಖಂಡರ ಜೊತೆಯಲ್ಲಿಯೇ ಎನ್. ಡಿ ಶಂಕರ, ಎಂ. ಎಸ್. ರಾಮರಾವ್, ಕೊಡಗಿನಿಂದ ಬಂದ ಸಿ.ಬಿ. ಮೊನ್ನಯ್ಯ ಮೊದಲಾದವರು ಬೆಂಗಳೂರು, ಮೈಸೂರು, ಭದ್ರಾವತಿ, ದಾವಣಗೆರೆಗಳಲ್ಲಿ ಕಾರ್ಮಿಕರನ್ನು ಸಂಘಟಿಸಿ ಜವಾಬ್ದಾರಿ ಸರಕಾರಕ್ಕಾಗಿಯೂ, ದೇಶದ ಸ್ವಾತ್ರಂತ್ರ್ಯಕ್ಕಾಗಿಯೂ ಕಾರ್ಮಿಕರು ಮುಷ್ಕರ ಹೂಡುವಂತೆ ಇತರ ಚಟುವಟಿಕೆಗಳಲ್ಲಿ ಭಾಗವಹಿಸುವಂತೆ ಮಾಡುತ್ತಿದ್ದರು. ಬೆಂಗಳೂರಿನ ಬಿನ್ನಿ ಮಿಲ್ಲು, ಮೈಸೂರು ಮಿನರ್ವ, ಟಿ.ಆರ್. ಮಿಲ್‌ಗಳು ವಿಮಾನ ಕಾರ್ಖಾನೆ, ಗವರ್ನಮೆಂಟ್ ಇಲೆಕ್ಟ್ರಿಕ್ ಕಾರ್ಖಾನೆ, ಎಂಕೊ ಬ್ಯಾಟರೀಸ್, ಮಹಾಲಕ್ಷ್ಮಿ ಮತ್ತು ಸರ್ವೋದಯ ಮಿಲ್ಲುಗಳು, ಮೈಸೂರು ಬಿವರೀಸ್, ಗ್ಲಾಸ್ ಫ್ಯಾಕ್ಟರಿ, ಐ.ಟಿ.ಐ. ಮೊದಲಾದ ಕಾರ್ಖಾನೆಗಳ ಕಾರ್ಮಿಕರೆಲ್ಲ ಹೋರಾಟಗಳಲ್ಲಿ ಭಾಗವಹಿಸುತ್ತಿದ್ದರು. ಬಹು ಸಂಖ್ಯೆಯಲ್ಲಿ ವಿದ್ಯಾರ್ಥಿಗಳೂ ಕೂಡಾ ಅಂಥ ಹೋರಾಟಗಳಲ್ಲಿ ಪಾಲುಗಾರರಾಗುತ್ತಿದ್ದರು. ಆ ಕಾರಣದಿಂದಲೇ ಹಲವಾರು ಕಾರ್ಮಿಕ ಮುಖಂಡರನ್ನೂ ಸೂರ್ಯನಾರ್ಯಣರಾವ್, ಎಂ.ಎಸ್. ಕೃಷ್ಣನ್ ಮೊದಲಾದ ವಿದ್ಯಾರ್ಥಿ ಮುಖಂಡರನ್ನೂ ಆಗ ಕಮ್ಯುನಿಸ್ಟ್ ವಿಚಾರ ಧಾರೆಯತ್ತ ಸೆಳೆಯಲು ಸಾಧ್ಯವಾಯಿತು. ಕೋಲಾರ ತಾಲೂಕಿನ ಕೆ.ಜಿ.ಎಫ್. ಮಾತ್ರವಲ್ಲ ಹೆಚ್ಚಿನ ತಾಲೂಕುಗಳಲ್ಲಿ ಹಲವಾರು ರೀತಿಯ ಚಳುವಳಿ ನಡೆದು ಅದರಲ್ಲಿ ಕಾರ್ಮಿಕರು, ರೈತಸಮುದಾಯ ಸಕ್ರಿಯವಾಗಿ ಭಾಗವಹಿಸಿದ ಕಾರಣದಿಂದಲೇ ಬಲಿಷ್ಠವಾದ ರೈತ ಸಂಘಟನೆ ಕಟ್ಟಿ ಹೋರಾಟ ನಡೆಸಲು, ತಮ್ಮ ನೆಲೆಯನ್ನು ಭದ್ರವಾಗಿಸಲು ಕಮ್ಯುನಿಸ್ಟರಿಗೆ ಸಾಧ್ಯವಾಯಿತು. ಕಮ್ಯುನಿಸ್ಟರ ಪ್ರಭಾವದಿಂದಾಗಿ ಬೆಂಗಳೂರು, ಕೋಲಾರ, ಶಿವಮೊಗ್ಗ, ಚಿತ್ರದುರ್ಗ ಜಿಲ್ಲೆಗಳಲ್ಲಿ ಹೋರಾಟ ತೀವ್ರಗೊಳಿಸಲು ಸಾಧ್ಯವಾಯಿತು. ಆಗಲೇ 1943ರ ಕೊನೆಯಲ್ಲಿ ಯರವಾಡಾ ಜೈಲಿನಿಂದ ಬಿಡುಗಡೆಯಾದ ಎನ್.ಎಲ್. ಉಪಾಧ್ಯಾಯರನ್ನು ಕಮ್ಯುನಿಸ್ಟ್ ಪಕ್ಷದ ಕೇಂದ್ರ ಸಮಿತಿ ಪಕ್ಷದ ಸಂಘಟಕರನ್ನಾಗಿ ಬೆಂಗಳೂರಿಗೆ ಕಳುಹಿಸಿಕೊಟ್ಟ ನಂತರ ಮೈಸೂರು ಸಂಸ್ಥಾನದಲ್ಲಿ ಜವಾಬ್ದಾರಿ ಸರಕಾರಕ್ಕಾಗಿ ನಡೆ–ಯುತ್ತಿದ್ದ ಹೋರಾಟದಲ್ಲಿ ಕಮ್ಯುನಿಸ್ಟ್ ಪಕ್ಷ ಮತ್ತು ಕಾರ್ಮಿಕ ಸಂಘಟನೆಗಳು ಹೆಚ್ಚು ಶಿಸ್ತುಬದ್ಧವಾಗಿ ಪರಿಣಾಮಕಾರಿಯಾಗಿ ಪಾಲ್ಗೊಳ್ಳುವಂತಾಗಲು ಸಾಧ್ಯವಾಯಿತು. ಜನ ಜಾಗೃತಿ ಸಂಘದ ಹೆಸರಿನಲ್ಲಿ ಜವಾಬ್ದಾರಿ ಸರಕಾರಕ್ಕಾಗಿ ನಡೆಯುತ್ತಿದ್ದ ಚಳುವಳಿಯಲ್ಲಿ ಎನ್.ಎಲ್. ಉಪಾಧ್ಯಾಯರು ಸೇರಿಕೊಂಡರು. ಕೆ.ಜಿ.ಎಫ್. ಚಿನ್ನದ ಗಣಿಯಲ್ಲಿ ಬೆಂಗಳೂರಿನ ಬಟ್ಟೆ ಗಿರಣಿಗಳಲ್ಲಿ, ಭದ್ರಾವತಿ ಉಕ್ಕು– ಕಬ್ಬಿಣ ಕಾರ್ಖಾನೆಯಲ್ಲಿ, ದಾವಣಗೆರೆ–ಹರಿಹರಗಳಲ್ಲಿ ಕಾರ್ಮಿಕರ ಮುಷ್ಕರ, ಬೆಂಗಳೂರು– ಮೈಸೂರುಗಳಲ್ಲಿ ವಿದ್ಯಾರ್ಥಿಗಳ ಹರತಾಳ ಒಂದೇ ಸಮನೆ ಮುಂದುವರಿಯಿತು. ಕಮ್ಯುನಿಸ್ಟ್‌ರು ಕೆಲವೇ ಜನರಿದ್ದರೂ ಕೂಡ ಕಾರ್ಮಿಕ–ವಿದ್ಯಾರ್ಥಿಗಳಲ್ಲಿಯ ಅವರ ಪ್ರಭಾವ, ಚಳುವಳಿಗಳಿಗೆ ಅವರ ಮಾರ್ಗದರ್ಶನ ಸರಕಾರದ ಕಣ್ಣು ಕೆಂಪಾಗುವಂತೆ ಮಾಡಿ ಎನ್.ಡಿ. ಶಂಕರ ಅವರನ್ನು ಬಂಧಿಸಿ, ಸಿ.ಬಿ. ಮೊನ್ನಯ್ಯ, ಎನ್.ಎಲ್. ಉಪಾಧ್ಯಾಯರನ್ನು ಮೈಸೂರು ಸಂಸ್ಥಾನದಿಂದ ಗಡಿಪಾರು ಮಾಡಲಾಯಿತು.

1939ರಿಂದಲೇ ಕಾರವಾರ ಜಿಲ್ಲೆಯಲ್ಲಿ ಎನ್.ಜಿ. ಮಾಳಸೇಕರ, ಗಣುಮಹಾಬಲ ನಾಯಕ, ಗುಬ್ಬು ನಾಯಕ, ಕೈತಾನ, ಕಲಕುಟಕರ ಮೊದಲಾದವರು ಸ್ವಾತಂತ್ರ್ಯ ಚಳುವಳಿಯ ಜೊತೆಯಲ್ಲಿಯೇ ಬಲಿಷ್ಠವಾದ ಗೇಣಿದಾರರ ಸಂಘ ಕಟ್ಟಿ ಹೋರಾಟ ನಡೆಸುತ್ತಿದ್ದರು. ನಾಸಿಕ ಜೈಲಿನಿಂದ ಬಿಡುಗಡೆ–ಯಾದ ನಂತರ 1943ರಲ್ಲಿ ಸಿಪಿಐ ಕೇಂದ್ರ ಸಮಿತಿ ಎನ್. ಕೆ. ಉಪಾಧ್ಯಾಯರನ್ನು ರೈಲ್ವೇ ಕೆಲಸಗಾರರ ಸಂಘಟನೆಗೆ ಹುಬ್ಬಳ್ಳಿಗೆ ಕಳುಹಿಸಿಕೊಟ್ಟಿತು. ಕಾರ್ಮಿಕ ಸಂಘಟನೆಯ ಜೊತೆಯಲ್ಲಿ ಸರಕಾರದ ವಿರುದ್ಧ ನಡೆದ ರಾಜಕೀಯ ಚಟುವಟಿಕೆಯಿಂದಾಗಿ ಧಾರವಾಡ ಜಿಲ್ಲೆಯಿಂದ ಅವರನ್ನು ಗಡಿಪಾರು ಮಾಡಲಾಯಿತು. ಮೈಸೂರು ಸಂಸ್ಥಾನದಿಂದ ಹೊರಹಾಕಲ್ಪಟ್ಟ ಎನ್.ಎಲ್. ಉಪಾಧ್ಯಾಯರು ಹುಬ್ಬಳ್ಳಿಯಲ್ಲಿ ನೆಲೆಸಿ ಕಾರವಾರ ಮೊದಲಾದ ಪ್ರದೇಶಗಳ ಚಳುವಳಿಗೆ ಮಾರ್ಗದರ್ಶನ ನೀಡಿದರು. ಸಿ.ಬಿ. ಮೊನ್ನಯ್ಯನವರೂ ಹುಬ್ಬಳ್ಳಿಗೆ ಬಂದರು. ಸಂಘಟನೆಯ ಕೆಲಸ ಮುಂದುವರಿಸಿದರು. ಮುಂಬಯಿ, ಮದ್ರಾಸ್ ಪ್ರಾಂತ್ಯಗಳಲ್ಲಿ, ಹೈದರಾಬಾದ್ ಸಂಸ್ಥಾನದಲ್ಲಿ, ಬೇರೆ ಬೇರೆ ರಾಜರುಗಳ ಆಡಳಿತದಲ್ಲಿ ಹರಿದು ಹಂಚಿ ಹೋಗಿದ್ದ ಕನ್ನಡಿಗರು ಬ್ರಿಟಿಷರ ವಿರುದ್ಧ, ಅದರ ಜೊತೆಯಲ್ಲಿಯೇ ಸಂಸ್ಥಾನಿಕರ ವಿರುದ್ಧ

ಪುಟ 15 ಕ್ಕೆ

ಪಶ್ಚಿಮ ಬಂಗಾಳ: ಭೀರ್‌ಭೂಮ್ ಗಲಭೆ–ಹಲ್ಲೆಗಳಲ್ಲಿ ತೃಣಮೂಲ–ಪೋಲೀಸ್ ಶಾಮೀಲು

ಕಳೆದ ಕೆಲವು ವರ್ಷಗಳಿಂದ ಎಡೆ ಬಿಡದೆ ನಡೆಯುತ್ತಿರುವ ಗುಂಪು ಘರ್ಷಣೆ, ಕೊಲೆ ಮತ್ತು ಕಾಂಗರೂ ಕೋರ್ಟ್ ಹಾವಳಿಗಳಿಂದಾಗಿ ಪಶ್ಚಿಮ ಬಂಗಾಳದ ಭೀರ್‌ಭೂಮ್ ಜಿಲ್ಲೆಯ ಪರೂಯಿ ಗ್ರಾಮವು ಮಾಧ್ಯಮಗಳಲ್ಲಿ ಸುದ್ದಿಗೆ ಗ್ರಾಸವಾಗಿದೆ.

800 ಬಾಂಬ್‌ಗಳ ವಶ–ಗಲಭೆ

ಮಖ್ರಾ ಎಂಬ ಹಳ್ಳಿಯ ಸರ್ಕಾರಿ ಆಸ್ಪತ್ರೆಯಲ್ಲಿ 800 ಬಾಂಬ್‌ಗಳನ್ನು ಹಿಂದಿನ ದಿನ ವಶಪಡಿಸಿಕೊಂಡ ಪರಿಣಾಮವಾಗಿ ಅಕ್ಟೋಬರ್



27ರಂದು ಪೋಲೀಸರ ಮೇಲೆ ನಾಟಕೀಯವಾಗಿ ಹಲ್ಲೆಯಾಗಿ ನಂತರ ಮೂರು ಮಂದಿಯ ಕಗ್ಗೊಲೆಯಾಗಿದೆ. ತನ್ನ ಭಂಟರ ಸಂಖ್ಯೆ ಕುಸಿಯುತ್ತಿರುವುದನ್ನು ತಡೆಯಲು ಹಾಗು ಇಡೀ ಪ್ರದೇಶದಲ್ಲಿ ತನ್ನ ಆಧಿಪತ್ಯ ಮುಂದುವರಿಸುವ ಸಲುವಾಗಿ ತೃಣಮೂಲ ಪಕ್ಷವು ಈ ಗಲಭೆಗಳಿಗೆ ಉತ್ತೇಜನ ಕೊಡುತ್ತಿದೆ. ತಮ್ಮ ಮೇಲೆ ದಾಳಿ ನಡೆಯಿತೆಂಬ ನೆಪಹೂಡಿ ಪೋಲೀಸರು ಮಖ್ರಾ ಎಂಬ ಹಳ್ಳಿಯ ಆಯ್ದ ಕೆಲವು ಮನೆಗಳಿಗೆ ನುಗ್ಗಿ ಗಂಡಸರನ್ನು ಮನೆಯಿಂದೋಡಿಸಿ ಆ ಮನೆಯಲ್ಲಿದ್ದ ವಸ್ತುಗಳನ್ನೆಲ್ಲಾ ಚೆಲ್ಲಾ ಪಿಲ್ಲಿ ಮಾಡಿದ್ದಾರೆ. ಕೆಲವೇ ಕ್ಷಣಗಳಲ್ಲಿ, ಜಿಲ್ಲೆಯ ಅನೇಕ ಭಾಗಗಳಿಂದ ಕರೆತಂದಿದ್ದ ಭಾರಿ ಸಂಖ್ಯೆಯ ತೃಣಮೂಲ ಗುಂಪು ಇಡೀ ಹಳ್ಳಿಯನ್ನು ಸುತ್ತುವರಿದು ಗುಂಡು ಹಾರಿಸಿ ಬಾಂಬ್‌ಗಳನ್ನು ಎಸೆದಿದ್ದಾರೆ. ಹೆಣ್ಣು ಮಕ್ಕಳನ್ನು ಎಳೆದಾಡಿ ಮಾನಭಂಗ ಮಾಡಿದ್ದಾರೆ. ಕೇವಲ 200 ಮೀಟರ್ ದೂರದಿಂದ ಇದೆಲ್ಲವನ್ನೂ ಪೋಲೀಸರು ಮೂಕರಂತೆ ನೋಡುತ್ತಾ ಕುಳಿತಿದ್ದುದನ್ನು ಗಮನಿಸಿದರೆ ಇದೊಂದು ಪೂರ್ವಯೋಜಿತ ದಾಳಿ ಎಂಬುದು ಸ್ಪಷ್ಟವಾಗುತ್ತದೆ.

ತಮ್ಮ ನಿಷ್ಠೆಯನ್ನು ಇತ್ತೀಚೆಗೆ ತೃಣಮೂಲದಿಂದ ಬಿಜೆಪಿಗೆ ಬದಲಾಯಿಸಿಕೊಂಡಿದ್ದ ಒಂದು ದೊಡ್ಡ ಗುಂಪು ಸ್ವಲ್ಪ ಸಮಯದ ಬಳಿಕ ಅಲ್ಲಿ ಜಮಾಯಿಸಿ ತೃಣಮೂಲ ದಾಳಿಕೋರರ ಮೇಲೆರಗಿದರು. ಕೋಪಗೊಂಡಿದ್ದ ಹಳ್ಳಿಯ ಜನರು ಅವರ ಜೊತೆ ಸೇರಿಕೊಂಡರು. ಎರಡೂ ಗುಂಪುಗಳು ಎದುರಾ ಬದರು ಗುಂಡು ಹಾರಿಸಿ ಬಾಂಬ್‌ಗಳನ್ನು ಎಸೆದ ಪರಿಣಾಮವಾಗಿ ಮೂರುಮಂದಿ ಸಾವಿಗೀಡಾಗಿದ್ದಾರೆ. ಹಲವರಿಗೆ ಗಂಭೀರ ಸ್ವರೂಪದ ಗಾಯಗಳಾಗಿವೆ.

ಭೀರ್‌ಭೂಮ್ ಜಿಲ್ಲೆಯ ಬಹು ಭಾಗಗಳಲ್ಲಿ 2011ರ ಚುನಾವಣೆಗಳ ನಂತರ ತೃಣಮೂಲ ದಾಳಿಕೋರರು ಭಯೋತ್ಪಾದಕ ಚಟುವಟಿಕೆಗಳ ಮೂಲಕ ಸಿಪಿಐ(ಎಂ) ಕಾರ್ಯಕರ್ತರು ಮತ್ತು ಬೆಂಬಲಿಗರನ್ನು ಬೇಟೆಯಾಡಿದ್ದಾರೆ. 2013ರ ಪಂಚಾಯತ್ ಚುನಾವಣೆಗಳಲ್ಲಿ ಸ್ಪರ್ಧಿಸಲೂ ಬಿಡಲಿಲ್ಲ. ಜಿಲ್ಲೆಯ ತೃಣಮೂಲ ಪಕ್ಷದ ಅಧ್ಯಕ್ಷ ಅನುಬ್ರತ ಮೊಂಡಲ್ ಎಂಬ ಕುಖ್ಯಾತ ವ್ಯಕ್ತಿ ತನ್ನ ಪಕ್ಷದ ಎದುರು ಸ್ಪರ್ಧಿಸುವವರ ಮೇಲೆ ಹಾಗೂ ಎದುರಾಳಿಗಳ ಬೆಂಬಲಕ್ಕೆ ಬರುವ ಪೋಲೀಸರ ಮೇಲೂ ಬಾಂಬ್ ಹಾಕುವಂತೆ ತನ್ನ ಗೂಂಡಾ ಪಡೆಗೆ ಆದೇಶ ಮಾಡಿದ್ದ. ಸರ್ಕಾರಿ ಆಡಳಿತ ಯಂತ್ರದ ನಿಷ್ಕ್ರಿಯತೆ ಗಮನಿಸಿದ ಕೊಲ್ಕತಾ ಹೈಕೋರ್ಟ್ ಸಿಬಿಐ ತನಿಖೆ ಆದೇಶಿಸಿದೆ. ಈ ಮಧ್ಯೆ ಕೆಲವು ಬೆಳವಣಿಗೆಗಳಾಗಿವೆ. ಅನುಬ್ರತ ಮೊಂಡಲ್ ಪೋಷಣೆ ಮಾಡುತ್ತಿದ್ದ ಗೂಂಡಾ ಪಡೆಯ ಒಂದು ವಿಭಾಗವು ತಮ್ಮ ನಿಷ್ಠೆಯನ್ನು ತೃಣಮೂಲದಿಂದ ಬಿಜೆಪಿಗೆ ಬದಲಾಯಿಸಿಕೊಂಡಿದೆ. ಈ ಧ್ರುವೀಕರಣದಿಂದಾಗಿ ಹಳ್ಳಿಗಳನ್ನು ತಮ್ಮ ಹಿಡಿತದಲ್ಲಿಟ್ಟುಕೊಳ್ಳಲು ಬಿಜೆಪಿ ಮತ್ತು ತೃಣಮೂಲ ಗೂಂಡಾ ಪಡೆಗಳು ಪೈಪೋಟಿ ನಡೆಸುತ್ತಿವೆ. ಸಿಪಿಐ(ಎಂ) ಕಾರ್ಯಕರ್ತರ ಮೇಲೆ ಹರಿಹಾಯುತ್ತಿದ್ದ ಪಾತಕಿಗಳು ಈಗ ಬಿಜೆಪಿಯ ಆಶ್ರಯದಲ್ಲಿದ್ದಾರೆ.

ಮಖ್ರಾ ಎಂಬ ಹಳ್ಳಿಯಲ್ಲಿ ಪೋಲೀಸರ ಮೇಲೆ ದಾಳಿಮಾಡಿದವರು ಬಿಜೆಪಿ ಆಶ್ರಯದ ಗೂಂಡಾ ಪಡೆಗಳು ಎಂಬ ಆರೋಪಗಳಿವೆ. ಆದರೆ, ಮಖ್ರಾ ಗ್ರಾಮದ ಮೇಲೆ ದಾಳಿಮಾಡುವಂತೆ ಪೋಲೀಸರನ್ನು ಪ್ರಚೋದಿಸಿದ ತೃಣಮೂಲ ದಾಳಿಯ ನಂತರ ಅದನ್ನು ನೆಪ ಮಾಡಿಕೊಂಡು ತನ್ನ ವಿರೋಧಿಗಳನ್ನು ಬಗ್ಗು ಬಡಿಯಲು ಬಾಂಬ್ ದಾಳಿ ನಡೆಸಿತೆಂಬುದು ಈಗ ಬಯಲಾಗಿದೆ.

ಮೂರು ವರ್ಷಗಳ ನಂತರ ಮೊಳಗಿದ 'ಇಂಕ್ವಿಲಾಬ್ ಜಿಂದಾಬಾದ್' ಘೋಷಣೆ

ಸಿಪಿಐ(ಎಂ) ಮಾಜಿ ಸಂಸದ ರಾಮಚಂದ್ರ ದೋಂ ಮತ್ತು ರಾಜ್ಯ ಸಭಾ ಸದಸ್ಯ ರಿತುಬ್ರತ ಬ್ಯಾನರ್ಜಿ ಸೇರಿದಂತೆ ಎಡರಂಗದ ಎಂ.ಪಿ. ಮತ್ತು ಎಂ.ಎಲ್.ಎ.ಗಳನ್ನೊಳಗೊಂಡ ಒಂದು ನಿಯೋಗವು ಗಲಭೆ ನಡೆದ ಪ್ರದೇಶಕ್ಕೆ ಅಕ್ಟೋಬರ್ 29ರಂದು ಭೇಟಿ ನೀಡಿತು. ಪೋಲೀಸರು ಅವರನ್ನು ಬಂಧಿಸಲು ಮುಂದಾದಾಗ ಹಳ್ಳಿಯ ಜನರು ರಕ್ಷಿಸುವ ಸಲುವಾಗಿ ಅವರನ್ನು ಸುತ್ತುವರಿದು ತಮ್ಮ ನೋವು ತೋಡಿಕೊಂಡು ತಮ್ಮನ್ನು ರಕ್ಷಿಸುವಂತೆ ಕೋರಿದರು. ಮೂರು ವರ್ಷಗಳ ನಂತರ ಅಲ್ಲಿ 'ಇಂಕ್ವಿಲಾಬ್ ಜಿಂದಾಬಾದ್' ಘೋಷಣೆ ಮೊಳಗಿತು. ನಿಯೋಗದ ಬಂಧನ ಪ್ರತಿಭಟಿಸಿ ರಾಜ್ಯಾದ್ಯಂತ ಪ್ರತಿಭಟನೆಗಳು ನಡೆದಿವೆ.

ನೇಮಕಾತಿ ಮೇಲಿನ ನಿಷೇಧ ರದ್ದು ಕೇರಳ–ಯುವ ಸಂಘಟನೆಗಳ ವಿಜಯ

ಶ್ರೀಸಾಮಾನ್ಯರನ್ನು ವಿಶೇಷವಾಗಿ ಯುವ ಜನತೆಯನ್ನು ಬಾಧಿಸುತ್ತಿರುವ ಜ್ವಲಂತ ಸಮಸ್ಯೆಗಳ



ಪರಿಹಾರಕ್ಕಾಗಿ, ಡಿವೈಎಫ್ಐ, ಎಐವೈಎಫ್, ಯುವ ಜನತಾ ದಳ ಮತ್ತು ಯುವ ಕಾಂಗ್ರೆಸ್(ಎಸ್) ಸಂಘಟನೆಗಳನ್ನೊಳಗೊಂಡ ಎಡ ಪ್ರಜಾಸತ್ತಾತ್ಮಕ ಯುವ ಫೆಡರೇಷನ್ ವೇದಿಕೆಯಡಿಯಲ್ಲಿ ತಿರುವನಂತಪುರದ ರಾಜ್ಯ ಸೆಕ್ರೆಟಾರಿಯಟ್ ಕಟ್ಟಡದ ಎದುರು ಒಂದು ಬೃಹತ್ ಉಪವಾಸ ಮುಷ್ಕರ ಅಕ್ಟೋಬರ್ 14ರಿಂದ ಆರಂಭವಾಗಿತ್ತು.

ನೇಮಕಾತಿಯ ಮೇಲಿರುವ ನಿಷೇದ ಮತ್ತು ಹೊಸ ತೆರಿಗೆಗಳನ್ನು ಹಿಂಪಡೆಯುವಂತೆ ಸರ್ಕಾರವನ್ನು ಒತ್ತಾಯಿಸಲು ಆರಂಭಿಸಿದ ಈ ಉಪವಾಸ ಮುಷ್ಕರವನ್ನು ವಿರೋಧ ಪಕ್ಷದ ನಾಯಕ ವಿ.ಎಸ್. ಅಚ್ಯುತಾನಂದನ್ ಉದ್ಘಾಟಿಸಿದ್ದರು. ಈ ಹೋರಾಟ ಎಲ್ಲ ವರ್ಗದ ಜನರು ಮತ್ತು ಅನೇಕ ಪಕ್ಷಗಳ ಗಮನ ಸೆಳೆಯಿತು ಮತ್ತು ಅವರ ಬೆಂಬಲವನ್ನೂ ಪಡೆಯಿತು. ಕಾಂಗ್ರೆಸ್ ಕಾರ್ಯಕರ್ತರೂ ಬೆಂಬಲ ಕೊಟ್ಟರು.

ಹೋರಾಟಕ್ಕೆ ಸಿಗುತ್ತಿದ್ದ ಬೃಹತ್ ಬೆಂಬಲವನ್ನು ಮನಗಂಡು ಮುಖ್ಯಮಂತ್ರಿ ಊಮನ್ ಚಾಂಡಿ ಅಕ್ಟೋಬರ್ 17ರಂದು ಯುವ ಸಂಘಟನೆಗಳ ಪ್ರತಿನಿಧಿಗಳನ್ನು ಮಾತುಕತೆಗೆ ಆಹ್ವಾನಿಸಿದರು. ಅವರ ಕಛೇರಿಯಲ್ಲಿ ನಡೆದ ಸಭೆಯಲ್ಲಿ ಗೃಹ ಮಂತ್ರಿ ರಮೇಶ್ ಚೆನ್ನಿತಳ, ಸಾರಿಗೆ ಮಂತ್ರಿ ತಿರುವಾಂಚೂರು ರಾಧಾಕೃಷ್ಣನ್, ಯುವ ಫೆಡರೇಷನ್ ಪರವಾಗಿ ಟಿ.ವಿ. ರಾಜೇಶ್, ಶಾಸಕರು; ಜಿ. ಕೃಷ್ಣ ಪ್ರಸಾದ್, ಸೈ ಕುಡತ್ಯೆ, ಸಬು ಖಾನ್ ಮತ್ತು ಎಂ.ಎಸ್. ಶಫಿ ಭಾಗವಹಿಸಿದ್ದರು. ಕೊನೆಯಲ್ಲಿ, ಬೇಡಿಕೆಗಳನ್ನು ಈಡೇರಿಸುವುದಾಗಿ ಮುಖ್ಯಮಂತ್ರಿ ಊಮನ್ ಚಾಂಡಿ ಭರವಸೆ ಕೊಟ್ಟರು. ನೇಮಕಾತಿಯ ಮೇಲಿರುವ ನಿಷೇಧ ಹಿಂಪಡೆಯುವುದಾಗಿ ಮತ್ತು ಲೋಕ ಸೇವಾ ಆಯೋಗದ ಮೂಲಕ ರಾಜ್ಯ ರಸ್ತೆ ಸಾರಿಗೆ ನಿಗಮದ ಕಂಡಕ್ಟರ್ ಹುದ್ದೆಗಳನ್ನು ಶೀಘ್ರದಲ್ಲೇ ಭರ್ತಿ ಮಾಡುವುದಾಗಿ ತಿಳಿಸಿದರು.

ಹೊಸ ತೆರಿಗೆಗಳನ್ನು ಹಿಂಪಡೆಯಲು ಸರ್ಕಾರ ತೋರಿಸಿದ ಅಸಮ್ಮತಿಯ ವಿರುದ್ಧ ಬೀದಿಗಿಳಿದು ಹೋರಾಟ ನಡೆಸುವುದಾಗಿ ಯುವ ಫೆಡರೇಷನ್ ಎಚ್ಚರಿಕೆ ನೀಡಿದೆ.

ಯುವ ಸಂಘಟನೆಗಳು ಒಗ್ಗಟ್ಟಾಗಿ ಹೋರಾಟ ನಡೆಸಿದ ಫಲವಾಗಿ ನೇಮಕಾತಿಯ ಮೇಲಿರುವ ನಿಷೇಧ ಹಿಂಪಡೆಯುವಂತಾಗಿದೆ. ಇದೊಂದು ಅಪರೂಪದ ವಿಜಯ. ರಾಜ್ಯದ ಎಲ್ಲೆಡೆ ಯುವ ಸಂಘಟನೆಗಳು ವಿಜಯೋತ್ಸವ ಆಚರಿಸಿವೆ.

– ಕೆ. ಎಂ. ನಾಗರಾಜು

ಮಾರ್ಕ್ಸ್‌ವಾದಿಗಳು

ಮಾರ್ಕ್ಸ್‌ವಾದಿಗಳ ಹೊರತು ಉಳಿದೆಲ್ಲ ಪಕ್ಷ
ಬಹು ಸಂಖ್ಯಾತರುಗಳಿಗೆ ಬೇಡಿಸಲು ಭಿಕ್ಷ
ಒಂದಲ್ಲ ಎರಡಲ್ಲ ಅರ್ವತ್ತೇಳು ವರುಷ
ಸಜ್ಜನರು ಕಂಡಿದ್ದು ಉಂಟೇನು ಹರುಷ?

– ವಿಡಂಬಾರಿ

ನಾಯಕರು?

ಇಲ್ಲಿಲ್ಲವೇ ಇಲ್ಲ ನಾಯಕರ ಕೊರತೆ
ಮನುಷ್ಯತ್ವದ್ದೇ ಕೊರತೆ ಎಂಬುದನು ಅರಿತೆ
ಈ ಕೊರತೆ ನೀಗಿದರೆ ಕೇಳು ಅಮಾತ್ಯ
ಖಂಡಿತವು ಉಸಿರಾಟ ಹತ್ತುವುದು ಸತ್ಯ.

– ವಿಡಂಬಾರಿ

ಜನಶಕ್ತಿ
ಕನ್ನಡ ವಾರಪತ್ರಿಕೆ

ಮಹಾರಾಷ್ಟ್ರ ವಿಧಾನ ಸಭಾ ಚುನಾವಣಾ ಫಲಿತಾಂಶ : ಒಂದು ಅವಲೋಕನ

ಡಾ.ಅಶೋಕ್ ಧವಳೆ

ಅಕ್ಟೋಬರ್ 19, 2014 ರಂದು ಮಹಾರಾಷ್ಟ್ರ ವಿಧಾನ ಸಭೆಯ ಚುನಾವಣಾ ಫಲಿತಾಂಶದ ಘೋಷಣೆಯಾಗಿದೆ. ಯಾವ ಪಕ್ಷಕ್ಕೂ ಬಹುಮತ ಸಿಕ್ಕಿಲ್ಲ. ಸದನವು ಅತಂತ್ರ ಸ್ಥಿತಿಯಲ್ಲಿದೆ. 122 ಸ್ಥಾನಗಳಿಸಿರುವ ಬಿ.ಜೆ.ಪಿ. ಅತ್ಯಂತ ದೊಡ್ಡ ಪಕ್ಷವಾಗಿದ್ದು ಈಗ ಸರ್ಕಾರ ರಚನೆ ಮಾಡಿದೆ. ಶಿವಸೇನೆ 63 ಸೀಟುಗಳಿಸಿ ಎರಡನೆ ಸ್ಥಾನದಲ್ಲಿದೆ. 42 ಸೀಟು ಗಳಿಸಿರುವ ಕಾಂಗ್ರೆಸ್ ಮೂರನೆ ಸ್ಥಾನದಲ್ಲಿದೆ. 41 ಸೀಟು ಗಳಿಸಿರುವ ಎನ್.ಸಿ.ಪಿ. ನಾಲ್ಕನೆ ಸ್ಥಾನದಲ್ಲಿದೆ.

ಎಡ, ಪ್ರಜಾಸತ್ತಾತ್ಮಕ ಮತ್ತು ಜಾತ್ಯಾತೀತ ಪಕ್ಷಗಳು 'ಮಹಾರಾಷ್ಟ್ರ ಲೋಕಶಾಹಿ ಸಮಿತಿ' ಎಂಬ ಮೈತ್ರಿಕೂಟ ರಚಿಸಿಕೊಂಡು ಒಟ್ಟಾಗಿ ಸ್ಪರ್ಧಿಸಿ ಐದು ಸ್ಥಾನ ಗಳಿಸಿವೆ. ಪಿ.ಡಬ್ಲ್ಯೂ.ಪಿ. ಮೂರು ಸೀಟು, ಸಿಪಿಐ(ಎಂ) ಮತ್ತು ಪ್ರಕಾಶ್ ಅಂಬೇಡ್ಕರ್ ನೇತೃತ್ವದ ರಿಪಬ್ಲಿಕನ್ ಪಾರ್ಟಿ–ಬಹುಜನ್ ಮಹಾಸಂಘ್ ತಲಾ ಒಂದು ಸೀಟು ಗಳಿಸಿವೆ.

ಹಿಂದಿನ ವಿಧಾನ ಸಭೆಯಲ್ಲಿ 13 ಸ್ಥಾನಗಳನ್ನು ಹೊಂದಿದ್ದ ರಾಜ್ ಠಾಕ್ರೆಯ ಎಂ.ಎನ್.ಎಸ್. ಪಕ್ಷ ಕೇವಲ ಒಂದು ಸೀಟು ಗಳಿಸಿದೆ. ಏಳು ಮಂದಿ ಪಕ್ಷೇತರರು ಆಯ್ಕೆಯಾಗಿದ್ದಾರೆ. ಬಹುಜನ್ ವಿಕಾಸ್ ಅಘಡಿ ಮೂರು ಸೀಟು ಗಳಿಸಿದೆ. ಕಳೆದ ಬಾರಿ ನಾಲ್ಕು ಸದಸ್ಯರನ್ನು ಹೊಂದಿದ್ದ ಸಮಾಜವಾದಿ ಪಕ್ಷವು ಒಂದು ಸೀಟು ಗಳಿಸಿದೆ. ಆದರೆ, ಒವೈಸಿ ನಾಯಕತ್ವದ ಎಂಐಎಂ ಪಕ್ಷವು ಎರಡು ಸೀಟು ಗಳಿಸಿರುವುದು ಆತಂಕಕಾರಿಯಾಗಿದೆ. ಅನೇಕ ಸ್ಥಾನಗಳಲ್ಲಿ ಸ್ಪರ್ಧಿಸಿದ್ದ ಬಹುಜನ್ ಸಮಾಜ ಪಕ್ಷದ ಸಂಪಾದನೆ ಶೂನ್ಯ. ಅನೇಕ ವರ್ಷಗಳಿಂದಲೂ ಸಿಪಿಐ ಮತ್ತು ಜೆಡಿ(ಎಸ್) ಪಕ್ಷಗಳಿಗೆ ಮಹಾರಾಷ್ಟ್ರ ವಿಧಾನ ಸಭೆಯಲ್ಲಿ ಪ್ರಾತಿನಿಧ್ಯ ಇಲ್ಲ.

ಲೋಕಸಭೆ–ವಿಧಾನ ಸಭೆ ಚುನಾವಣೆಗಳ ಹೋಲಿಕೆ

ಆರು ತಿಂಗಳ ಹಿಂದಷ್ಟೆ ನಡೆದ ಲೋಕಸಭಾ ಚುನಾವಣೆಯಲ್ಲಿ ಶಿವಸೇನೆ–ಬಿ.ಜೆ.ಪಿ. ಮೈತ್ರಿ ಕೂಟ 48 ಲೋಕ ಸಭಾ ಸ್ಥಾನಗಳ ಪೈಕಿ 42 ಸೀಟು ಗಳಿಸಿದ್ದವು. ವಿಧಾನ ಸಭೆಯ 288 ಸ್ಥಾನಗಳಲ್ಲಿ 244 ಸ್ಥಾನಗಳಲ್ಲಿ ಮುನ್ನಡೆ ಸಾಧಿಸಿದ್ದವು. ಆದ–ರೆ, ಈ ಚುನಾವಣೆಯಲ್ಲಿ ಎರಡು ಪಕ್ಷಗಳ ಒಟ್ಟು ಸಂಖ್ಯಾಬಲ 186 ಇದೆ. 132 ವಿಧಾನ ಸಭಾ ಕ್ಷೇತ್ರಗಳಲ್ಲಿ ಮುನ್ನಡೆ ಸಾಧಿಸಿದ್ದ ಬಿ.ಜೆ.ಪಿ. 122 ಸೀಟು ಗಳಿಸಿದೆ. 100 ಕ್ಷೇತ್ರಗಳಲ್ಲಿ ಮುನ್ನಡೆ ಸಾಧಿಸಿದ್ದ ಶಿವ ಸೇನೆ 63 ಸೀಟು ಗಳಿಸಿದೆ. ಆದ–ರೆ, ಆಗ ಕೇವಲ 14 ವಿಧಾನ ಸಭಾ ಕ್ಷೇತ್ರಗಳಲ್ಲಿ ಮುನ್ನಡೆಯಲ್ಲಿದ್ದ ಕಾಂಗ್ರೆಸ್ ಈಗ 42 ಸೀಟು ಗಳಿಸಿದೆ. 26 ಕ್ಷೇತ್ರಗಳಲ್ಲಿ ಮುನ್ನಡೆಯಲ್ಲಿದ್ದ ಎನ್.ಸಿ.ಪಿ. ಈಗ 41 ಸೀಟು ಗಳಿಸಿದೆ. ಕೇವಲ 4 ವಿಧಾನ ಸಭಾ ಕ್ಷೇತ್ರಗಳಲ್ಲಿ ಮುನ್ನಡೆಯಲ್ಲಿದ್ದ ಸಣ್ಣ ಪುಟ್ಟ ಪಕ್ಷಗಳು ಈಗ 19 ಸೀಟು ಪಡೆದಿವೆ.

ಶೇಕಡಾವಾರು ಮತ ಗಳಿಕೆಯಲ್ಲಿ ಆಗಿರುವ ಬದಲಾವಣೆ ಬಹಳ ಕಡಿಮೆ. ಬಿ.ಜೆ.ಪಿ. 0.5% ಹೆಚ್ಚಿಗೆ ಮತ ಗಳಿಸಿದೆ. ಶಿವ ಸೇನೆ 1.3% ಕಳೆದುಕೊಂಡಿದೆ. ಕಾಂಗ್ರೆಸ್ 0.1% ಕಳೆದುಕೊಂಡಿದೆ. ಎನ್.ಸಿ.ಪಿ 1% ಗಳಿಸಿಕೊಂಡಿದೆ. ಎಂ.ಎನ್. ಎಸ್. ಶೇ. 5.7% ರಿಂದ 3.1% ಕ್ಕೆ ಇಳಿದಿದೆ. ಬಹುಜನ್ ಸಮಾಜ ಪಕ್ಷ ತನ್ನ 2.3% ಮತಗಳ ಪಾಲು ಉಳಿಸಿಕೊಂಡಿದೆ. ಸಮಾಜವಾದಿ ಪಕ್ಷವು 0.7%ನಿಂದ 0.2%ಕ್ಕೆ ಇಳಿದಿದೆ. ಬಹುಜನ್ ವಿಕಾಸ್ ಅಘಡಿ ತನ್ನ 0.6% ಪಾಲು ಉಳಿಸಿಕೊಂಡಿದೆ. ಎಂಐಎಂ ಪಕ್ಷ–ಕ್ಕೆ 0.9% ನಿವ್ವಳ ಲಾಭ. ಪಿ.ಡಬ್ಲ್ಯೂ.ಪಿ. ತನ್ನ 1% ಮತ್ತು ಬಹುಜನ್ ಮಹಾಸಂಘ್ (ರಿಪಬ್ಲಿಕನ್ ಪಾರ್ಟಿ–ಪ್ರಕಾಶ್ ಅಂಬೇಡ್ಕರ್) ತನ್ನ 0.9% ಉಳಿಸಿಕೊಂಡಿವೆ.

ಸಿಪಿಐ(ಎಂ) ಮತ ಗಳಿಕೆ 0.6% ನಿಂದ 0.4%ಗೆ ಇಳಿದಿದೆ. ಸಿಪಿಐ ಮತ್ತು ಜೆಡಿ(ಎಸ್) ಪಾಲು ತಲಾ 0.1% ಇದೆ. ಎಡ ಮತ್ತು ಜಾತ್ಯಾತೀತ ಪಕ್ಷಗಳ ಪರಿಸ್ಥಿತಿ ಅನೇಕ ವರ್ಷಗಳಿಂದಲೂ ಮಹಾರಾಷ್ಟ್ರದಲ್ಲಿ ಅಷ್ಟೇನೂ ತೃಪ್ತಿಕರವಾಗಿಲ್ಲ.

ಬಣ್ಣ ಬದಲಿಸಿದ ಎನ್‌ಸಿಪಿ

ಚುನಾವಣೋತ್ತರದ ಮತಗಟ್ಟೆ ಸಮೀಕ್ಷೆಗಳು ಬಿ.ಜೆ.ಪಿ. ಸ್ಪಷ್ಟ ಬಹುಮತ ಪಡೆಯುತ್ತದೆಂದು ಹೇಳಿದ್ದ ಭವಿಷ್ಯ ನಿಜವಾಗಲಿಲ್ಲ. ವಿಧಾನ ಸಭೆ ಅತಂತ್ರ ಸ್ಥಿತಿಯಲ್ಲಿರುವುದು ಖಚಿತವಾಗುತ್ತಿದ್ದಂತೆಯೇ, ಎಲ್ಲಾ ಫಲಿತಾಂಶಗಳು ಹೊರ ಬೀಳುವ ಮುನ್ನವೇ, ಎನ್.ಸಿ.ಪಿ.ಯ ಪ್ರಫುಲ್ ಪಟೇಲ್ ಮತ್ತು ಶರದ್ ಪವಾರ್ "ರಾಜ್ಯದ ಹಿತ ದೃಷ್ಟಿಯಿಂದ ಬಿ.ಜೆ.ಪಿ. ಸರಕಾರ ರಚಿಸಲು ತಮ್ಮ ಪಕ್ಷವು ಬೇಷರತ್ ಬೆಂಬಲ ಕೊಡುತ್ತದೆ." ಎಂದು ತರಾತುರಿಯ ಘೋಷಣೆ ಮಾಡಿದರು. ಚುನಾವಣಾ ಪ್ರಚಾರದಲ್ಲಿ ಬಿ.ಜೆ.ಪಿ. ಮತ್ತು ನರೇಂದ್ರ ಮೋದಿಯನ್ನು ಹಿಗ್ಗಾ ಮುಗ್ಗಾ ನಿಂದಿಸಿದ್ದ ಅವರು ಉಲ್ಟಾ ಹೊಡೆದದ್ದಕ್ಕೆ ಕಾರಣ ಸ್ಪಷ್ಟವಾಗಿತ್ತು. ಪ್ರಫುಲ್ ಪಟೇಲ್ ಸೇರಿದಂತೆ ಕೇಂದ್ರದಲ್ಲಿ ಮಂತ್ರಿಯಾಗಿದ್ದ ಕೆಲವರು ಮತ್ತು ರಾಜ್ಯದಲ್ಲಿ ಮಂತ್ರಿಯಾಗಿದ್ದ ಅಜಿತ್ ಪವಾರ್, ಛಗನ್ ಭುಜಬಲ್ ಮತ್ತು ಸುನಿಲ್ ತತ್ಕರೆ ಮುಂತಾದವರ ಮೇಲೆ ಭ್ರಷ್ಟಾಚಾರದ ಆಪಾದನೆಗಳಿವೆ. ಈ ಹಗರಣಗಳಲ್ಲಿ 'ರಕ್ಷಣೆ'ಗಾಗಿ ಬಿ.ಜೆ.ಪಿ.ಗೆ ಬೇಷರತ್ ಬೆಂಬಲ ಕೊಡುವುದು ಅವರಿಗೆ ಬಹುಷ: ಅನಿವಾರ್ಯವಾಗಿತ್ತು.

ಎನ್.ಸಿ.ಪಿ.ಯು ಮೇಲೆ ಬಿದ್ದು ಬಿ.ಜೆ.ಪಿ.ಗೆ ಕೊಡಬಯಸುವ ಬೆಂಬಲವನ್ನು ಬಿ.ಜೆ.ಪಿ.ಯು ಶಿವಸೇನೆಯೊಂದಿಗೆ ಮೈತ್ರಿ ಕುದುರಿಸಿಕೊಳ್ಳಲು ಬಳಸುತ್ತಿದೆ. ಚುನಾವಣೆಯಲ್ಲಿ ಅಷ್ಟೆಲ್ಲಾ ಕೆಸರೆರಚಾಡಿದರೂ ಕೇಂದ್ರ ಮಂತ್ರಿ ಮಂಡಲದಲ್ಲಿ ಶಿವಸೇನೆ ಪ್ರತಿನಿಧಿ ಮುಂದುವರಿದ್ದಾರೆ ಮತ್ತು ಮುಂಬಯಿ ಪುರಸಭೆಯಲ್ಲಿ ಶಿವಸೇನೆಗೆ ಬಿ.ಜೆ.ಪಿ.ಯ ಬೆಂಬಲವೂ ಮುಂದುವರಿಯುತ್ತಿದೆ.


ಚುನಾವಣೆಗಳಲ್ಲಿ ಸಿಪಿಐ(ಎಂ) ಸೋಲು–ಗೆಲುವು

ನಾಸಿಕ್ ಜಿಲ್ಲೆಯ ಕಲ್ವಾನ್(ಎಸ್.ಟಿ.) ಕ್ಷೇತ್ರವನ್ನು ಸಿಪಿಐ(ಎಂ) ಉಳಿಸಿಕೊಂಡಿದೆ. 2009ರಲ್ಲಿ ಪಕ್ಷವು ಈ ಕ್ಷೇತ್ರವನ್ನು ಕಳೆದುಕೊಂಡಿತ್ತು. ಎಐಕೆಎಸ್ ಉಪಾಧ್ಯಕ್ಷರೂ ಮತ್ತು ಆದಿವಾಸಿಗಳ ಜನಪ್ರಿಯ ಮುಖಂಡರೂ ಆದ ಜೆ.ಪಿ. ಗವಿಟ್ 67,795 ಮತಗಳಿಸಿ ಇಲ್ಲಿ ಜಯ ಗಳಿಸಿದ್ದಾರೆ. ಅವರು ಸುರ್ಗಣ (ಎಸ್.ಟಿ.) ಕ್ಷೇತ್ರದಿಂದ ಆರು ಬಾರಿ ಎಂ.ಎಲ್.ಎ. ಆಗಿ ಚುನಾಯಿತರಾಗಿದ್ದರು. ಕ್ಷೇತ್ರ ಮರು ವಿಂಗಡಣೆಯ ನಂತರ ಈ ಕ್ಷೇತ್ರವನ್ನು ಕಲ್ವಾನ್(ಎಸ್.ಟಿ.) ಎಂದು ಕರೆಯಲಾಗುತ್ತಿದೆ. ಪಕ್ಷಕ್ಕೆ ಇದು ಒಂದು ಮುಖ್ಯವಾದ ಗೆಲುವಾಗಿದೆ.

ಪಕ್ಷವು ದಹಾಣು(ಎಸ್.ಟಿ.) ಕ್ಷೇತ್ರವನ್ನು ಗೆಲ್ಲುವ ನಿರೀಕ್ಷೆ ಇಟ್ಟುಕೊಂಡಿತ್ತು. 1978ರಿಂದ ಸತತವಾಗಿ ಎಂಟು ಬಾರಿ ಈ ಕ್ಷೇತ್ರವನ್ನು ಗೆದ್ದಿದ್ದ ಪಕ್ಷವು 16,700 ಮತಗಳ ಅಂತರದಿಂದ ಬಿ.ಜೆ.ಪಿ.ಗೆ ಸೋತಿದೆ. ಪಕ್ಷದ ರಾಜ್ಯ ಸಮಿತಿ ಸದಸ್ಯರೂ ಮತ್ತು ಎಐಕೆಎಸ್ ಜಂಟಿ ಕಾರ್ಯದರ್ಶಿಯೂ ಆದ ಬರ್ಕ್ಯಾ ಮಂಗಟ್ 28,149 ಮತ ಗಳಿಸಿ ಎರಡನೆ ಸ್ಥಾನದಲ್ಲಿದ್ದಾರೆ.

ಪಕ್ಷವು ಗೆಲ್ಲುವ ನಿರೀಕ್ಷೆ ಇಟ್ಟುಕೊಂಡಿದ್ದ ಮೂರನೆ ಕ್ಷೇತ್ರ ಸೋಲಾಪುರ. ಪಕ್ಷದ ಕೇಂದ್ರ ಸಮಿತಿ ಸದಸ್ಯರೂ, ಸಿಐಟಿಯು ರಾಜ್ಯಾ ಧ್ಯಕ್ಷರೂ ಮತ್ತು ಮೂರು ಬಾರಿ ಎಂ.ಎಲ್.ಎ. ಆಗಿ ಚುನಾಯಿತರಾಗಿದ್ದ ನರಸಯ್ಯ ಆದಂ ಅವರು ಇಲ್ಲಿ ಅಭ್ಯರ್ಥಿಯಾಗಿದ್ದರು. ಕೇಂದ್ರದ ಮಾಜಿ ಗೃಹ ಮಂತ್ರಿ ಸುಶೀಲ್ ಕುಮಾರ್ ಶಿಂಧೆಯವರ ಪುತ್ರಿ ಇಲ್ಲಿ ಕಾಂಗ್ರೆಸ್ ಅಭ್ಯರ್ಥಿಯಾಗಿದ್ದರು. ಒಂದೆಡೆ ಎಂಐಎಂ ಮತ್ತು ಶಿವಸೇನೆಗಳ ಮಧ್ಯೆ ನಡೆದ ಕೋಮು ಧೃವೀಕರಣ ಮತ್ತೊಂದೆಡೆ ಕಾಂಗ್ರೆಸ್‌ನ ಹಣಬಲದ ಹಾವಳಿಯಲ್ಲಿ ಪಕ್ಷವು ಸೋಲು ಅನುಭವಿಸಿತು.

ಸಿಪಿಐ(ಎಂ) ಈ ಮೂರು ಕ್ಷೇತ್ರಗಳಲ್ಲದೆ ಇನ್ನೂ ನಾಲ್ಕು ಕ್ಷೇತ್ರಗಳಲ್ಲಿ 10,000ಕ್ಕಿಂತಲೂ ಹೆಚ್ಚಿನ ಮತ ಗಳಿಸಿದೆ. ಪಕ್ಷವು ಸ್ಪರ್ಧಿಸಿದ್ದ 20 ಕ್ಷೇತ್ರಗಳಲ್ಲಿ ಒಟ್ಟು 2,07,933 ಮತ ಗಳಿಸಿದೆ. 2009ರಲ್ಲಿ 2,70,052 ಮತ ಗಳಿಸಿತ್ತು. ●





ಪ್ರಾಣ ಹಾನಿ ಧರ್ಮ ಗ್ಲಾನಿ

ಗುಜರಾತಿನಲ್ಲಾದ ಶಿಶು ಹತ್ಯೆ ಮತ್ತೆ
ಮಹಿಳೆಯರ ಪುರುಷರುಗಳ ಹತ್ಯೆ ಗೊತ್ತೆ?
ಒಂದು ಸಾವಿರದ ನಾಲ್ಕು ಪ್ರಾಣ ಹಾನಿ
ಆಸ್ತಿ ಪಾಸ್ತಿ ನಷ್ಟಗಳು ಧರ್ಮ ಗ್ಲಾನಿ

– ವಿಡಂಬಾರಿ

ಮಾತಿನ ಮಲ್ಲ

ಮಹಾಮೌನಿಯ ನಂತರ ನಮಗೊಬ್ಬ ಮಾತನಾಡುವ ಪ್ರಧಾನ ಮಂತ್ರಿ ಸಿಕ್ಕಿದ್ದಾರೆ. ಅವರು ಮಾತನಾಡುತ್ತಾರೆ, ಆಡು ಮುಟ್ಟದ ಗಿಡವಿಲ್ಲ, ಮೋದಿ ಮಾತನಾಡದ ವಿಷಯವಿಲ್ಲ ಎಂಬಂತಾಗಿದೆ. ಮಾತು, ಮಾತು, ಮಾತು. ಬರೇ ಮಾತು. ಮತದಾನದ ಮೈದಾನದಲ್ಲಿ ಮಾತು. ಕೆಳಮನೆ, ಮೇಲ್ಮನೆಯಲ್ಲಿ ಮಾತು, ದಿಲ್ಲಿಯಲ್ಲಿ ಮಾತು, ಹಳ್ಳಿಯಲ್ಲಿ ಮಾತು. ಗಾಳಿ ಮಾತು. ಕನ್ನಡಿಯೊಳಗಿನ ಮಾತು, ಜಪಾನಿಯರನ್ನು ಗೆದ್ದ ಮಾತು. ಅಮೇರಿಕನ್ನರು ಮನಸೋತ ಮಾತು!. ಶಾಲಾ ಮಕ್ಕಳೊಂದಿಗೆ ಮಾತು, ಗಡಿಯಲ್ಲಿ ಜವಾನರೊಂದಿಗೆ ಮಾತು.

ಅವರು ಮಾತನಾಡುತ್ತಾರೆ ಅಭಿವೃದ್ಧಿಯ ಕುರಿತು! ಗುಜರಾತ್ ಮಾದರಿಯ ಕುರಿತು! ಹಗಲಲ್ಲೇ ಆಕಾಶದಲ್ಲಿ ನಕ್ಷತ್ರಗಳು ಹೊಳೆಯುವುದನ್ನು ತೋರಿಸುತ್ತಾರೆ. ದೇಶಕ್ಕೆ ಬಂಡವಾಳ ಹರಿದು ಬರುವುದನ್ನೇ ಕನವರಿಸುತ್ತಾರೆ. ಅದರ ಸ್ವಾಗತಕ್ಕೆ ಎಲ್ಲೆಡೆ 'ಕಮಲ'ದ ಬೆಳೆ ಬೆಳೆಯಲು ಶ್ರಮಿಸುತ್ತಾರೆ. ದೇಶವನ್ನು ಅವರಿಗೊಪ್ಪಿಸಿ ಹಾಯಾಗಿರಹುದು ಎನ್ನುತ್ತಾರೆ.

'ಭಾರತದಲ್ಲಿ (ಹಣ) ಮಾಡಿ' ಎನ್ನುತ್ತಾರೆ. ಅವರಿಗೆ ರತ್ನಗಂಬಳಿ ಹಾಸುತ್ತಾರೆ, ತಡೆಹಿಡಿಯುವ



ಕಾನೂನು ಬೇಲಿಗಳನ್ನು ಕಿತ್ತೆಸೆಯುತ್ತಾರೆ. ಲೇಬರ್ ಇನ್ಸ್‌ಪೆಕ್ಟರ್ ಸ್ಥಾನಕ್ಕೆ ಪೊಲೀಸ್ ಇನ್ಸ್‌ಪೆಕ್ಟರ್ ಬರುತ್ತಾನೆ. ಆಗ ಎಲ್ಲವೂ ಶಾಂತಗುತ್ತದೆ, ಸ್ಮಶಾನದಷ್ಟು! ಸ್ಟ್ರೈಕುಗಳಿಲ್ಲ, ಬಂದ್‌ಗಳಿಲ್ಲ, ಮಧ್ಯಮ ವರ್ಗದವರನ್ನು ಕೆರಳಿಸುವ 'ಟ್ರಾಫಿಕ್ ಜಾಮ್' ಗಳಿಲ್ಲ. ಹೀಗೆ ಬರುತ್ತವೆ 'ಒಳ್ಳೆಯ ದಿನಗಳು!'.

ಯಾರೂ ಯಾರ ನಿಯಂತ್ರಣದಲ್ಲಿರಲು ಬಯಸುವುದಿಲ್ಲ. ಅಲ್ಲವೆ? ಅವರೂ ಸಹ. ಕಪ್ಪು ಹಣದ ಒಡೆಯರು! ಅವರ ಹೆಸರು ಹೇಳಲೊಲ್ಲೆ! ಅವರೂ ನಿಯಂತ್ರಣ ಮುಕ್ತವಾಗಿರಲು ಬಯಸುತ್ತಾರೆಂದು ಈಗ ತಿಳಿದು ಬಂದಿದೆಯಂತೆ! ಮೋದಿ ಉದಯಿಸಿದ ಈ ನಾಡಿನಲ್ಲಿ ಯಾರು ನಿಯಂತ್ರಣದಲ್ಲಿದ್ದಾರೆ? ಭ್ರಷ್ಟಾಚಾರಿಗಳು? ಅತ್ಯಾಚಾರಿಗಳು? ಲಾಭಕೋರ ತೈಲ ಕಂಪೆನಿಗಳನ್ನೂ ಈಗ ನಿಯಂತ್ರಣ ಮುಕ್ತಗೊಳಿಸಿದ್ದಾರೆ ಗುಜರಾತಿನಿಂದ ಬಂದ ಸಾಹೇಬರು! ಅವರು ಮೌನದಲ್ಲೇ ಪೆಟ್ರೋಲ್ ನಿಯಂತ್ರಣ ಮುಕ್ತಗೊಳಿಸಿದರು. ಇವರು ಮಾತು ಮಾತಿನಲ್ಲೇ ಡಿಸೆಲ್ ನಿಯಂತ್ರಣ ಮುಕ್ತಗೊಳಿಸಿದರು. ಅದೇ ದಾರಿ! ಅದೇ ನೀತಿ! ಮೌನಕ್ಕೂ ಮಾತಿಗೂ ಎಲ್ಲಿದೆ ವ್ಯತ್ಯಾಸ?.

ಅವರು ಮಾತನಾಡುತ್ತಾರೆ. ನೀವು ಮಾತನಾಡುವಂತಿಲ್ಲ. ನೀವು ಆಲಿಸಬೇಕು, ಮೈಮರೆಯ ಬೇಕು. ಮೋಕ್ಷಾನುಭವ ಪಡೆಯಬೇಕು, ಒಳ್ಳೆಯ ದಿನಗಳನ್ನು ಎದುರು ನೋಡಬೇಕು. ಬೆಲೆಏರಿಕೆಯಾದರೆ ಸಹಿಸಿಕೊಳ್ಳಬೇಕು, ಊಟ ಮಾಡದೇ ಬದುಕಲು ಕಲಿಯಬೇಕು. ನಮ್ಮ ರೈತರು ಕಷ್ಟ ಪಡುವುದೂ ಬೇಡ, ಆತ್ಮಹತ್ಯೆ ಮಾಡಿಕೊಳ್ಳುವುದೂ ಬೇಡ. ರೈತರು ತಮ್ಮ ಭೂಮಿಯನ್ನು ಸ್ವಸಂತೋಷದಿಂದ ಕಂಪೆನಿಗಳಿಗೆ ಒಪ್ಪಿಸಿದರೆ ಅವರೇ ಬಂದು ಇಲ್ಲಿ ಬಂಗಾರ ಬೆಳೆಯುತ್ತಾರೆ. ರೈತರ ಬಾಳು ಬಂಗಾರವಾಗುತ್ತದೆ!.

ಮನುಷ್ಯರು ದನಗಳಂತಾಗಬೇಕು. ದನಗಳು ಕಸ ತಿಂದು ರಸ ನೀಡುತ್ತವೆ. – ಜನಸಂಖ್ಯೆ ಕಡಿಮೆ ಆಗಬೇಕು. ದನಸಂಖ್ಯೆ ಹೆಚ್ಚಾಗಬೇಕು. ದನಗಳನ್ನು ತಿನ್ನುವ ಜನಗಳನ್ನು ಸಾಯಿಸಬೇಕು. ಇಂತವರು ಈ ದೇಶದಲ್ಲಿ ಇರುವವರೆಗೂ ನಮಗಿಲ್ಲ ನೆಮ್ಮದಿ, ಗುಮ್ಮಟಗಳು ಉರುಳಲಿ. ಕೇರಿಗಳು ಭಸ್ಮವಾಗಲಿ ಆಗಲೇ ಈ ನಾಡಿಗೆ ಸಮೃದ್ಧಿ!... ಹೀಗೆ ಸಾಗುತ್ತದೆ ಮಾತಿನ ಮಲ್ಲನ ಮೋಡಿ, ಮೋಸ ಹೋಗಬ್ಯಾಡಿರೋ ಹುಚ್ಚಪ್ಪಗಳಿರಾ.

– ನಿತ್ಯಾನಂದ ಸ್ವಾಮಿ

'ಕಾರ್ಮಿಕ ವರ್ಗಕ್ಕೆ ಹೋರಾಟದಲ್ಲಿ ಸಂಘಟನೆಯೊಂದೇ ಅಸ್ತ್ರ'......


ಪುಟ 6 ರಿಂದ

ಯಾಗಿ ಮಾತನಾಡಿದರು. ಶಂಕರ್ ಅವರು 'ದೇಶದಲ್ಲಿ ತಾಂಡವವಾಡುತ್ತಿರುವ ಮಿತಿಮೀರಿದ ಭ್ರಷ್ಟಾಚಾರ ಮತ್ತು ಜನಸಾಮಾನ್ಯರನ್ನು ಕಿತ್ತುತಿನ್ನುತ್ತಿರುವ ವಿಪರೀತ ಬೆಲೆ ಏರಿಕೆಗಳು ಕಾರ್ಮಿಕ ವರ್ಗದ ಪ್ರಬಲ ಶತ್ರುಗಳು, ಈ ಎರಡರ ವಿರುದ್ಧ ದೇಶದ ದುಡಿಯುವ ಜನತೆ ಒಂದಾಗಿ ಪ್ರತಿರೋಧ ವ್ಯಕ್ತಪಡಿಸಬೇಕು." ಎಂದು ಆಕ್ರೋಶ ವ್ಯಕ್ತಪಡಿಸಿದರು. ಕಾರ್ಮಿಕ ವರ್ಗಕ್ಕೆ ಅಧಿಕಾರಕ್ಕಾಗಿ ಅದು ನಡೆಸುವ ಹೋರಾಟದಲ್ಲಿ ಸಂಘಟನೆಯಲ್ಲದೆ ಬೇರೆ ಯಾವ ಅಸ್ತ್ರವೂ ಇರುವುದಿಲ್ಲ ಎಂದು ಅಭಿಪ್ರಾಯ ಪಟ್ಟರು.

ಬಿಕ್ಕಟ್ಟಿನಲ್ಲಿ ಹಂಚು ಉದ್ಯಮ

ಉಡುಪಿ ಜಿಲ್ಲೆಯಲ್ಲಿ ದುಡಿಯುವ ವರ್ಗದ ಕಾರ್ಮಿಕರ ಮತ್ತು ಜನ ಸಾಮಾನ್ಯರನ್ನು ಕಾಡುತ್ತಿರುವ ಜ್ವಲಂತ ಸಮಸ್ಯೆಗಳ ವಿರುದ್ಧ ನ್ಯಾಯವಾದ ಬೇಡಿಕೆ ಪರವಾಗಿ ಪ್ರಜಾಸತ್ತಾತ್ಮಕ ಚಳುವಳಿಯನ್ನು ಕಟ್ಟಿ ಎಡ ರಾಜಕೀಯ ವರ್ಗ ಹೋರಾಟ ಸಂಘಟಿಸುವಲ್ಲಿ ಮಹತ್ತರವಾದ ಕೊಡುಗೆಯನ್ನು ಹಂಚು ಕಾರ್ಮಿಕರು ನೀಡಿರುತ್ತಾರೆ. ಇದೀಗ ಹಂಚು ಕೈಗಾರಿಕೆ–ಯ ಉದ್ಯಮದಲ್ಲಿ ಬಿಕ್ಕಟ್ಟು ತಲೆದೋರಿದ್ದು, ಹಂಚು ತಯಾರಿಕೆಗೆ ಉತ್ತಮ ಗುಣಮಟ್ಟದ ಆವೆ ಮಣ್ಣು ಕಚ್ಚಾವಸ್ತು ಕೊರತೆಯಿದೆ. ಇದರಿಂದಾಗಿ ಕಾರ್ಖಾನೆಗಳಲ್ಲಿ ತಯಾರಾಗುವ ಹಂಚುಗಳು ಕಳಪೆ ಗುಣಮಟ್ಟದ್ದಾಗಿದೆ. ಇದರಿಂದಾಗಿ ಹಂಚಿಗೆ ಮಾರುಕಟ್ಟೆ ಇಲ್ಲದೆ ಹೇರಳ ಹಂಚು ಕಾರ್ಖಾನೆಗಳಲ್ಲಿ ದಾಸ್ತಾನು ಉಳಿಯುಂತಾಗಿದೆ. ಇತ್ತೀಚೆಗೆ ತಾರಸಿ ಕಟ್ಟಡ ನಿರ್ಮಾಣ ಹೆಚ್ಚುತ್ತಿರುವುದಲ್ಲದೆ, ಮೇಲ್ಛಾವಣಿಗೆ ಸಿಮೆಂಟ್ ತಗಡಿನ ಶೀಟ್ ಅಳವಡಿಸುವುದು, ಮರಮಟ್ಟು, ಪಿಠೋಪಕರಣ ಇತ್ಯಾದಿಗಳ

ಬೆಲೆ ದುಬಾರಿಯಾಗಿರುವುದು, ಸರಕಾರದ ವಸತಿ ಸಾಲ ಸಹಾಯ ಧನ ಸೌಲಭ್ಯ ಸಕಾಲದಲ್ಲಿ ಜನ ಸಾಮಾನ್ಯರಿಗೆ ಸಿಗದಿರುವುದು, ಕೈಗಾರಿ–ಕೆಗೆ ದುಬಾರಿ ಬೆಲೆ ಉರುವಲು ಕಟ್ಟಿಗೆ ಖರೀದಿ ಮುಂತಾದ ಕಾರಣಗಳಿಂದ ಹಂಚು ಕೈಗಾರಿ–ಕೆ ಮುಚ್ಚುವ ಅನಿವಾರ್ಯ ದಯನೀಯ ಸ್ಥಿತಿ ನಿರ್ಮಾಣವಾಗಿದೆ. ಇತ್ತೀಚೆಗೆ ಕುಂದಾಪುರದಲ್ಲಿ ಎರಡು ಹಂಚು ಕಾರ್ಖಾನೆ ಮುಚ್ಚಲ್ಪಟ್ಟಿದೆ. ಈ ಎಲ್ಲ ಜ್ವಲಂತ ಸಮಸ್ಯೆಗಳನ್ನು ಪರಿಹರಿಸಲು ಸರಕಾರ ಮಧ್ಯ ಪ್ರವೇಶಿಸಿ ಸಕರಾತ್ಮಕವಾಗಿ ಸ್ಪಂದಿಸಬೇಕಾಗಿದೆ. ಕೈಗಾರಿಕೆ ಉಳಿಯುವಿಗಾಗಿ ಸರಕಾರದ ಪ್ರೋತ್ಸಾಹ, ಸಹಾಯ ಹಸ್ತ ನೀಡದಿರುವುದು ಹಂಚು ಕೈಗಾರಿಕೆ ಬಿಕ್ಕಟ್ಟಿಗೆ ಮೂಲ ಕಾರಣವಾಗಿದೆ.



ಹಂಚು ಕಾರ್ಮಿಕರು ದಿನದ ಕೆಲಸದ ಅವಧಿಯಲ್ಲಿ ಸೀಮಿತ ಕೇವಲ ಒಂದು ಟಾಸ್ಕ್ ಹಾಜರಿ ಕೆಲಸ ಮಾಡುವ ಸ್ಥಿತಿಗೆ ದೂಡಿದೆ. ಕೆಲವು ಹಂಚು ಕೈಗಾರಿಕೆಗಳಲ್ಲಿ ಮಾಲಕರು ಕಾರ್ಮಿಕ ಭವಿಷ್ಯ ನಿಧಿ, ಇ.ಎಸ್.ಐ.ಗೆ ಹಣ ಪಾವತಿಸದೆ ಬಾಕಿ ಇಟ್ಟಿರುವುದು, ಕಾರ್ಮಿಕ ನಿವೃತ್ತಿಯಾದಾಗ ಕಾನೂನು ಬದ್ಧ ಸವಲತ್ತು ಕೊಡುವುದಕ್ಕೆ ಮಾಲಕರು ಆತಂಕ ಒಡ್ಡುವುದು, ಲೇಆಫ್, ರಜಾ ಸಂಬಳಕ್ಕೆ ಸತಾಯಿಸುವುದು, ಕಾರ್ಮಿಕರ ಕೈ ಸಾಲ ಸೌಲಭ್ಯಕ್ಕೆ ಕಡಿವಾಣ ಇತ್ಯಾದಿ ಸಂಕಷ್ಟಕ್ಕೆ ಒಳಪಡುತ್ತಿದ್ದಾರೆ.

ಕೈಗಾರಿಕೆ ನಡೆಸಲಾಗದೆ ಬಿಕ್ಕಟ್ಟಿನಿಂದಾಗಿ ಮುಚ್ಚಿದ ಹಂಚು ಕೈಗಾರಿಕೆ ಮಾಲಕರು ತಮ್ಮ ಮೂಲಬಂಡವಾಳದ ವಹಿವಾಟನ್ನು ಇತರ ಕ್ಷೇತ್ರವಾದ ಭೂಮಿ ಖರೀದಿ ಮಾರಾಟ ವ್ಯವಹಾರ ದಂಧೆ, ಹೋಟೆಲ್ ಉದ್ಯಮಕ್ಕೆ ವರ್ಗಾವಣೆ ಮಾಡಿಕೊಂಡಿದ್ದು ತಮ್ಮ ಲಾಭದ ಪ್ರಮಾಣವನ್ನು ಉಳಿಸಿಕೊಂಡಿದ್ದಾರೆ. ಅಥವ ಹೆಚ್ಚಿಸಿಕೊಂಡಿದ್ದಾರೆ. ಆದರೆ ಬಡ ಹಂಚು ಕಾರ್ಮಿಕರು ಮಾತ್ರ ನಿರುದ್ಯೋಗಿಗಳಾಗಿ ಕುಟುಂಬ ಬೀದಿಪಾಲಾಗುತ್ತಿದೆ.

ಕೇಂದ್ರದ ಎನ್.ಡಿ.ಎ. ಸರಕಾರವು ಕಾರ್ಮಿಕ ವಿರೋಧಿ ಧೋರಣೆಗಳನ್ನು ಜಾರಿಗೆ ತರುತ್ತಿದ್ದು, ಕಾರ್ಮಿಕರಿಗೆ ನ್ಯಾಯಬದ್ಧ ಸೌಲಭ್ಯಗಳನ್ನು ಕಡಿತ ಮಾಡುವ ಪ್ರಯತ್ನ ನಡೆಸುತ್ತಿದೆ. ಕಾರ್ಮಿಕರ ಆದಾಯ ಮಿತಿ ರೂ.25,000 ಇರುವವರೆಗೆ ಇ.ಎಸ್.ಐ. ವೈದ್ಯಕೀಯ ಚಿಕಿತ್ಸೆ ಸೌಲಭ್ಯ ವಿಸ್ತರಣೆಗೆ ನಿಯಮಾವಳಿ ತಿದ್ದುಪಡಿ ಮಾಡಲಾಗಿದೆ. ಕಾರ್ಮಿಕ ಫಲಾನುಭವಿಗಳಿಗೆ 25,000 ಕಾರ್ಮಿಕರಿಗೆ ಈಗಿರುವ ಒಂದು ಆಸ್ಪತ್ರೆಯನ್ನು 1,00,000 ಜನರಿಗೆ ಹೆಚ್ಚಿಸಿ ಒಂದು ಆಸ್ಪತ್ರೆ ನಿಗದಿ ಮಾಡಲಾಗಿದೆ, ತಲಾ 700 ಕಾರ್ಮಿಕರಿಗೆ ಒಬ್ಬ ವೈದ್ಯರ ಸೇವೆಯನ್ನು ಈಗ 2,000 ಮಂದಿಗೆ ಒಬ್ಬ ವೈದ್ಯ ಎಂದು ತಿದ್ದುಪಡಿ ಮಾಡಲಾಗಿದೆ 2,000 ಕಾರ್ಮಿಕರ ಮಿತಿಗೆ ಒಂದು ಕಾರ್ಮಿಕ ವೈದ್ಯಕೀಯ ಚಿಕಿತ್ಸಾಲಯ (ಇ.ಎಸ್.ಐ.) ಬದಲಿಗೆ 3,000 ಕಾರ್ಮಿಕರ ಮಿತಿಗೆ ಏರಿಸಲಾಗಿದೆ– ಒಟ್ಟಾರೆ ದುಡಿಯುವ ವರ್ಗಕ್ಕೆ ಸರಕಾರದ ಅನುದಾನ ಸೌಲಭ್ಯ ಕಡಿತಗೊಳಿಸಿದ ಕೇಂದ್ರ ಸರಕಾರದ ಕಾರ್ಮಿಕ ವಿರೋಧಿ ನೀತಿಯನ್ನು ತೀವ್ರವಾಗಿ ವಿರೋಧಿಸಬೇಕಾಗಿದೆ. ಸರಕಾರ ತೀರಾ ಅನ್ಯಾಯ ಎಸಗಿದೆ ಎಂದು ಕೆ. ಶಂಕರ್ ಸುದೀರ್ಘ ವಿವರಗಳನ್ನು ನೀಡಿದರು.

ಉಡುಪಿ ಜಿಲ್ಲಾ ಹಂಚು ಕಾರ್ಮಿಕರ ಸಂಘದ ಪ್ರಧಾನ ಕಾರ್ಯದರ್ಶಿ ಎಚ್.ನರಸಿಂಹ ಚಟುವಟಿಕೆ ವರದಿ ಮಂಡಿಸಿದರು. ವಾರ್ಷಿಕ ಲೆಕ್ಕಪತ್ರ ಮಂಡಿಸಿದ ನಂತರ ಅದನ್ನು ಅನುಮೋದಿಸಲಾಯಿತು. ಸಂಘದ ಅ ಧ್ಯಕ್ಷ ವಿ.ನರಸಿಂಹ ಸಭೆಯ ಅ ಧ್ಯಕ್ಷತೆ ವಹಿಸಿದ್ದು ಅನಾರೋಗ್ಯದ ಕಾರಣ ಹಿರಿಯ ಕಾರ್ಮಿಕ ಮುಖಂಡ ಎಲ್.ಶೀನ ಅವರು ವಿ.ನರಸಿಂಹರವರ ಅನುಪಸ್ಥಿತಿಯಲ್ಲಿ ಅಧ್ಯಕ್ಷತೆ ವಹಿಸಿ ಕಲಾಪ ಮುಂದುವರಿಸಿದರು. ಸಿ.ಐ.ಟಿ.ಯು. ತಾಲೂಕು ಕಾರ್ಯದರ್ಶಿ ಸುರೇಶ ಕಲ್ಲಾಗರ, ಯು.ದಾಸ ಭಂಡಾರಿ, ಜಯಂತ, ಜಿ.ಡಿ.ಪಂಜು, ರಾಜೀವ ಶೆಟ್ಟಿ, ಡಿ.ಲಕ್ಷ್ಮಣ ವೇದಿಕೆಯಲ್ಲಿದ್ದರು.

ಉಡುಪಿ ಜಿಲ್ಲಾ ಹಂಚು ಕಾರ್ಮಿಕರ ಸಂಘದ ನೂತನ ಪದಾಧಿಕಾರಿ ವಿ.ನರಸಿಂಹ (ಅಧ್ಯಕ್ಷರು) ಬಾಲಕೃಷ್ಣ ಶೆಟ್ಟಿ, ಜಿ.ಡಿ.ಪಂಜು (ಉಪಾಧ್ಯಕ್ಷರು) ಎಚ್.ನರಸಿಂಹ (ಪ್ರಧಾನ ಕಾರ್ಯದರ್ಶಿ) ಡಿ. ಲಕ್ಷ್ಮಣ, ಗೋಪಾಲ

ಕಾಗೇರಿ (ಕಾರ್ಯದರ್ಶಿಗಳು) ಜಯಂತ (ಕೋಶಾಧಿಕಾರಿ) ಇವರು ಸರ್ವಾನು ಮತದಿಂದ ಆಯ್ಕೆಯಾದರು. ●

'ಆಡಳಿತ ಕನಿಷ್ಠ ಆಗದೆ, ಆಡಳಿತ ವಿಕೇಂದ್ರೀಕರಣ ಆಗಬೇಕು.' ಸಿಐಟಿಯು ಹಾವೇರಿ ಅಧ್ಯಯನ ಶಿಬಿರದಲ್ಲಿ

– ಡಾ.ಚಂದ್ರ ಪೂಜಾರಿ

'16ನೇ ಲೋಕಸಭಾ ಚುನಾವಣೆ ನಂತರ ಬಿಜೆಪಿಯದು ಗರಿಷ್ಠ ಸರ್ಕಾರವಾಗಿದೆ, ಆದರೆ ಅದು ಕನಿಷ್ಠ ಆಡಳಿತ ನಡೆಸುತ್ತಿದೆ.' ಎಂದು ಜಾನಪದ ವಿಶ್ವ ವಿದ್ಯಾಲಯದ ಪ್ರಾಧ್ಯಾಪಕರಾದ ಡಾ॥ ಚಂದ್ರ ಪೂಜಾರಿಯವರು ಹೇಳಿದರು. ಹಾವೇರಿಯಲ್ಲಿ ನಡೆದ ಸಿಐಟಿಯುನ ಜಿಲ್ಲಾ ಮಟ್ಟದ ಅಧ್ಯಯನ ಶಿಬಿರವನ್ನು ಉದ್ಘಾಟಿಸಿ ಮಾತನಾಡಿದ ಅವರು 'ಸರ್ಕಾರ ಬೇರೆ ಅಲ್ಲ ಆಡಳಿತ ಬೇರೆ ಅಲ್ಲ. ಈ ಘೋಷಣೆಯಲ್ಲಿ ಪಂಚಾಯತ್ ವ್ಯವಸ್ಥೆಗೆ ನೇರ ಸಂಬಂಧ ಇದೆ. ಆಡಳಿತ ಕನಿಷ್ಠ ಆಗದೆ, ಆಡಳಿತ ವಿಕೇಂದ್ರೀಕರಣ ಆಗಬೇಕು.' ಎಂದರು. 'ಶೇ. 70 ರಷ್ಟು ಕಾರ್ಮಿಕರು ಊಟಕ್ಕೆ ಪರದಾಡುತ್ತಿದ್ದಾರೆ, ಪ್ರಜಾಪ್ರಭುತ್ವದಲ್ಲಿ ಎಲ್ಲರಿಗೂ ರಾಜಕೀಯ ಪ್ರಜ್ಞೆ, ಕನಿಷ್ಠ ತಿಳುವಳಿಕೆ ಇರಬೇಕು. ನಮ್ಮ ಬದುಕಿನ ಪ್ರಶ್ನೆಗಳನ್ನು ತೀರ್ಮಾನಿಸಲು ರಾಜಕೀಯ ಬೇಕು. ನಮ್ಮ ಬ್ಯಾಂಕಿನ ಹಣಕಾಸಿನಲ್ಲಿ ಬಡವರ, ಶ್ರೀಮಂತರ ಪಾಲು ಎಷ್ಟು ಎಂಬುದನ್ನು ತಿಳಿಯಬೇಕಿದೆ. ಪಂಚಾಯತ್ ಕೆಲಸಕ್ಕೆ, ಪಾಠ ಮಾಡಲು ಶಿಕ್ಷಕರನ್ನು ಮತ್ತು ಇತರೆ ಕೆಲಸಗಳಿಗೆ ಗುತ್ತಿಗೆ ಆಧಾರದ ನೇಮಕಾತಿ ಮಾಡುತ್ತಿವೆ. ಇಂದಿನ ಮತ್ತು ಹಿಂದಿನ ಸರ್ಕಾರಗಳು. ಪಂಚಾಯತ್ ವ್ಯವಸ್ಥೆಯನ್ನು ಅಳವಡಿಸಿಕೊಂಡಿರುವುದರಲ್ಲಿ ಕೇರಳ 1 ನೇ ಸ್ಥಾನದಲ್ಲಿದೆ. ಉದ್ಯಮಿಗಳು ಮೆಡಿಕಲ್, ಇಂಜೀನಿಯರಿಂಗ್ ಕಾಲೇಜು ಆರಂಭಿಸಿದಷ್ಟು ಹಳ್ಳಿಗಳ ರಸ್ತೆ ಮಾಡುವುದಿಲ್ಲ, ಹಳ್ಳಿಗಳಲ್ಲಿ ಶಿಕ್ಷಣ ಕೇಂದ್ರಗಳನ್ನು ತೆರೆಯುವುದಿಲ್ಲ ಎಂದರು.

70 % ಜನತೆ ಕಷ್ಟದಲ್ಲಿದ್ದಾರೆ, ಒಳ್ಳೆಯ ರಸ್ತೆ, ಶಿಕ್ಷಣದ ಕೊರತೆ, ಉತ್ತಮ ಆರೋಗ್ಯ ಇಲ್ಲ. ಊಟದ ಕೊರತೆ, ಉದ್ಯೋಗದ ಕೊರತೆ ಇದೆ. ಮೂಲಭೂತ ಸೌಕರ್ಯಗಳಿಲ್ಲ. 5 ವರ್ಷಕ್ಕೊಮ್ಮೆ ಚುನಾವಣೆಯಲ್ಲಿ ರಾಜಕಾರಣಿಗಳು ಭಾಗವಹಿಸುವರು. ಅದರಲ್ಲಿ ಜಾತಿ, ಧರ್ಮದ ರಾಜಕಾರಣ ಅತೀ ಹೆಚ್ಚಾಗಿ ಕಾಣುವುದು. ಸಮಾಜದ ಕೆಳಸ್ತರದ ಜನರಿಗೆ ಅಪಾಯವಿದೆ. ಗರಿಷ್ಠ ಸರ್ಕಾರಗಳಿವೆ. ಆದರೆ ಆಡಳಿತ ಕನಿಷ್ಠವಾಗಿದೆ. ಕೆರಳದ ಪಂಚಾಯತಗಳಲ್ಲಿ ಜಿಲ್ಲಾ ಪಂಚಾಯತ, ತಾಲೂಕು ಪಂಚಾಯತ ಮತ್ತು ಗ್ರಾಮ ಪಂಚಾಯತಗಳು ಒಂದೇ ತಕ್ಕಡಿಯಲ್ಲಿವೆ. ಆದರೆ ಕರ್ನಾಟಕದಲ್ಲಿ ಕೆಳಗೆ ಗ್ರಾಮ ಪಂಚಾಯತ್, ನಂತರ ತಾಲೂಕು ಪಂಚಾಯತ್, ನಂತರ ಮೇಲೆ ಜಿಲ್ಲಾ ಪಂಚಾಯತ್‌ಗಳು ಕೆಲಸ ಮಾಡುತ್ತಿವೆ.' ಎಂದರು. ರಾಜ್ಯದಲ್ಲಿ ನಗರ ಪ್ರದೇಶಗಳು ಮತ್ತು ಹಳ್ಳಿಗಳಿಗೂ ವ್ಯತ್ಯಾಸ ಇಲ್ಲದಂತಾಗಿದೆ. ನಗರಗಳು ಅಭಿವೃದ್ಧಿಯಾಗಿಲ್ಲ, ಹಳ್ಳಿಗಳು ಅವುಗಳ ಹಳೆಯ ಸ್ಥಿತಿಗಳಿಂದ ಹೊರಬಂದಿಲ್ಲ ಎಂದು ವಿಷಾಧ ವ್ಯಕ್ತಪಡಿಸಿದರು. ಸಿಐಟಿಯು ಮುಖಂಡರಾದ ಬಿ.ಐ. ಈಳಗೇರ ಮಾತನಾಡಿದರು. ಸಿಐಟಿಯುನ ಜಿಲ್ಲಾ ಸಂಚಾಲಕರಾದ ನಾರಾಯಣ ಕಾಳೆ ಅಧ್ಯಕ್ಷೀಯ ಭಾಷಣ ಮಾಡಿದರು. ವೇದಿಕೆಯಲ್ಲಿ ಎಸ್‌ಎಫ್‌ಐ ಜಿಲ್ಲಾ ಅಧ್ಯಕ್ಷರಾದ ರೇಣುಕಾ ಕಹಾರ, ಅಂದಾನಪ್ಪ ಹೆಬಸೂರ, ವಿ.ಕೆ. ಬಾಳೀಕಾಯಿ, ಆರ್. ಎಚ್. ಆಯಿ, ವಿನಾಯಕ ಕುರುಬರ ಇದ್ದರು. ಎಂ. ಬಿ. ಬಾರ್ಕಿ ಕಾರ್ಯಕ್ರಮ ನಿರೂಪಿಸಿದರು. ●



ಎಸ್.ಎಫ್.ಐ ಹಾವೇರಿ ಜಿಲ್ಲಾ ಸಮಿತಿಯು ರಾಜ್ಯ ಸರಕಾರದ "ಖಾಸಗಿ ಶಾಲೆಗಳ ಶುಲ್ಕ ನಿಗದಿಯ ಕರಡು ವರದಿಯಲ್ಲಿನ ಅಪಾಯಗಳು" ಕುರಿತು ದುಂಡು ಮೇಜಿನ ಸಭೆಯು ಹಾವೇರಿಯ ಪ್ರವಾಸಿಮಂದಿರದ ಸಭಾಂಗಣದಲ್ಲಿ ನಡೆಯಿತ್ತು. ಎಸ್.ಎಫ್.ಐ ರಾಜ್ಯ ಉಪಾಧ್ಯಕ್ಷ ಬಸವರಾಜ ಪೂಜಾರ ವಿಷಯ ಮಂಡಿಸಿದರು. ಪ್ರಗತಿಪರ ಸಾಹಿತಿಗಳಾದ ಮಾಲತೇಶ ಅಂಗೂರ, ಸಿ.ಐ.ಟಿ.ಯು ಜಿಲ್ಲಾ ಸಂಚಾಲಕರಾದ ನಾರಾಯಣ ಕಾಳೆ, ಎಸ್. ಎಫ್.ಐ ಜಿಲ್ಲಾಧ್ಯಕ್ಷೆ ರೇಣುಕಾ ಕಹಾರ, ಜಿಲ್ಲಾ ಕಾರ್ಯದರ್ಶಿ ಸುಭಾಸ್.ಎಂ ಮಾತನಾಡಿದರು.

ಪ್ರಜಾಸತ್ತಾತ್ಮಕ ಪದವಿಧರ ವೇದಿಕೆಯ ಜಿಲ್ಲಾ ಮುಖಂಡರಾದ ಭಾಸ್ಕರ ಮುದೇನೂರ, ಇಡಾರಿ ಸಂಸ್ಥೆ ಮುಖ್ಯಸ್ಥರಾದ ಪರಿಮಳ ಜೈನ, ಅತಿಥಿ ಉಪನ್ಯಾಸಕರ ಸಂಘದ ಮುಖಂಡರಾದ ವಸಂತಗೌಡ ಪಾಟೀಲ, ಗ್ರಾ.ಪಂ.ನೌಕರ ಸಂಘದ ವಿ.ಕೆ.ಬಾಳಿಕಾಯಿ, ಡಿ.ವೈ.ಎಫ್.ಐ ಮುಖಂಡರಾದ ನಿಂಗಪ್ಪ ಆರೇರ ಹಾಗೂ ಪೋಷಕರು ಮಾತನಾಡಿ ಸರಕಾರದ ಈ ಆದೇಶವನ್ನು ಹಿಂಪಡೆಯಲು ಒತ್ತಾಯಿಸಿದರು. ಎಸ್.ಎಫ್.ಐ ನ ತಾಲೂಕು, ಜಿಲ್ಲಾ ಮುಖಂಡರು ಭಾಗವಹಿಸಿದ್ದರು ಹಾಗೂ ವಿವಿಧ ಸಂಘಟನೆಗಳ ಮುಖಂಡರು ಭಾಗವಹಿಸಿದ್ದರು. ●

ಕರ್ನಾಟಕದಲ್ಲಿ ಸ್ವಾತಂತ್ರ್ಯ ಚಳುವಳಿಯ.......

ಪುಟ 11 ರಿಂದ

ನಡೆಸಿದ ಹೋರಾಟ ದೇಶದ ಇತರೆಡೆಗಳಲ್ಲಿ ನಡೆದ ಹೋರಾಟದಂತೆಯೇ ನಡೆಯಿತು. ಪೇಟೆ ಮತ್ತು ಗ್ರಾಮಗಳಲ್ಲಿ ಪ್ರತಿಬಂಧಗಳನ್ನು ಮುರಿದು ಧ್ವಜಾರೋಹಣ, ಗ್ರಾಮಾಧಿಕಾರಿಗಳಲ್ಲಿ, ಪಟೇಲರುಗಳಿಗೆ ಖಾದಿ ಟೋಪಿ ಧರಿಸಲು ಒತ್ತಾಯ, ಸಭೆ ಮೆರವಣಿಗೆಗಳು, ಹೈಸ್ಕೂಲು ಕಾಲೇಜುಗಳಿಗೆ ಬಹಿಷ್ಕಾರ, ಕೋರ್ಟ್ ಕಚೇರಿಗಳಿಗೆ ಬಹಿಷ್ಕಾರ, ರಾಜೀನಾಮೆಗಳು, ಕಾರ್ಮಿಕರ ಮುಷ್ಕರಗಳು ಇವುಗಳಲ್ಲಿ ಒಂದು ತರ ನಡೆದ–ರೆ, ತಂತಿ ಕತ್ತರಿಸುವ, ಬೆಂಕಿ ಹಚ್ಚುವ, ರಿಕಾರ್ಡ್ ಸುಡುವ ಕೃತ್ಯಗಳೂ ನಡೆದವು.

ಮಹಾತ್ಮಾ ಗಾಂಧಿಯವರ ನೇತೃತ್ವದಲ್ಲಿ ನಡೆದ ಸ್ವಾತಂತ್ರ್ಯ ಚಳುವಳಿ ಬ್ರಿಟಿಷರ ವಿರುದ್ಧವಾಗಿಯೇ ಸೀಮಿತವಾಗಿತ್ತು. ವಿದೇಶೀ ಬಟ್ಟೆ ಬರೆಗಳಿಗೆ ಬಹಿಷ್ಕಾರ, ಚರಕದ ಮೂಲಕ ನೂಲು ತಯಾರಿ, ಶೆರೆ ಶೇಂದಿಗಳಿಗೆ ಬಹಿಷ್ಕಾರ, ಶೇಂದಿ ಗಿಡಗಳನ್ನು ಕಡಿಯುವುದು, ಉಪ್ಪು ಸತ್ಯಾಗ್ರಹ, ಆಡಳಿತೆಯ ವಿರುದ್ಧ ನಾನಾ ರೀತಿಯ ಬಹಿಷ್ಕಾರಗಳು ನಡೆಯುತ್ತಿದ್ದವು. ಅವುಗಳ ಮೂಲಕವೇ ರೈತರನ್ನೂ, ಕಾರ್ಮಿಕರನ್ನೂ ವಿದ್ಯಾರ್ಥಿಗಳನ್ನೂ ಚಳುವಳಿಗೆ ಸೇರಿ ಕೊಳ್ಳುವಂತೆ ಆಕರ್ಷಿಸಲಾಗುತ್ತಿತ್ತು. ರೈತರೂ– ಕಾರ್ಮಿಕರೂ ಸಾಮೂಹಿಕವಾಗಿ ಚಳುವಳಿಯಲ್ಲಿ ಭಾಗವಹಿಸಬೇಕಾದರೆ, ಅದು ಪರಿಣಾಮ ಕಾರಿಯಾಗಬೇಕಾದರೆ, ರೈತರ, ಭೂಮಿ–ಗೇಣಿ ಪ್ರಶ್ನೆ, ಕಾರ್ಮಿಕರ ಆರ್ಥಿಕ ಬೇಡಿಕೆಗಳ ಕುರಿತೂ ಸಮಿತಿಗಳಲ್ಲಿ ಚರ್ಚೆ ಮಾಡಿ ಸ್ವಾತಂತ್ರ್ಯ ಹೋರಾಟಗಳಲ್ಲಿ ಆ ಬೇಡಿಕೆಗಳನ್ನೂ ಮಂಡಿಸಿ ಪ್ರಚಾರಗೊಳಿಸಿ, ಸ್ವಾತಂತ್ರ್ಯ ಹೋರಾಟದ ಅಂಗವಾಗಿಯೇ ರೈತರ, ಕಾರ್ಮಿಕರ ಹೋರಾಟಗಳನ್ನು ಸೇರಿಸಿಕೊಳ್ಳಬೇಕೆಂದು ಕಮ್ಯುನಿಸ್ಟ್ ಪಕ್ಷ ಒತ್ತಾಯಿಸುತ್ತಲೇ ಬಂದಿತ್ತು. ಮೈಸೂರು ಸಂಸ್ಥಾನದ ಕಾರ್ಮಿಕ ಕೇಂದ್ರಗಳಲ್ಲಿ ಕಾಂಗ್ರೆಸ್ ಪ್ರಭಾವಶಾಲಿಯಾಗಿದ್ದರೂ ಕೂಡಾ, ಅಲ್ಲಿ ನಡೆದ ಸ್ವಾತಂತ್ರ್ಯ ಚಳುವಳಿ, ಜವಾಬ್ದಾರಿ ಸರಕಾರಕ್ಕಾಗಿ ನಡೆದ ಹೋರಾಟದಲ್ಲಿ ಕಮ್ಯುನಿಸ್ಟ್ ಮುಖಂಡರು ಕಾರ್ಮಿಕರ ಸಮಸ್ಯೆಗಳನ್ನೂ ಸೇರಿಸಿ ಹೋರಾಡಿದ್ದರಿಂದ, ಕಾಂಗ್ರೆಸ್ ಮುಖಂಡರು ಮಾಲಕರೊಂದಿಗೆ ಹೊಂದಾಣಿಕೆ ಮಾಡಿದಾಗಲೆಲ್ಲಾ ಅವರನ್ನು ತ್ಯಜಿಸಿ ಕಮ್ಯುನಿಸ್ಟ್ ಮುಖಂಡತ್ವವನ್ನು ಸ್ವೀಕರಿಸಿದ್ದ ಕಾರಣದಿಂದಲೇ ಹಲವಾರು ಕಾರ್ಮಿಕ ಕೇಂದ್ರಗಳಲ್ಲಿ ಕಮ್ಯುನಿಸ್ಟರು ತಮ್ಮ ಪ್ರಭಾವ ಉಳಿಸಿಕೊಳ್ಳಲು ಸಾಧ್ಯವಾಯಿತು. ಮಂಗಳೂರು ಜಿಲ್ಲೆಯಲ್ಲಿಯೂ ಕೆಂಬಾವುಟದ ಪ್ರಭಾವ ಉಳಿಸಿಕೊಳ್ಳಲು ಸಾಧ್ಯವಾಯಿತು. ಹಾಗೆಯೇ "ಉಳುವವನೇ ಭೂಮಿ ಒಡೆಯ", "ಮುಕ್ಕಾಲು ಪಾಲು ಗೇಣಿದಾರನಿಗೆ", "ಸಾವುಕಾರರ ಸಾಲ ರದ್ಧತಿ" ಬೇಡಿಕೆಗಳನ್ನು ಸ್ವಾತಂತ್ರ್ಯ ಚಳುವಳಿಯ ಜೊತೆಯಲ್ಲಿ ಸೇರಿ ಹೋರಾಡಿದ್ದರಿಂದಲೇ ಕಾರವಾರ, ಮಂಗಳೂರು ಬಿಜಾಪುರ, ಕೋಲಾರ, ತುಮಕೂರು, ಶಿವಮೊಗ್ಗ ಜಿಲ್ಲೆಗಳಲ್ಲಿ ರೈತ ಸಂಘ ಭದ್ರಗೊಳಿಸಲು ಸಾಧ್ಯವಾಯಿತು.

ಕೆಲವೇ ಕಮ್ಯುನಿಸ್ಟ್ ಮುಖಂಡರಿದ್ದರೂ ಕೂಡಾ ಕರ್ನಾಟಕದ ಸ್ವಾತಂತ್ರ್ಯ ಚಳುವಳಿಯಲ್ಲಿ ಕಾರ್ಮಿಕರೂ, ರೈತರೂ, ವಿದ್ಯಾರ್ಥಿಗಳೂ, ಸಕ್ರಿಯವಾಗಿ, ಪರಿಣಾಮಕಾರಿಯಾಗಿ ಪಾಲ್ಗೊಳ್ಳುವಂತೆ ಮಾಡಿದರು. ಈ ವಿಭಾಗದ ಜನರಲ್ಲಿ ರಾಜಕೀಯ ಜಾಗೃತಿ ಉಂಟುಮಾಡಿ ಸ್ವಾತಂತ್ರ್ಯನಂತರವೂ ತಮ್ಮ ಸಮಸ್ಯೆಗಳಿಗಾಗಿ ಹೋರಾಟ ಮುಂದುವರಿಸಲಿಕ್ಕೆ ಮಾರ್ಗದರ್ಶನ ನೀಡಿದರು. ●

ಕಾರ್ಮಿಕರು

ಕವನ

– ಬಂಡವಾಳಗಾರನ
ಪಳ ಪಳ ಹೊಳೆಯುವ
ಕಾರಿನ ಗಾಜಿನ ಮೇಲೆ
ದುಡಿಯುವನೊಬ್ಬನ ಬಾಡಿದ
ಮುಖದ ಬಿಂಬ ಗೋಚರಿಸಿತು.

– ಬಂಡವಾಳಗಾರನ
ಯಂತ್ರದ ಕೊಠಡಿಯಲ್ಲಿ
ಕಾರ್ಮಿಕನೊಬ್ಬನ ನರಳಿಕೆ ಧ್ವನಿ
ಕರ್ಕಶ ಶಬ್ಧಕೆ ವಿಲೀನವಾಗಿ
ಕೇಳಿಸಿತು.

– ಬಂಡವಾಳಗಾರನು
ಹಿಡಿದ ಗರಿಗರಿ ನೋಟಿನ
ಕಂತೆಯಲ್ಲಿ ದಣಿದವನೊಬ್ಬನ
ಬೆವರಿನ ಹಸಿ ಮಿಶ್ರಣದ
ವಾಸನೆಯೂ ಬೀರಿತು.

ಎದೆ ತಟ್ಟಿ ಹೇಳಬೇಕೆನಿಸಿದೆ
ಇಂತಹ ನುಡಿ
ಎಲ್ಲಾ ವೈಭವಗಳ ಹಿಂದೆ
ಮರೆಯಲ್ಲೇ ನಿಂತ ಶಕ್ತಿ ಕೇಂದ್ರ ನಮ್ಮವರೆ!
ಕಾರ್ಮಿಕರು ...... ಕಾರ್ಮಿಕರು ......

ಎನ್. ಮಹೇಶ್,
ಸೋಮವಾರಪೇಟೆ, ಕೊಡಗು.

("ಜನಶಕ್ತಿ"ಯ ಸ್ವಾತಂತ್ರೋತ್ಸವ ವಿಶೇಷ ಸಂ–ಚಿಕೆಗೆ ಬಂದಿದ್ದ ಕವನವಿದು. ಈ ಕವನ ವಿಶೇಷ ಸಂಚಿಕೆಯಲ್ಲಿ ಪ್ರಕಟವಾಗುವುದು ಆಕಸ್ಮಿಕವಾಗಿ ತಪ್ಪಿದೆ. ಹೀಗಾಗಿ ಇಲ್ಲಿ ಪ್ರಕಟಿಸಲಾಗಿದೆ.)

'ಮಿತವ್ಯಯ'ದ ಹೆಸರಿನಲ್ಲಿ......

ಪುಟ 9 ರಿಂದ

2013ರಲ್ಲಿ ನಮ್ಮ ದೇಶದಲ್ಲಿ ಮುಝಫ್ಫರ್‌ನಗರದ ಕೋಮುಗಲಭೆಗಳಲ್ಲಿ ಸಮಾಜ–ವಿರೋಧಿ ಶಕ್ತಿಗಳು ವಿವಿಧ ಕೋಮುಗಳ ನಡುವೆ ಸುಳ್ಳು ಮಾಹಿತಿ ಹರಡಲು ಸಾಮಾಜಿಕ ಮಾಧ್ಯಮವನ್ನು ವ್ಯಾಪಕವಾಗಿ ಬಳಸಿದರು ಎಂದೂ ಅವರು ತಮ್ಮ ಭಾಷಣದಲ್ಲಿ ಉದಾಹರಿಸಿದ್ದಾರೆ. ಮಾಹಿತಿ ತಂತ್ರಜ್ಞಾನ ಜನರು ಕೆಲಸ ಮಾಡುವ, ಪರಸ್ಪರ ಸಂಪರ್ಕಿಸುವ ಮತ್ತು ಸಂಭಾಷಿಸುವ ಪರಿಯಲ್ಲಿ ತೀವ್ರ ಬದಲಾವಣೆ ತಂದಿದೆ, ಅದು ಕ್ರಿಮಿನಲ್‌ಗಳ ಕೆಲಸದ ಸಂಸ್ಕೃತಿಯನ್ನೂ ಬದಲಿಸಿದೆ ಎಂದ ನಮ್ಮ ಗ್ರಹಮಂತ್ರಿಗಳು ಇಂತಹ ಸೈಬರ್ ಅಪರಾಧಗಳಿಗೆ ಸಂಬಂಧಪಟ್ಟಂತೆ ತಮ್ಮ ಕಾರ್ಯತಂತ್ರವನ್ನು ಬಲಗೊಳಿಸಬೇಕು ಎಂದು ಇಂಟರ್‌ಪೋಲ್‌ನ ಸದಸ್ಯರಿಗೆ ಕರೆ ನೀಡಿದ್ದಾರೆ.

ಆದರೆ ಈ ದಿಕ್ಕಿನಲ್ಲಿ ಭಾರತದಲ್ಲಿ ಅವರ ಸರಕಾರ ಏನು ಮಾಡಿದೆ ಎಂದೇನೂ ಹೇಳಿಲ್ಲ. ಬಹುಶಃ ಏನಾದರೂ ಸಕಾರಾತ್ಮಕವಾಗಿ ಮಾಡಿದ್ದರೆ ಎಐಡಿಡಬ್ಲ್ಯುಎ ಇಂತಹ ಮನವಿ ಸಲ್ಲಿಸಬೇಕಾದ ಅಗತ್ಯ ಬರುತ್ತಿರಲಿಲ್ಲವೇನೋ. ಮುಝಫ್ಫರ್‌ನಗರದ ಕೋಮುಗಲಭೆಗಳ ಆಪಾದಿತರನ್ನು ಸನ್ಮಾನಿಸಿರುವುದಂತೂ ಇಡೀ ದೇಶಕ್ಕೇ ತಿಳಿದಿದೆ. ●

JANASHAKTHI KANNADA VARA PATRIKE NOV 16, 2014 Price : Rs. 10/- RNI No. KARKAN /2006/17926 Posted on every Satuarday
"REGISTERD" Postal Reg. No. RNP/KA/BGS/2078/2013-15 Posted at MBC Bangalore GPO Licensed to Post without prepayment License No. WPP-283

ಬಳ್ಳಾರಿ : ಮಾಶಾಸನ ವಿಳಂಬ ಅಧಿಕಾರಿಗಳಿಗೆ ಚುರುಕು ಮುಟ್ಟಿಸಿದ

ಅಂಗವಿಕಲರು–ವಿಧವೆಯರ ಪ್ರತಿಭಟನೆ



ವಂಚಿತರಲ್ಲೇ ಮತ್ತಷ್ಟು ವಂಚಿತರಾದ ಜನರು ಅಂಗವಿಕಲರು, ವಿಧವೆಯರು ಮತ್ತು ವೃದ್ಧರು. ಇವರಿಗೆ ಸರಕಾರಗಳಿಂದ ಸಿಗುವ ಸೌಲಭ್ಯಗಳೂ ಕಡಿಮೆ. ಅದಕ್ಕೆ ಏನೇನೋ ಕೊಕ್ಕೆಗಳು. ಅಡೆತಡೆಗಳು. ಅಧಿಕಾರಿಗಳ ಅನಾದಾರ ವಿಳಂಬ ಧೋರಣೆ. ಇಂತಹ ಪ್ರವೃತ್ತಿಗಳಿಂದ ನೊಂದ ಬಳ್ಳಾರಿಯ ಅಂಗವಿಕಲರು, ವೃದ್ದರು, ವಿಧವೆಯರು ನಡೆಸಿದ ತೀವ್ರ ಪ್ರತಿಭಟನೆ ಅನಾದಾರ ತೋರುವ ಅಧಿಕಾರಗಳಿಗೆ ಚುರುಕು ಮುಟ್ಟಿಸಿದೆ. ಒಂದು ವರದಿ.

ಸರ್ಕಾರದ ಸಾಮಾಜಿಕ ಭದ್ರತಾ ಯೋಜನೆಯಡಿಯಲ್ಲಿ ಅಂಗವಿಕಲರಿಗೆ, ವಿಧವೆಯರಿಗೆ ಮತ್ತು ವೃದ್ಧರಿಗೆ ಪ್ರತಿ ತಿಂಗಳು ಸರ್ಕಾರ ನೀಡುವ ಮಾಶಾಸನದಲ್ಲಿ ಘನತೆಯಿಂದ ಬದುಕಲಿಕ್ಕಾಗದಿದ್ದರೂ ಕನಿಷ್ಟ ಅವಶ್ಯಕತೆಗಳನ್ನು ಪೂರೈಸಿಕೊಳ್ಳಲು ಸಹಾಯವಾಗಿದೆ. ಬಳ್ಳಾರಿ ತಾಲೂಕು ಮತ್ತು ಜಿಲ್ಲಾ ಆಡಳಿತದ ಸಂಪೂರ್ಣ ನಿರ್ಲಕ್ಷ್ಯತನ ಧೋರಣೆಯಿಂದಾಗಿ ಮೂರ್‍ನಾಲ್ಕು ತಿಂಗಳಾದರೂ ಮಾಶಾಸನ ಕೈಗೆ ಸಿಗದೇ ಫಲಾನುಭವಿಗಳು ತುಂಬಾ ಅತಂತ್ರರಾಗಿದ್ದಾರೆ. ಅಧಿಕಾರಿಗಳ ಈ ನಿರ್ಲಕ್ಷ್ಯತನದಿಂದ ಇಂತಹ ಹಲವು ಸರ್ಕಾರದ ಯೋಜನೆಗಳು ಸಮರ್ಪಕವಾಗಿ ಜಾರಿಯಾಗದೇ ಯೋಜನೆಗಳಿಂದ ಜನ ವಂಚಿತರಾಗುತ್ತಿದ್ದಾರೆ. ಸರಕಾರ ಈ ಕೂಡಲೇ ಸಮಸ್ಯೆಗಳನ್ನು ಬಗೆಹರಿಸಲು ಮುಂದಾಗಬೇಕು ಎಂದು ಕರ್ನಾಟಕ ರಾಜ್ಯ ಅಂಗವಿಕಲರ ಹಾಗೂ ಪಾಲಕರ ಒಕ್ಕೂಟದ ರಾಜ್ಯ ಪ್ರಧಾನ ಕಾರ್ಯದರ್ಶಿಯಾದ ಹೆಚ್. ಉಸ್ಮಾನ್‌ಬಾಷ ಆಗ್ರಹಿಸಿದರು. ಕರ್ನಾಟಕ ರಾಜ್ಯ ಅಂಗವಿಕಲರ ಹಾಗೂ ಪಾಲಕರ ಒಕ್ಕೂಟದ ನೇತೃತ್ವದಲ್ಲಿ ಮಾಶಾಸನ ವಿತರಣೆಯಲ್ಲಿ ಆಗುತ್ತಿರುವ ವಿಳಂಬ ಧೋರಣೆಯನ್ನು ಖಂಡಿಸಿ ಅಕ್ಟೋಬರ್ 27, 2014 ರಂದು ಬಳ್ಳಾರಿ ಜಿಲ್ಲಾಧಿಕಾರಿಗಳ ಕಛೇರಿ ಮುಂದೆ ನಡೆದ ಹೋರಾಟವನ್ನು ಉದ್ದೇಶಿಸಿ ಅವರು ಮಾತನಾಡಿದರು. ಫಲಾನುಭವಿಗಳಿಗೆ 'ಸ್ಮಾರ್ಟ್‌ಕಾರ್ಡ್' ನೀಡಿ ಬಿ.ಸಿ.(ಬ್ಯಾಂಕ್ ಪ್ರತಿನಿಧಿ)ಗಳ ಮೂಲಕ ಮಾಶಾಸನ ವಿತರಿಸಲು ಸರ್ಕಾರ ಖಾಸಗಿ ಸಂಸ್ಥೆಗೆ ಜವಾಬ್ದಾರಿ ನೀಡಿ ತನ್ನ ಹೊಣೆಗಾರಿಕೆಯಿಂದ ತಪ್ಪಿಸಿಕೊಂಡಿದ್ದರಿಂದ ಮತ್ತು ಮಾಶಾಸನ ವಿತರಿಸುವಲ್ಲಿ ಖಾಸಗಿ ಸಂಸ್ಥೆಯ ಸರಿಯಾದ ನಿರ್ವಹಣೆ ಇಲ್ಲದಿರುವುದರಿಂದ ಪ್ರತಿ ತಿಂಗಳು ಮಾಶಾಸನ ಫಲಾನುಭವಿಗಳಿಗೆ ಸಿಗುತ್ತಿಲ್ಲ. ಈ ಸಮಸ್ಯೆ ಬಗೆಹರಿಸುವುದು ಬಿಟ್ಟು ಅಧಿಕಾರಿಗಳು ಪರಸ್ಪರ ಇನ್ನೊಬ್ಬರ ಮೇಲೆ ಬೊಟ್ಟು ತೋರಿಸುತ್ತಿದ್ದಾರೆ. ಇದರಿಂದ ಇನ್ನೊಬ್ಬರ ಮೇಲಿನ ಅವಲಂಬನೆಯಲ್ಲಿ, ಅಸಹಾಯಕರಾಗಿ ಬದುಕುತ್ತಿರುವ ಅಂಗವಿಕಲರಿಗೆ, ವಿಧವೆಯರಿಗೆ ಮತ್ತು ವೃದ್ಧರಿಗೆ ತೀರಾ ಅನ್ಯಾಯವಾಗುತ್ತಿದೆ. ಆದ್ದರಿಂದ ಮಾಶಾಸನ ವಿತರಣೆ ಮತ್ತು ಸೌಲಭ್ಯ ಮಂಜೂರು ಮಾಡುವಲ್ಲಿ ಆಗುತ್ತಿರುವ ವಿಳಂಬ ಮತ್ತು ಅನ್ಯಾಯದ ಬಗ್ಗೆ ಎಚ್ಚೆತ್ತುಕೊಂಡು ಕೂಡಲೇ ಸಮಸ್ಯೆಗಳನ್ನು ಬಗೆಹರಿಸಬೇಕೆಂದು ಜಿಲ್ಲಾಧಿಕಾರಿಗಳನ್ನು ಒತ್ತಾಯಿಸಲಾಯಿತು.

ಹೆಚ್. ಉಸ್ಮಾನ್‌ಬಾಷ

ಈ ಸಂದರ್ಭದಲ್ಲಿ ಒಕ್ಕೂಟದ ರಾಜ್ಯ ಉಪಾಧ್ಯಕ್ಷ ಎನ್.ಕುಮಾರ ಮಾತನಾಡಿ ಮಾಶಾಸನ ಸೌಲಭ್ಯಕ್ಕಾಗಿ ತಾಲೂಕು, ನಾಡ ಕಛೇರಿಗಳಿಗೆ ಅರ್ಜಿ ಸಲ್ಲಿಸಿ ಐದಾರು ತಿಂಗಳುಗಳವರೆಗೂ ಹಲವಾರು ಬಾರಿ ಅಲೆದಾಡಿದರೂ ಅಧಿಕಾರಿಗಳು ಸಕಾಲದಲ್ಲಿ ಅರ್ಜಿ ವಿಲೇವಾರಿ ಮಾಡಿ ಸೌಲಭ್ಯ ಮಂಜೂರು ಮಾಡದೇ ಅನಗತ್ಯ ವಿಳಂಬ ಮಾಡುತ್ತಿದ್ದಾರೆ. ಸೌಲಭ್ಯ ಸಮರ್ಪಕವಾಗಿ ಸಿಗುವಂತೆ ಕ್ರಮ ಕೈಗೊಳ್ಳದಿದ್ದರೆ ಮತ್ತು ಅಧಿಕಾರಿಗಳು ಈ ರೀತಿ ವಿಳಂಬ ಧೋರಣೆ ಅನುಸರಿಸಿದರೆ ಮುಂದೆ ತೀವ್ರ ತರಹದ ಹೋರಾಟ ನಡೆಸಬೇಕಾಗುತ್ತದೆ ಎಂದು ಎಚ್ಚರಿಸಿದರು.

ಹೋರಾಟಕ್ಕೆ ಮಣಿದ ಜಿಲ್ಲಾಡಳಿತ

ಜಿಲ್ಲಾಧಿಕಾರಿಗಳು ಹೋರಾಟದ ಸ್ಥಳಕ್ಕೆ ಖುದ್ದು ಬಂದು ಮನವಿ ಸ್ವೀಕರಿಸಿ ಸಮಸ್ಯೆ ಬಗೆಹರಿಸುವವರೆಗೂ ಹೋರಾಟ ನಿಲ್ಲುವುದಿಲ್ಲ ಎಂದು ಹೋರಾಟ ನಿರತರು ಪಟ್ಟು ಹಿಡಿದರು. ಅಂಗವಿಕಲರ ಆಕ್ರೋಶದ ತೀವ್ರತೆ ಹೋರಾಟದ ಸ್ಥಳಕ್ಕೆ ಹೆಚ್ಚುವರಿ ಜಿಲ್ಲಾಧಿಕಾರಿ ವೆಂಕಟೇಶ್ ಆಗಮಿಸುವಂತೆ ಮಾಡಿತು. ಜಿಲ್ಲಾಧಿಕಾರಿಗಳು ಒಂದು ವಾರ ರಜೆಯ ಮೇಲಿದ್ದಾರೆ, ನಾನು ನಿಮ್ಮ ಬೇಡಿಕೆಯನ್ನು ಈಡೇರಿಸಲು ಕ್ರಮ ಕೈಗೊಳ್ಳುತ್ತೇನೆ ಮನವಿ ಕೊಡಿ ಎಂದರು. ಇದಕ್ಕೆ ಹೋರಾಟಗಾರರು ಒಪ್ಪದಿದ್ದಾಗ ಹೋರಾಟಗಾರರ ಒತ್ತಡಕ್ಕೆ ಮಣಿದು ತಕ್ಷಣದಲ್ಲಿಯೇ ತಹಸೀಲ್ದಾರ್, ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿ, ಮಾಶಾಸನ ವಿತರಿಸುವ ಖಾಸಗಿ ಸಂಸ್ಥೆಯ ಮುಖ್ಯಸ್ಥರಿಗೆ ಮತ್ತು ಲೀಡ್ ಬ್ಯಾಂಕ್‌ನ ವ್ಯವಸ್ಥಾಪಕರು ಜಿಲ್ಲಾಡಳಿತದ ಇನ್ನಿತರೆ ಅಧಿಕಾರಿಗಳನ್ನು ಎಲ್ಲಾ ಮಾಹಿತಿಯೊಂದಿಗೆ ಸಂಜೆ ಐದು ಗಂಟೆಗೆ ಸಭೆಗೆ ಬನ್ನಿ ಎಂದು ಮೊಬೈಲ್ ಫೋನ್ ಮೂಲಕ ಸೂಚನೆ ನೀಡಿದರು. ನಂತರ ಬೇಡಿಕೆಯ ಮನವಿ ಪತ್ರವನ್ನು ಜಿಲ್ಲಾಧಿಕಾರಿಗಳಿಗೆ ಸಲ್ಲಿಸಲಾಯಿತು.

ಒಂದು ವಾರದೊಳಗೆ ವಿಳಂಬವಾಗಿರುವ ಮಾಶಾಸನ ವಿತರಿಸಬೇಕು ಮತ್ತು ಪ್ರತಿ ತಿಂಗಳು ನಿಗದಿತ ಸಮಯಕ್ಕೆ ಮಾಶಾಸನ ವಿತರಿಸಬೇಕು. ಸಕಾಲದಲ್ಲಿ ಮಾಶಾಸನದ ಅರ್ಜಿಗಳನ್ನು ವಿಲೇವಾರಿ ಮಾಡಿ ಮಂಜೂರಾತಿ ಆದೇಶ ಪತ್ರ ಅಥವಾ ಸೌಲಭ್ಯ ರದ್ದು ಮಾಡಿದ ಬಗ್ಗೆ ಕಾರಣ ಸಮೇತ ಅರ್ಜಿದಾರರಿಗೆ ಪತ್ರ ನೀಡಬೇಕು. ಪ್ರತಿ ತಿಂಗಳು ಜಿಲ್ಲಾ ಮಟ್ಟದಲ್ಲಿ ಜಿಲ್ಲಾಧಿಕಾರಿಗಳ ನೇತೃತ್ವದ ಮತ್ತು ತಾಲೂಕು ಮಟ್ಟದಲ್ಲಿ ತಹಸೀಲ್ದಾರರು ಅಂಗವಿಕಲರ ಕುಂದುಕೊರತೆ ಸಭೆ ನಡೆಸಬೇಕು. ಹೋಬಳಿ ಮಟ್ಟದಲ್ಲಿ ಮಾಶಾಸನ ಅದಾಲತ್ ನಡೆಸಿ ಮಾಶಾಸನದ ಸಮಸ್ಯೆಗಳನ್ನು ತಕ್ಷಣದಲ್ಲಿಯೇ ಬಗೆಹರಿಸಬೇಕು. ಸ್ಮಾರ್ಟ್‌ಕಾರ್ಡ್ ರದ್ದುಪಡಿಸಿ ಅಂಚೆ ಕಛೇರಿ ಮೂಲಕ ಮಾಶಾಸನ ವಿತರಿಸಲು ಕ್ರಮ ಕೈಗೊಳ್ಳಬೇಕು. ಎಲ್ಲಾ ತಾಲೂಕುಗಳಲ್ಲಿ ಅಂಗವಿಕಲರಿಗೆ ವೈದ್ಯಕೀಯ ತಪಾಸಣಾ ಶಿಬಿರ ನಡೆಸಿ ಅಂಗವಿಕಲರ ಪ್ರಮಾಣ ಪತ್ರ ನೀಡಬೇಕು.

ಕ್ರಮ ಕೈಗೊಳ್ಳಲು ಅಧಿಕಾರಿಗಳಿಗೆ ಸೂಚನೆ ಮತ್ತು ಎಚ್ಚರಿಕೆ

ವಿವಿಧ ಅಧಿಕಾರಿಗಳು ಮತ್ತು ಅಂಗವಿಕಲರ ಒಕ್ಕೂಟದ ಮುಖಂಡರ ಜೊತೆ ಹೆಚ್ಚುವರಿ ಜಿಲ್ಲಾಧಿಕಾರಿ ವೆಂಕಟೇಶ್ ಮಾತುಕತೆ ನಡೆಸಿದರು. ಬೇಡಿಕೆಗಳಿಗೆ ಸಕರಾತ್ಮಕವಾಗಿ ಸ್ಪಂದಿಸಿದ ಹೆಚ್ಚುವರಿ ಜಿಲ್ಲಾಧಿಕಾರಿಗಳು ಒಕ್ಕೂಟದ ಮುಖಂಡರು ತಿಳಿಸಿರುವ ಸಮಸ್ಯೆಗಳನ್ನು ಕೂಡಲೆ ಬಗೆಹರಿಸಬೇಕು. ಸರ್ಕಾರದ ಆದೇಶ, ನಿಯಮಗಳಂತೆ ಸಭೆಗಳು ನಡೆಸಿ ಅಂಗವಿಕಲರ ಎಲ್ಲಾ ಯೋಜನೆಗಳು ಸಕಾಲದಲ್ಲಿ ಜಾರಿಗೆ ಬರಬೇಕು. ನಿರ್ಲಕ್ಷ್ಯ, ವಿಳಂಬ ನೀತಿ ಅನುಸರಿಸಿದರೆ ಸಂಬಂಧಿಸಿದ ಅಧಿಕಾರಿಗಳನ್ನು ಹೊಣೆಗಾರರನ್ನಾಗಿ ಮಾಡಿ ಸೂಕ್ತ ಕ್ರಮ ಕೈಗೊಳ್ಳಬೇಕಾಗುತ್ತದೆ ಎಂದು ಅಧಿಕಾರಿಗಳಿಗೆ ಎಚ್ಚರಿಸಿದರು. ಸ್ಮಾರ್ಟ್‌ಕಾರ್ಡ್ ರದ್ದು ಪಡಿಸುವುದು ಸರ್ಕಾರದಿಂದಾಗುವ ಕೆಲಸ. ಒಕ್ಕೂಟದಿಂದ ಈ ಬಗ್ಗೆ ಮನವಿ ಸಲ್ಲಿಸಿ. ಸರ್ಕಾರಕ್ಕೆ ಈ ಬಗ್ಗೆ ಮನವರಿಕೆ ಮಾಡಲು ಪ್ರಯತ್ನಿಸುತ್ತೇವೆ ಎಂದರು ಮತ್ತು ಯಾವುದೇ ಸಮಸ್ಯೆಗಳಿದ್ದರೆ ನೇರವಾಗಿ ಕಚೇರಿಗೆ ಬನ್ನಿ ತಕ್ಷಣ ಬಗೆ ಹರಿಸಲಾಗುವುದು ಎಂದು ಭರವಸೆ ನೀಡಿದರು.

ಅಂಗವಿಕಲರ ಒಕ್ಕೂಟದ ತಾಲೂಕು ಅಧ್ಯಕ್ಷ ಚಾಗನೂರು ನಾಗರಾಜ, ಜಿಲ್ಲಾ ಮುಖಂಡರಾದ ಅಂದ್ರಾಳ್ ನಾಗರಾಜ, ಸಾದಮ್ಮ, ವರಲಕ್ಷ್ಮಿ, ರಾಮು, ಎರಿಸ್ವಾಮಿ, ಸರಸ್ವತಿ ಇತರರು ಹೋರಾಟದ ನೇತೃತ್ವ ವಹಿಸಿದ್ದರು. ನಾಲ್ಕು ನೂರರಷ್ಟು ಜನ ಅಂಗವಿಕಲರು, ವಿಧವೆಯರು ಮತ್ತು ವೃದ್ಧರು ಸೇರಿ ನಗರದ ಗಾಂಧಿ ಭವನದಿಂದ ಮೆರವಣಿಗೆ ಮೂಲಕ ಜಿಲ್ಲಾಧಿಕಾರಿಗಳ ಕಚೇರಿಗೆ ಆಗಮಿಸುವ ಸಂದರ್ಭ ಗಡಗಿ ಚನ್ನಪ್ಪ ವೃತ್ತದಲ್ಲಿ ಅ ರ್ಧ ಗಂಟೆ ಕಾಲ ರಸ್ತೆ ತಡೆ ನಡೆಸಿ ಸರ್ಕಾರ ಮತ್ತು ಅಧಿಕಾರಿಗಳ ವಿರುದ್ಧ ಘೋಷಣೆಗಳನ್ನು ಕೂಗಿದರು ನಂತರ ಜಿಲ್ಲಾಧಿಕಾರಿಯ ಕಛೇರಿಗೆ ತೆರಳಿ ಪ್ರತಿಭಟನೆ ನಡೆಸಿ ಮನವಿ ಪತ್ರ ಸಲ್ಲಿಸಲಾಯಿತು.



JANASHAKTHI KANNADA VARA PATRIKE: Printed by G.V.SRIRAMA REDDY, EMS Bhavana, No.37/A, 8th Cross, Mahalakshmi Layout, BANGALORE-560086 Published by: G.V.SRIRAMA REDDY EMS Bhavana, No.37/A, 8th Cross, Mahalakshmi Layout, BANGALORE-560086, Karnataka on behalf of / owned by COMMUNIST PARTY OF INDIA (MARXIST) and Printed at : Kriya Prakashana, No. 12, 18th Cross, Sampangirama Nagar, Bangalore 560027 Karnataka(State). and Published at BANGALORE. EMS Bhavana, No.37/A, 8th Cross, Mahalakshmi Layout, BANGALORE-560086 . Editor NITHYANANDASWAMI EMS Bhavana, No.37/A, 8th Cross, Mahalakshmi Layout, BANGALORE-560086 Editor: NITHYANANDASWAMI